ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್., ಪದವಿಯ ಸಂಪ್ರಬಂಧ

'ಕನ್ನಡ ಕಾವ್ಯಗಳಲ್ಲಿ ಬಾಹುಬಲಿ - ಒಂದು ಅಧ್ಯಯನ'

ಸಂಶೋಧಕ ವಿದ್ಯಾರ್ಥಿ :

ಇಂದ್ರೇಶ್ ಬಿ. ಎಸ್.

ಮಾರ್ಗದರ್ಶಕರು :


ಡಾ. ಜಿ. ಎಚ್. ಗೋಪಾಲಕೃಷ್ಣಯ್ಯ

ಎಂ. ವಿ. ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು.

2008



ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್., ಪದವಿಯ ಸಂಪ್ರಬಂಧ

'ಕನ್ನಡ ಕಾವ್ಯಗಳಲ್ಲಿ ಬಾಹುಬಲಿ - ಒಂದು ಅಧ್ಯಯನ'

ಸಂಶೋಧನ ವಿದ್ಯಾರ್ಥಿ :

ಇಂದ್ರೇಶ್ ಡಿ. ಎಸ್.

ಮಾರ್ಗದರ್ಶಕರು :

ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ

ಎಂ. ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು.

2008

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007 - 08 ನೇ ಸಾಲಿನ ಎಂ. ಫಿಲ್., ಪದವಿಗಾಗಿ **'ಕನ್ನಡ ಕಾವ್ಯಗಳಲ್ಲಿ ಬಾಹುಬಲಿ - ಒಂದು ಅಧ್ಯಯನ'** ಎಂಬ ಸಂಪ್ರಬಂಧವನ್ನು **ಇಂದ್ರೇಶ್ ಡಿ. ಎಸ್.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೂ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ :

ಕೆ. ಎಲ್. ಗೋಪಾಲಕೃಷ್ಣಯ್ಯ.

ದಿನಾಂಕ : 04/11/2008
ಸ್ಥಳ : ಬೆಂಗಳೂರು

(ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ)

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007 - 08 ನೇ ಸಾಲಿನ ಎಂ. ಫಿಲ್., ಪದವಿಗಾಗಿ **'ಕನ್ನಡ ಕಾವ್ಯಗಳಲ್ಲಿ ಬಾಹುಬಲಿ - ಒಂದು ಅಧ್ಯಯನ'** ಎಂಬ ಸಂಪ್ರಬಂಧವನ್ನು **ಡಾ. ಕೆ. ಎಲ್. ಗೋಪಾಲಕೃಷ್ಣಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೂ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ :

Indresh

(ಇಂದ್ರೇಶ ಬಿ. ಎಸ್.)

ದಿನಾಂಕ : 04/11/2008
ಸ್ಥಳ : ಬೆಂಗಳೂರು

ಪರಿವಿಡಿ

ಅಧ್ಯಾಯಗಳು

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ಶ್ರೇಯ ಸನ್ನಿಧಿಗೆ ಕೃತಿ ಪುಷ್ಪಾಂಜಲಿ ಅರ್ಪಿಸಿದ ಕವಿಗಳಲ್ಲಿ ಜೈನರೇ ಪ್ರಥಮರು. ಜೈನ ಕವಿಗಳು ತಮ್ಮ ಧರ್ಮದ ಅನೇಕ ಮಹಾ ಪುರುಷರ ಕಥೆಗಳನ್ನು ತಮ್ಮ ಕಾವ್ಯದ ಕಥಾವಸ್ತುವಾಗಿ ಆಯ್ದುಕೊಂಡಿದ್ದಾರೆ. ಆ ಶ್ರೇಷ್ಠ ವ್ಯಕ್ತಿಗಳ ಜೀವನ ಕಥೆಯ ಸಾರವನ್ನು ವಿವರಿಸುತ್ತಾರೆ. ಜೈನ ಧರ್ಮದಲ್ಲಿ 'ತ್ರಿಶಷ್ಟಿ ಶಲಾಕ ಪುರುಷರು' ಎಂದು ಅರವತ್ತಮೂರು ಜನರನ್ನು ಗುರುತಿಸಲಾಗಿದೆ. ಅವರಲ್ಲಿ ಇಪ್ಪತ್ತಾನಾಲ್ಕು ಜನ ತೀರ್ಥಂಕರರು ಹಾಗೂ ಹನ್ನೆರಡು ಜನ ಚಕ್ರವರ್ತಿಗಳು ಇದ್ದಾರೆ. ಈ ಇಪ್ಪತ್ತನಾಲ್ಕು ಜನ ತೀರ್ಥಂಕರರ ಜೀವನ ಅವರ ಪೂರ್ವ ಜನ್ಮದ ಭವಾವಳಿಗಳ ಕತೆಗಳನ್ನು ಒಳಗೊಂಡ ಅನೇಕ ಕಾವ್ಯಗಳು ಜೈನಧರ್ಮದಲ್ಲಿ ರಚನೆಯಾಗಿವೆ.

ಪ್ರಾಚೀನ ಕಾಲದಿಂದಲೂ ಹಲವು ಮತಧರ್ಮಗಳಿಗೆ ತವರು ನೆಲೆಯಾಗಿರುವ ಕನ್ನಡ ನಾಡು, ಶ್ರೇಷ್ಠ ಶಿಲ್ಪಕಲಾಕೃತಿಗಳ ಗಣಿ. ಶ್ರವಣಬೆಳಗೊಳದಲ್ಲಿ ಒಂದು ಸಾವಿರ ವರ್ಷದ ಹಿಂದೆಯೆ ನಿರ್ಮಾಣವಾಗಿರುವ ಸುಮಾರು ಐವತ್ತೇಳು ಅಡಿ ಎತ್ತರದ ಗೋಮ್ಮಟೇಶ್ವರ ಏಕ ಶಿಲಾ ವಿಗ್ರಹವು ಧಾರ್ಮಿಕ ಮನೋಧರ್ಮದವರ, ಕವಿಗಳ, ಕಲಾಪ್ರಿಯರ ಮನಸ್ಸನ್ನು ಸೂರೆಗೊಳ್ಳುತ್ತದೆ. ಗೋಮ್ಮಟೇಶ್ವರನ ಮತ್ತೊಂದು ಹೆಸರು ಬಾಹುಬಲಿ. ಜಗತ್ತಿನ ಪ್ರತಿಯೊಂದು ಭಾಷೆಯು ಪ್ರತಿಯೊಂದು ಧರ್ಮವು ಮಹಾನ್ ಚೇತನಗಳ ವೃತ್ತಾಂತವನ್ನು ತಿಳಿಸಿಕೊಡುತ್ತವೆ. ಇಂತಹ ವೃತ್ತಾಂತಗಳಲ್ಲಿ ಮನಸ್ಸನು ಸೆಳೆಯುವುದು ಬಾಹುಬಲಿಯದು. ಜೈನ ಧರ್ಮದಲ್ಲಿ ಅತ್ಯಂತ ಶ್ರೇಷ್ಠತೆಯನ್ನು ಪಡೆದುಕೊಂಡು ದೈವತ್ವದ ಹಿನ್ನೆಲೆಯಲ್ಲಿ ಪೂಜಿಸಲ್ಪಡುತ್ತಿದ್ದರು. ಈ ಬಾಹುಬಲಿಯನ್ನು ಕನ್ನಡದ ಕವಿಗಳು ತಮ್ಮ ಕಾವ್ಯ ಕವಿತೆಗಳಲ್ಲಿ ಕಥಾ ವಸ್ತುವಾಗಿಸಿಕೊಂಡು ಅನೇಕರ ಮನಸೆಳೆದಿದ್ದಾರೆ.[1]

ಜಿನಸೇನಾಚಾರ್ಯರ ಪೂರ್ವಪೂರಾಣ ಹಾಗೂ ಪಂಪನ 'ಆದಿಪುರಾಣ', ಚಾವುಂಡರಾಯ ಪುರಾಣಗಳಲ್ಲಿ ಬಾಹುಬಲಿಯ ಪಾತ್ರವನ್ನು ಒಳಗೊಂಡಂತೆ ರಚಿತವಾಗಿವೆ. ಈ ಬಾಹುಬಲಿಯ ಪಾತ್ರವನ್ನು ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯದಲ್ಲಿ, ಉತ್ತರಕಾಲಿನ ಕಾವ್ಯಗಳು ಹಾಗೂ ಆಧುನಿಕ ಕನ್ನಡದ ಕವಿಗಳಾದ ಕುವೆಂಪು, ಪು.ತೀ.ನ., ಸು.ರಂ.ಎಕ್ಕುಂಡಿ, ಚನ್ನವೀರ ಕಣವಿ, ಜಿ. ಎಸ್. ಶಿವರುದ್ರಪ್ಪ ಮುಂತಾದ ಕವಿಗಳ ಕವಿತೆಗಳಲ್ಲಿ

ಬಾಹುಬಲಿ ಮೂರ್ತಿಯ ವರ್ಣನೆಯನ್ನು ತಮ್ಮದೇ ಶೈಲಿಯಲ್ಲಿ ತಂದಿದ್ದಾರೆ. ಬಾಹುಬಲಿ ಮೂರ್ತಿಯ ಬಗ್ಗೆ ಪ್ರಾಚೀನರ ಹಾಗೂ ಆಧುನಿಕರ ಕವಿಗಳವರೆಗೂ ಕವಿತೆಗಳ ಕೆಲವು ಭಾಗಗಳನ್ನು ಇಲ್ಲಿ ವಿವರಿಸಲಾಗಿದೆ:

ಪಂಪ ಕವಿಯು ಕನ್ನಡದ ಆದಿಕವಿ ಎಂಬ ಹೆಗ್ಗಳಿಕೆಯನ್ನು ಪಡೆದಿದ್ದಾನೆ. "ಆದಿಪುರಾಣ" ಕಾವ್ಯದಲ್ಲಿ ಭವಾವಳಿಗಳು ಮನುಷ್ಯ ವ್ಯಕ್ತಿತ್ವದ ಸಂಕೀರ್ಣ ಮಜಲುಗಳನ್ನು ದರ್ಶಿಸುತ್ತವೆ ಹಾಗೂ ಅವುಗಳ ವರ್ಗಾವಣೆಯ ಸಂಕ್ರಮಣ, ತಲ್ಲಣ, ಸಂಭ್ರಮಗಳ ದಾಖಲು ಮಾಡುತ್ತವೆ. ಆದಿನಾಥನ ಕಥೆಯೊಂದಿಗೆ ಆತನ ಮಕ್ಕಳಾದ ಭರತ ಬಾಹುಬಲಿಯರ ಪ್ರಸಂಗದ ಮೂಲಕ ಪ್ರಭುತ್ವ ಮತ್ತು ವೈರಾಗ್ಯಗಳ ಮುಖಾಮುಖಿಯನ್ನು ಅದ್ಭುತ ರೂಪಕವಾಗಿ 'ಆದಿಪುರಾಣ' ಕಾವ್ಯ ಕಟ್ಟಿಕೊಡುತ್ತದೆ. ಪ್ರಭುತ್ವವನ್ನು ವೈರಾಗ್ಯವು ಗೆಲ್ಲುವ ದಾರ್ಶನಿಕ ದೃಷ್ಟಿಯಿಂದ ಭರತನನ್ನು ಬಾಹುಬಲಿಯು ಯುದ್ದದಲ್ಲಿ ಗೆದ್ದು ವೈರಾಗ್ಯ ಮೂರ್ತಿಯಾಗುತ್ತಾನೆ. ಆದಿಪುರಾಣ ಕಾವ್ಯದಲ್ಲಿ ಪಂಪನು ಬಾಹುಬಲಿಯ ಪಾತ್ರವನ್ನು ತನ್ನ ಕಾವ್ಯದಲ್ಲಿ ತರುವಲ್ಲಿ ಕವಿ ಬಳಸಿರುವ ಬಾಹುಬಲಿಯ ಕಥೆಯ ವಸ್ತು ವಿನ್ಯಾಸ, ಈ ಪ್ರಸಂಗದ ವರ್ಣನೆ, ಕವಿಯ ತಾತ್ವಿಕ ದೃಷ್ಟಿಯ ಮನೋಭಾವವನ್ನು ನೋಡುವುದು ಈ ಅಧ್ಯಯನದ ಉದ್ದೇಶವಾಗಿದೆ. [2]

ಜೈನ ಧರ್ಮದಲ್ಲಿ ಎರಡು ಪಂಗಡಗಳಿವೆ. ಅವು 'ಶ್ವೇತಾಂಬರ' ಮತ್ತು 'ದಿಗಂಬರ'. ಈ ಪಂಗಡಗಳು ಜೈನ ಧರ್ಮದ ಕಥಾ ಪರಂಪರೆಯಲ್ಲಿ ಅವರು ತಮ್ಮದೇ ರೀತಿಯಲ್ಲಿ ಬಾಹುಬಲಿಯ ಕಥೆಯನ್ನು ವಿವರಿಸುತ್ತವೆ. ಈ ಕಥಾ ಭಾಗವು ಜೈನ ಧರ್ಮದ ಕತೆಯನ್ನು ತಿಳಿಸುವ ಮೂಲಕ ಜೈನ ಮೂರ್ತಿಯಾದ ಬಾಹುಬಲಿಯ ನಿರ್ಮಾಣದ ಕಾಲ, ವಿವರಗಳ ಬಗ್ಗೆ ತಿಳಿಸುವುದರೊಂದಿಗೆ ಬಾಹುಬಲಿ ಮೂರ್ತಿಯ ಅಳತೆಯ ಕೆತ್ತನೆಯ ವಿವರ ಗುಣ ಸ್ವಭಾವವನ್ನು ಕಿರಿದಾಗಿ ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಜೈನ ಸಂಪ್ರದಾಯದ ತೀರ್ಥಂಕರರ ಬಗೆಗಿನ ಕೇಂದ್ರ ವಿಚಾರಗಳು ನಿರೂಪಿತವಾಗಿವೆ. ಜೈನ ಧರ್ಮವದರು ತಮ್ಮದೇ ದೃಷ್ಟಿಯಲ್ಲಿ ಬಾಹುಬಲಿಯ ಮೂರ್ತಿಯನ್ನು ತಮ್ಮ ಆರಾಧ್ಯ ದೈವವಾಗಿಸಿರುವ ಸಂಗತಿಯ ನಿರೂಪಣೆ ಮಾಡಲಾಗಿದೆ.

ಹದಿನಾರನೇ ಶತಮಾನದಲ್ಲಿ ಜೀವಿಸಿದ್ದ ಕವಿ ರತ್ನಾಕರ ವರ್ಣಿಯು ತನ್ನ 'ಭರತೇಶ ವೈಭವ' ಎಂಬ ಕಾವ್ಯದಲ್ಲಿ ಭರತನನ್ನು ಕಾವ್ಯದ ನಾಯಕನನ್ನಾಗಿ ಮಾಡಿಕೊಂಡು ಬಾಹುಬಲಿಯ ಪಾತ್ರವನ್ನು ಗೌಣಗೊಳಿಸಿರುವ ಯುದ್ಧ ಸಂದರ್ಭದ ಪ್ರಸಂಗವನ್ನು, ಭರತನಿಂದ

ಬಾಹುಬಲಿಯನ್ನು ಕುರಿತು ಕವಿ ಆಡಿಸುವಂತಹ ಮಾತುಗಳ ಉಪಯುಕ್ತ ಸಾರವನ್ನು ಈ ಪ್ರಬಂಧದಲ್ಲಿ ನಿರೂಪಿಸಲಾಗಿದೆ. ಭರತನಿಗೆ ಕವಿಯು ಎಲ್ಲಾ ಸುಖ ಭೋಗಗಳನ್ನು ನೀಡಿ ಯೋಗ - ಭೋಗಗಳ ಸಮನ್ವಯವನ್ನು ತಂದಿರುವ ಸನ್ನಿವೇಶವನ್ನು ಈ ಪ್ರಬಂಧದಲ್ಲಿ ನಿರೂಪಿಸಲಾಗಿದೆ.

ಜಿನಸೇನರ ಮತ್ತು ಪಂಪ ಕವಿಯ ಕಾವ್ಯ ರಚನೆಯಲ್ಲಿ ಇರುವ ಭರತ - ಬಾಹುಬಲಿಯರ ಯುದ್ಧ ಸಂದರ್ಭವನ್ನು ಉತ್ತರಕಾಲಿನ ಕಾವ್ಯಗಳಾದ ಚಾವುಂಡರಾಯನ ಆದಿಪುರಾಣ ಕಥೆಯ ಭಾಗದಲ್ಲಿ, ಹಸ್ತಿ ಮಲ್ಲನ 'ಪೂರ್ವ ಪುರಾಣ', ನಾಗರಾಜನ 'ಪುಣ್ಯಾಸ್ರವದೊಳಗಿನ ಆಧೀಶ್ವರನ ಕಥೆ' ಶಾಂತಿ ಕೀರ್ತಿಯ 'ಪುರದೇವ ಚರಿತ' ಹಾಗೂ ಬೊಮ್ಮಣ್ಣನ 'ಆದಿ ಪರಮೇಶ್ವರ ಯಕ್ಷಗಾನ' ಎಂಬ ಕಾವ್ಯಗಳು ಬರುವ ಬಾಹುಬಲಿಯ ಪಾತ್ರವನ್ನು ಚಿತ್ರಿಸಿದ್ದಾರೆ. ಇವರು ತಮ್ಮದೇ ರೀತಿಯಲ್ಲಿನ ಜೈನರ ದಿಗಂಬರ ಮತ್ತು ಶ್ವೇತಾಂಬರ ಸಂಪ್ರದಾಯದಂತೆ ಚಿತ್ರಿಸಿರುವ ಸಂಗತಿಯಲ್ಲಿ ಬಾಹುಬಲಿಯ ಪ್ರಸಂಗವನ್ನು ಒಳಗೊಂಡ ಸಂದರ್ಭವನ್ನು ಈ ಸಂಪ್ರಭಂದದ ಸ್ವರೂಪವಾಗಿದೆ. [3]

ಕನ್ನಡ ಸಾಹಿತ್ಯದ ಶ್ರೇಷ್ಠ ಕವಿಗಳಲ್ಲಿ ಪ್ರಮುಖರಾದ ಪಂಪ ಮತ್ತು ರತ್ನಾಕರ ವರ್ಣಿಯರು ತಮ್ಮ ಕಾವ್ಯಗಳಾದ 'ಆದಿಪುರಾಣ' ಮತ್ತು 'ಭರತೇಶ ವೈಭವ' ಕಾವ್ಯಗಳಲ್ಲಿ ಬರುವಂತಹ ಬಾಹುಬಲಿಯ ಪಾತ್ರದ ಸಂದರ್ಭವನ್ನು ನೋಡಿದರೆ ಆದಿಕವಿಯಾದ ಪಂಪನು ತನ್ನ ಕಾವ್ಯದಲ್ಲಿನ ಮೂಲ ಕಥಾವಸ್ತುವಾಗಿ ತೀರ್ಥಂಕರರಲ್ಲಿ ಮೊದಲನೆಯವನಾದ ಆದಿನಾಥನ ಕಥೆಯನ್ನು ನಿರೂಪಿಸಿದ್ದಾನೆ. ಹಾಗೂ ಪುರದೇವನ ಪೂರ್ವ ಜನ್ಮಾಂತರದ ಕಥೆಗಳೊಂದಿಗೆ ಅವನ ಮಕ್ಕಳಾದ ಭರತ ಮತ್ತು ಬಾಹುಬಲಿಯರ ಕಥೆಯನ್ನು ತನ್ನ ಕೊನೆಯ ಮೂರು ಆಶ್ವಾಸಗಳಲ್ಲಿ ತಂದಿರುವುದು ಸಹಜವಾಗಿದೆ. ಅಲ್ಲಿ ಭರತ ಬಾಹುಬಲಿಯರ ಯುದ್ಧ ಸನ್ನಿವೇಶವನ್ನು, ಬಾಹುಬಲಿಯ ಪಾತ್ರವನ್ನು ವೈಭವದ ಒಂದು ಬೃಹತ್ ಚಿತ್ರಣವಾಗಿಸಿದ್ದಾನೆ. ಬಾಹುಬಲಿಯನ್ನು ಶ್ರೇಷ್ಠ ವ್ಯಕ್ತಿಯಾಗಿಸುವಲ್ಲಿ ಪಂಪನು ಮಾಡಿರುವ ವಸ್ತು ವಿನ್ಯಾಸ, ವರ್ಣನಾಶೈಲಿ ಹಾಗೂ ಬಾಹುಬಲಿಯನ್ನು ಯೋಗ ಮೂರ್ತಿಯಾಗಿ ಪಂಪನು ಚಿತ್ರಿಸಿರುವ ಸಂಗತಿಯನ್ನು ಇಲ್ಲಿ ನಿರೂಪಿಸಲಾಗಿದೆ.

ರತ್ನಾಕರವರ್ಣಿಯು 'ಭರತೇಶ ವೈಭವ' ಕಾವ್ಯದಲ್ಲಿ ತನ್ನ ಭರತನನ್ನು ಶ್ರೇಷ್ಠನಾಗಿಸಿ ಪಂಪನ ಬಾಹುಬಲಿಯನ್ನು ಕುಬ್ಜನಾಗಿಸಿದ್ದಾನೆ. ಕೆಲವು ಸಂದರ್ಭದಲ್ಲಿ ಬಾಹುಬಲಿಯನ್ನು

ಕಲಿಯುಗ ಮದನ ಕಾಮದೇವ ಎಂದು ಚಿತ್ರಿಸಿದ್ದಾನೆ. ಯುದ್ಧ ಪ್ರಸಂಗದ ಸಮಯದಲ್ಲಿ ಯುದ್ಧಕ್ಕೆ ಸಿದ್ಧನಾಗಿ ನಿಂತಿದ್ದ ಬಾಹುಬಲಿಯನ್ನು ಕುರಿತು ಭರತನಿಂದ ಉಪದೇಶದ ಮಾತುಗಳನ್ನು ಆಡಿಸಿದ್ದಾನೆ. ಈ ಮಾತುಗಳು ಬಾಹುಬಲಿಯು ಅಣ್ಣನೊಂದಿಗೆ ಯುದ್ದವನ್ನು ಮಾಡಲು ಒಪ್ಪದೆ ದೀಕ್ಷೆಯನ್ನು ಪಡೆಯುವಂತೆ ಮಾಡುತ್ತವೆ. ಈ ಸಂದರ್ಭದಲ್ಲಿ ಭರತನಿಂದ ಬಂದಂತಹ ಹೊಗಳಿಕೆಯ ಮಾತುಗಳು ಯಾವುದು ಎಂಬುದನ್ನು ಪಂಪ ಮತ್ತು ರತ್ನಾಕರನ ಕಾವ್ಯಗಳಲ್ಲಿ ಕವಿಗಳು ಮಾಡಿಕೊಂಡಿರುವ ಸಾಮ್ಯತೆ, ವ್ಯತ್ಯಾಸ ಹಾಗೂ ಅವರ ತಾತ್ವಿಕ ದೃಷ್ಟಿಗಳನ್ನು ವಿವರವಾಗಿ ತಿಳಿಸಲಾಗಿದೆ.

ನನ್ನ ಈ ಅಧ್ಯಯನ ಪ್ರಬಂಧದಲ್ಲಿ ಜೈನ ಧರ್ಮದ ಶ್ರೇಷ್ಠ ವ್ಯಕ್ತಿಯಾದ ಬಾಹುಬಲಿಯನ್ನು ಕುರಿತು ಜೈನ ಧರ್ಮಿಯರ ನಿಲುವು ಜೈನ ಧರ್ಮದ ಎರಡು ಪಂಗಡಗಳಲ್ಲಿರುವ ಬಾಹುಬಲಿಯ ಕಥೆ. ಕನ್ನಡ ಸಾಹಿತ್ಯದ ಶ್ರೇಷ್ಠ ಜೈನ ಕವಿಗಳಾದ ಪಂಪ ಮತ್ತು ರತ್ನಾಕರವರ್ಣಿಯ 'ಆದಿ ಪುರಾಣ' ಮತ್ತು 'ಭರತೇಶ ವೈಭವ' ಕಾವ್ಯದಲ್ಲಿನ ಬಾಹುಬಲಿಯ ಪಾತ್ರ ಚಿತ್ರಣ ಉತ್ತರಕಾಲಿನ ಕಾವ್ಯಗಳಲ್ಲಿನ ಬಾಹುಬಲಿಯ ಕಥೆ ಇತರೆ ಕನ್ನಡ ಕವಿಗಳ ಕಾವ್ಯಗಳಲ್ಲಿ ಇರುವ ಬಾಹುಬಲಿ ಕುರಿತಾದ ಕವಿತೆಗಳಲ್ಲಿ ಶಾಸನ ಕಾವ್ಯಗಳಲ್ಲಿ ಬಾಹುಬಲಿಯನ್ನು ಕುರಿತು ಆಧುನಿಕ ಕನ್ನಡದ ಕವಿಗಳು ಚಿತ್ರಿಸಿರುವ ಪ್ರಸಂಗವನ್ನು ತಿಳಿಸುವುದರ ಜೊತೆಗೆ ಬಾಹುಬಲಿಗೆ ಇರುವ ಪರ್ಯಾಯ ನಾಮಗಳು ಆ ಹೆಸರಿನ ಮೂಲದ ಬಗ್ಗೆ ವಿವರ ಹಾಗೂ ಬಾಹುಬಲಿ ಮೂರ್ತಿಯು ದೇಹ ಚರ್ಯದ ಬಗ್ಗೆ, ಅನೇಕ ಕೃತಿಗಳಲ್ಲಿ ಬಾಹುಬಲಿಯ ಕುರಿತ ಸನ್ನಿವೇಶಗಳನ್ನು ಆಧರಿಸಿದ ಪ್ರಬಂಧವಾಗಿದೆ.

ಈ ಪ್ರಬಂಧದಲ್ಲಿ ಮುಖ್ಯವಾಗಿ ಪಂಪ ಮತ್ತು ರತ್ನಾಕರವರ್ಣಿಯ ಕಾವ್ಯಗಳಲ್ಲಿ ಬರುವ ಭರತ ಬಾಹುಬಲಿಯರ ಯುದ್ಧ ಸಂದರ್ಭವನ್ನು ಇಬ್ಬರೂ ಕವಿಗಳು ತಮ್ಮ ಕಾವ್ಯಗಳಲ್ಲಿ ಚಿತ್ರಿಸಿದ್ದಾರೆ. ಇವರ ಕಾವ್ಯಗಳಲ್ಲಿ ಬಾಹುಬಲಿಯ ಪಾತ್ರವನ್ನು ಚಿತ್ರಿಸುವಲ್ಲಿ ಎರಡೂ ಕಾವ್ಯಗಳಲ್ಲಿನ ಸಾಮ್ಯತೆ ವ್ಯತ್ಯಾಸಗಳ ಜೊತೆಗೆ ಕವಿಗಳ ತಾತ್ವಿಕ ದೃಷ್ಟಿ ಏನೆಂಬುದನ್ನು ನಿರೂಪಿಸಲಾಗಿದೆ.

ಅಡಿ ಟಿಪ್ಪಣಿ

(ಹೆಚ್ಚಿನ ವಿವರಕ್ಕೆ ನೋಡಿ..)

1. ಡಾ. ಹೆಚ್. ಎಸ್. ವೆಂಕಟೇಶ ಮೂರ್ತಿ 'ಬಾಹುಬಲಿ' ಪುಟ 1 -2

   - ಸ್ವಪ್ನ ಬುಕ್ ಹೌಸ್, ಬೆಂಗಳೂರು - 2007

2. ಟಿ. ವಿ. ವೆಂಕಟಾಚಲ ಶಾಸ್ತ್ರಿ 'ಪಂಪ ಸಂಪುಟ ಆದಿಪುರಾಣಂ'

   ಪೀಠಿಕೆ ಪುಟ Vi

   - ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ - 2006

3. ಎಲ್. ಗುಂಡಪ್ಪ, 'ಆದಿಪುರಣಾ ಸಂಗ್ರಹ' ಮುನ್ನುಡಿ

   - ಕನ್ನಡ ಗ್ರಂಥ ಮಾಲೆ, ಮೈಸೂರು ವಿಶ್ವವಿದ್ಯಾಲಯ - 1956

ಅಧ್ಯಾಯ - ಎರಡು

ಜೈನ ಧರ್ಮದಲ್ಲಿ ಬಾಹುಬಲಿ

"ಜೈನ ಧರ್ಮದ ಮಹಾಪುರುಷನಾದ ಮಹಾವೀರನಿಂದ ಸ್ಥಾಪಿತವಾಗಿದೆ. ಜೈನಧರ್ಮದಲ್ಲಿ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಪಂಗಡಗಳಿವೆ. ಇವು ತಮ್ಮದೇ ಸಂಪ್ರದಾಯವನ್ನು ಅನುಸರಿಸಿಕೊಡು ಬರುತ್ತಿವೆ. ಅದರಂತೆ ಜೈನ ಧರ್ಮದಲ್ಲಿ 'ಮಹಾ ಪುರಾಣ' ವೆಂಬುದು ಜೈನ ಸಾಹಿತ್ಯದ ಒಂದು ವಿಶೇಷ ಶಬ್ದವಾಗಿದೆ. ಇದು ಅರತ್ತ ಮೂರು ಜೈನ ಪ್ರಮುಖ ವ್ಯಕ್ತಿಗಳ ಜೀವನದ ವರ್ಣನೆಯನ್ನು ಮಾಡುತ್ತಿದೆ. ಇಪ್ಪತ್ತ ನಾಲ್ಕು ತೀರ್ಥಂಕರರು ಹನ್ನೆರಡು ಮಂದಿ ಚಕ್ರವರ್ತಿಗಳು, ಒಂಭತ್ತು ಮಂದಿ ಬಲದೇವರು, ಒಂಭತ್ತು ಮಂದಿ ವಾಸುದೇವರು ಮತ್ತು ಒಂಭತ್ತು ಮಂದಿ ಪ್ರತಿವಾಸುದೇವರು. ಇವರನ್ನು ಅರತ್ತಮೂರು ಮಹಾಪುರು ಅಥವಾ ತ್ರಿಶಷ್ಠಿ ಶಲಾಕಾ ಪುರುಷರು ಎನ್ನುತ್ತಾರೆ. ಜೈನಧರ್ಮದಲ್ಲಿ ಇಪ್ಪತ್ತನಾಲ್ಕು ಜನ ತೀರ್ಥಂಕರರ ಪುರಾಣಗಳ ಸಮೂಹವನ್ನು 'ಮಹಾಪುರಾಣ' ವೆಂದು ಕರೆಯಲಾಗುತ್ತದೆ.

ಜೈನ ಪುರಾಣಗಳ ಬೆಳವಣಿಗೆಯಲ್ಲಿ ಕೆಲವು ನಿರ್ದಿಷ್ಟ ಅಂಶಗಳು ಪ್ರತಿಪಾದಿತವಾಗಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಭವಾವಳಿಗಳು, ಪಂಚ ಕಲ್ಯಾಣಗಳು ಮತ್ತು ಸಮವಸರಣ.[1]

ಭವಾವಳಿಗಳು :

ಜೀವಿಯ ಕರ್ಮಗಳಿಗೆ ಅನುಗಣವಾಗಿ ಕರ್ಮಫಲಗಳು ನಾನಾ ಜನ್ಮಗಳಲ್ಲಿ ಬೆನ್ನಟ್ಟಿ ಬರುತ್ತವೆ. ಇದರಿಂದಾಗಿ ನಾನಾ ಪ್ರಕಾರವಾದ ಭವಗಳನ್ನು ಜೀವಿಯು ಪಡೆಯುತ್ತದೆ. ಹೀಗೆ ನಾನಾ ಬಗೆಗಳಲ್ಲಿ ಜೀವಿಯು ಪಡೆಯುವ ಜನ್ಮಾತರಗಳ ಕಥೆಗಳೆ ಭವಾವಳಿ.

ಪಂಚಕಲ್ಯಾಣಗಳು :

ಚರಮ ದೇಹಿಗಳೂ ಉಪದೇಶ ನಿರೂಪಕರೂ ಆದ ತೀರ್ಥಂಕರರು ಈ ಭೂಮಿಯಲ್ಲಿ ಹುಟ್ಟಿ ಉಪದೇಶಾಮೃತವನ್ನು ನೀಡಿ ಕೇವಲ ಜ್ಞಾನಿಗಳಾಗಿರುವವರೆಗಿನ ಹಂತಗಳನ್ನು ಜೈನ ಪುರಾಣಗಳು 'ಪಂಚಕಲ್ಯಾಣ' ಎಂದು ಕರೆಯುತ್ತಾರೆ.

ತೀರ್ಥಂಕರನಾಗುವ ಜೀವಿ ಪುಣ್ಯ ಜೀವಿ. ಈ ಜೀವಿ ಗರ್ಭದಲ್ಲಿ ಬಂದಾಗಿನಿಂದ ಮೋಕ್ಷಕ್ಕೆ ಹೋಗುವ ತನಕ ಗರ್ಭ, ಜನ್ಮ ದೀಕ್ಷೇ ಕೇವಲ ಜ್ಞಾನ, ಮೋಕ್ಷ ಈ ಐದು ವಿಶೇಷ

ಪ್ರಸಗಂಗಗಳಲ್ಲಿ ಸ್ವರ್ಗದೊಳಗಿನ ಇಂದ್ರನು ಬಂದು ಮಾಡುವ ಪರಮೋತ್ಸವಕ್ಕೆ 'ಕಲ್ಯಾಣ' ಎನ್ನುತ್ತಾರೆ.

ಸಮವಸರಣ :

ಜೈನ ಧರ್ಮದಲ್ಲಿ ತೀರ್ಥಂಕರರಿಗೆ 'ಕೇವಲಜ್ಞಾನವು' ಉತ್ಪನ್ನವಾದ ಮೇಲೆ ಇಂದ್ರನ ಆಜ್ಞೆಯಿಂದ ಕುಬೇರನು ಸಮವಸರಣ ಮಂಟಪ ರಚನೆ ಮಾಡುವನು. ಇದು ತೀರ್ಥಂಕರರು ಧರ್ಮೋಪದೇಶ ಮಾಡುವ ಸಭಾ ಭವನ.

ಜೈನ ಪುರಾಣಗಳಲ್ಲಿ ತ್ರೀಶಷ್ಠಿ ಶಲಾಕಪುರಷರಲ್ಲಿ, ಪ್ರಮುಖರಾದ ತಿರ್ಥಂಕರರ ಚರಿತ್ರೆಯಂತೆಯೇ ಚಕ್ರವರ್ತಿಯ ದಿಗ್ವಿಜಯ, ಬಲದೇವ ವಾಸುದೇವ ಪ್ರತಿವಾಸುದೇವರ ಕಥೆಯ ಅಂಕಣ ತೀರ್ಥಂಕರರಿಗೆ ಅನುಸಾರವಾಗಿ ಬರುತ್ತದೆ, ತೀರ್ಥಂಕರ ಚರಿತ್ರೆಯಂತೆಯೆ ಚಕ್ರವರ್ತಿಯ ಚರಿತ್ರೆಯು ಕೂಡ ಒಂದೇ ಆಗಿದೆ. ಅಲ್ಲಿ ಕಂಡು ಬರುವ ಮುಖ್ಯ ವಿವರಗಳು ಹೀಗಿವೆ. ಚಕ್ರವರ್ತಿಯಾಗುವ ಪುಣ್ಯವಂತನಾದ ರಾಜನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟುತ್ತದೆ. ಕೋಶಾಗಾರದಲ್ಲಿ ಮಣಿರತ್ನ, ಚರ್ಮರತ್ನ, ಕಾಕಿಣಿ ರತ್ನಗಳು ಹುಟ್ಟುತ್ತವೆ. ಇವುಗಳಲ್ಲಿಗೆ ಗೃಹಪತಿ, ಸೇನಾಪತಿ, ಸ್ಥಪತಿ ಪುರೋಹಿತ, ಸ್ತ್ರೀರತ್ನಗಳೂ, ಗಜರತ್ನ, ಅಶ್ವರತ್ನಗಳೂ ಆತನಿಗೆ ದೊರೆಯುತ್ತವೆ. ಚಕ್ರರತ್ನಕ್ಕೆ ಪೂಜೆ ಮಾಡಿ ಪೂರ್ವದಕ್ಷಿಣ ಉತ್ತಮರ ಪಶ್ಚಿಮ ಖಂಡಗಳನ್ನು ಹಿಮವತ್ಪರ್ವತದ ಮಧ್ಯಮಕೂಟ ಭಾಗವನ್ನು ವಿಜಯಾರ್ಧ ಪರ್ವತವನ್ನು ಗೆದ್ದು ಷಟ್ಖಂಡ ಭಾರತ ಮಂಡಲದ ವಿಜಯಿಯಾಗುತ್ತಾನೆ. ದೇವಾಧಿದೇವತೆ ಗಳಿಂದ ಪಟ್ಟಾಭಿಷೇಕವನ್ನು ಮಾಡಿಸಿಕೊಂಡು ಮಹಾವೈಭವದಿಂದ ರಾಜ್ಯಭಾರ ಮಾಡುತ್ತಾನೆ.

ಬಲದೇವ ವಾಸುದೇವ ಪ್ರತಿವಾಸುದೇವರ ಕಥೆಯಲ್ಲಿ ಇಷ್ಟು ಸಾಮ್ಯವಿಲ್ಲ, ಬಲದೇವ ವಾಸುದೇವರಿಬ್ಬರೂ ಅಣ್ಣ ತಮ್ಮಂದಿರು ಪ್ರತಿವಾಸುದೇವಾ ಅವರನ್ನು ಎದುರಿಸುವ ದೃಷ್ಟ ನಾಯಕ ಅವನು ಅರ್ಧ ಚಕ್ರವರ್ತಿ (ಮೂರು ಖಂಡಗಳನು ಮಾತ್ರ ಗೆದ್ದಿರುವನು) ತಮ್ಮ ತಮ್ಮೊಳಗೆ ಉಂಟಾಗುವ ಹೋರಾಟದಲ್ಲಿ ಪ್ರತಿವಾಸುದೇವನು ವಾಸುದೇವನ ಮೇಲೆ ತನ್ನ ಚಕ್ರವನ್ನು ಪ್ರಯೋಗಿಸುತ್ತಾನೆ. ಆದರೆ ಆ ಚಕ್ರ ವಾಸುದೇವನನ್ನು ಘಾತಿಸದೆ ಓಲೈಸುತ್ತದೆ. ಅದೇ ಚಕ್ರವನ್ನು ವಾಸುದೇವನು ಪ್ರಯೋಗಿಸಿದಾಗ ಪ್ರತಿವಾಸುದೇವನು ತನ್ನ ಚಕ್ರದಿಂದಲೆ ಮಡಿಯುತ್ತಾನೆ.

ಜೈನ ಧರ್ಮದಲ್ಲಿ ಬರುವ ತ್ರಿಶಷ್ಟಿಶಲಾಕಪುರುಷರಲ್ಲಿ ಇಪ್ಪತ್ತನಾಲ್ಕು ಜೈನ ತೀರ್ಥಂಕರರಿದ್ದಾರೆ. ಇವರಲ್ಲಿ ಮೊದಲನೆಯವನು ಆದಿನಾಥ ಅಥವಾ ವೃಷಭನಾಥ. ಈತನು ಜೈನ ಧರ್ಮದಲ್ಲಿಯೆ ಸರ್ವಶ್ರೇಷ್ಠನಾಗಿದ್ದಾನೆ. ಇವನಂತೆಯೆ ಇವನ ಮಗನಾದಂತಹ ಹಾಗೂ ಪ್ರಥಮ ಚಕ್ರಿಯಾದಂತಹ ಭರತ ಹಾಗೂ ಬಾಹುಬಲಿಯರು ಜೈನ ಪುರಾಣದಲ್ಲಿ ಪ್ರಸಿದ್ಧರಾಗಿದ್ದಾರೆ.

ಜೈನ ಧರ್ಮದಲ್ಲಿ ಇರುವ ಎರಡು ಪಂಗಡಗಳಾದ ದಿಗಂಬರ ಮತ್ತು ಶ್ವೇತಾಂಬರ ಪರಂಪರೆಯಲ್ಲಿ ಬರುವ ಪುರಾಣಗಳ ಕಥೆಗಳಲ್ಲಿ ಆದಿನಾಥನ ಭವಾವಳಿಗಳು ಹಾಗೂ ಭರತ ಬಾಹುಬಲಿಯರ ನಡುವೆ ನಡೆದಂತಹ ಯುದ್ಧ ಪ್ರಸಂಗದಲ್ಲಿ ತಮ್ಮದೆ ಆದ ರೀತಿಯಲ್ಲಿ ವ್ಯತ್ಯಾಸವನ್ನು ಕಾಣಬಹುದು.

ದಿಗಂಬರ ಪರಂಪರೆಯ ಭರತ - ಬಾಹುಬಲಿಯ ಕಥೆ :

ದಿಗಂಬರ ಪರಂಪರೆಯು ಜಿನಸೇನ - ಗುಣಭದ್ರರ ಪೂರ್ವ ಪುರಾಣದ ಕಥೆಯಲ್ಲಿ ಬರುವಂತೆ ಭರತ - ಬಾಹುಬಲಿಯರ ಯುದ್ಧ ಸನ್ನಿವೇಶವನ್ನು ನೋಡಿದಾಗ :[2]

ಭರತನು ಚಕ್ರರತ್ನದ ಸಹಾಯದಿಂದ ಸಕಲ ಭೂಮಂಡಲವನ್ನು ಗೆದ್ದು ಪಟ್ಟಣಕ್ಕೆ ಹಿಂದಿರುಗಿದಾಗ ಅಯೋಧ್ಯೆಯನ್ನು ಪ್ರವೇಶಮಾಡದೆ ಚಕ್ರರತ್ನವು ಗೋಪುರದ್ವಾರದಲ್ಲಿಯೆ ನಿಂತುಬಿಟ್ಟಿತು. ಆತನ ತಮ್ಮಂದಿರು ಅದರಲ್ಲಿಯೂ, ಬಾಹುಬಲಿಯು ಅಜೇಯನಾಗಿರುವುದರಿಂದ ದಿಗ್ವಿಜಯ ಅಪೂರ್ಣವಾದ ಕಾರಣ ಚಕ್ರರತ್ನವು ತಡೆದು ನಿಂತಿದೆ ಎಂಬ ವಿಚಾರವು ರಾಜಪುರೋಹಿತರಿಂದ ಭರತನಿಗೆ ತಿಳಿದು ಬಂತು. ಇದರಿಂದ ಭರತನು ಮುಂದಿನ ಕ್ರಮವನ್ನು ಕೈಗೊಂಡನು. 'ಬನ್ನಿರಿ ಅಣ್ಣನಾದ ಚಕ್ರವರ್ತಿಯನ್ನು ಭಜಿಸಿರಿ' ಎಂದು ಮುಂತಾಗಿ ನಿರೂಪವನ್ನು ಭರತನು ಬಾಹುಬಲಿಯನ್ನುಳಿದ ಸಹೋದರರಿಗೆ ದೂತರ ಮೂಲಕ ಮೊದಲು ಕಳುಹಿಸಿದನು. ಆದರೆ ಆ ಸಹೋದರರು ಭರತನಿಗೆ ಎರಗದೆ, ತಂದೆಯಾದ ವೃಷಭನಾಥನ ಬಳಿಗೆ ಹೋಗಿ ಭರತನು ಮಾಡಿದ ಕಾರ್ಯವನ್ನು ತಿಳಿಸಿದರು. ಲೌಕಿಕ ರಾಜ್ಯಕ್ಕಿಂತಲೂ ಪಾರಲೌಕಿಕ ರಾಜ್ಯವು ಶ್ರೇಷ್ಠವೆಂದು ಆದಿನಾಥನು ಉಪದೇಶಿಸಿದನು. ಅವರೆಲ್ಲರೂ ದೀಕ್ಷೆಯನ್ನು ಸ್ವೀಕರಿಸಿ ತಪಸ್ಸಿಗೆ ತೆರಳಿದರು.

ಬಾಹುಬಲಿಗೂ ಇತರ ಸಹೋದರರಿಗೆ ಹೋದಂತೆಯೆ ನಿರೂಪವು ಹೋದಾಗ ಆತನು ತಲೆಬಾಗಲು ಒಪ್ಪದೆ ತನ್ನ ಮತ್ತು ಭರತನ ಪೌರುಷದ ತೀರ್ಮಾನವು ಯುದ್ಧವೆಂಬ

ಓರೆಗಲ್ಲಿನಲ್ಲಾಗಲಿ ಎಂದು ಹೇಳಿ ಕಳುಹಿಸಿನು. ಎರಡು ಕಡೆಗಳಲ್ಲಿಯೂ ಸೈನ್ಯದ ಸಿದ್ದತೆ ನಡೆಯಿತು. ಅಣ್ಣ ತಮ್ಮಂದಿರಿಬ್ಬರೂ ಸೈನ್ಯದೊಂದಿಗೆ ಹೋರಾಡಲು ಬಂದು ನಿಂತಾಗ ಮಂತ್ರಿಗಳು ಚರಮದೇಹಿಗಳಾಗಿರುವ ಇಬ್ಬರಿಗೂ ಯುದ್ದದಲ್ಲಿ ಹಾನಿಯಿಲ್ಲ, ಆದರೆ ಏನೂ ಅರಿಯದೆ ಸೈನಿಕರ ಸಾವಿನ ಮುಂದಾಲೋಚನೆಯನ್ನು ಅರಿತ ಮಂತ್ರಿಗಳು ಧರ್ಮಯುದ್ಧವನ್ನು ಸಾರಿದರು. ಅವರು ದ್ವಂದ್ವ ಯುದ್ದದಲ್ಲಿ ಜಲಯುದ್ಧ, ದೃಷ್ಟಿಯುದ್ಧ ಮತ್ತು ಮಲ್ಲಯುದ್ಧಗಳ ಮಾಡಿದರೂ ಮೂರು ಬಗೆಯ ಯುದ್ಧದಲ್ಲಿಯೂ ಬಾಹುಬಲಿ ಗೆದ್ದನು. ಕೋಪಗೊಂಡಂತಹ ಭರತನು ಶತ್ರು ಸಮೂಹವನ್ನು ನಾಶಮಾಡುವ ಚಕ್ರವನ್ನು ಸ್ಮರಿಸಿದನು. ಚಕ್ರರತ್ನವು ಬಾಹುಬಲಿಯನ್ನು ಪ್ರದಕ್ಷಿಣೆಯನ್ನು ಮಾಡಿ ವಧೆಗೆ ಅರ್ಹನಲ್ಲದ ಬಾಹುಬಲಿಯ ಪಕ್ಕದಲ್ಲಿ ಬಂದು ನಿಂತಿತು. ಇದರಿಂದಾಗಿ ವೈರಾಗ್ಯಪರನಾದ ಬಾಹುಬಲಿ ನಶ್ವರವಾದ ರಾಜ್ಯಲಕ್ಷ್ಮಿಯನ್ನು ತೊರೆಯುವುದಾಗಿ ಹೇಳಿ ತನ್ನ ಕಡೆಯಿಂದಾದ ಅನ್ಯಾಯಕ್ಕೆ ಕ್ಷಮೆಯನ್ನು ಯಾಚಿಸಿದನು. ಈ ಕಡೆ ಭರತನಿಗೂ ಸಹ ತನ್ನ ಕಾರ್ಯಕ್ಕಾಗಿ ಪಶ್ಚಾತ್ತಾಪ ಉಂಟಾಯಿತು. ಬಾಹುಬಲಿ ವೈರಗ್ಯದಲ್ಲಿ ಸ್ಥಿರತೆಯನ್ನು ಪಡೆದು ತನ್ನ ಪುತ್ರನಲ್ಲಿ ರಾಜ್ಯ ಸಂಪತ್ತನ್ನು ಇರಿಸಿ ವೃಷಭ ಸ್ವಾಮಿಯ ಬಳಿ ದೀಕ್ಷೆಯನ್ನು ಸ್ವೀಕರಿಸಿದನು.

ಒಂದು ವರ್ಷ ಕಾಲ ಪ್ರತಿಮಾಯೋಗದಲ್ಲಿದ್ದ ಬಾಹುಬಲಿಗೆ ಪರೀಷಹಜಯದಿಂದ ಕರ್ಮನಿರ್ಜರೆಯುಂಟಾಯಿತು. ಆದರೂ ಭರತೇಶ್ವರನು ತನ್ನ ದೆಸೆಯಿಂದಾಗಿ ಬಹು ಕ್ಲೇಶವನ್ನು ಹೊಂದಿದವನಾದನು ಎಂಬ ಸ್ನೇಹ ಭಾವನೆ ಅಳಿದಿರಲಿಲ್ಲ. ಆ ಭಾವನೆ ಭರತೇಶ್ವರನು ಪ್ರೇಮದಿಂದ ಬಾಹುಬಲಿಯನ್ನು ಪೂಜಿಸಿದ ಕೂಡಲೇ ಹೊರಟುಹೋಗಿ ಆತನಿಗೆ 'ಕೇವಲಜ್ಞಾನ' ಪ್ರಾಪ್ತವಾಯಿತು.

ಜೈನ ಧರ್ಮದ ಶ್ವೇತಾಂಬರ ಪರಂಪರೆಯ ತ್ರಿಷಷ್ಠಿ ಶಲಾಕಾಪುರುಷರಲ್ಲಿರುವ ಆದಿಪುರಾಣ ಕಥೆಯ ಬಾಹುಬಲಿ :

ವೃಷಭನಾಥನು ತನ್ನ ಮಕ್ಕಳಿಗೆ ರಾಜ್ಯವನ್ನು ಕೊಟ್ಟು ಮುನಿದೀಕ್ಷೆಯನ್ನು ಪಡೆದಾಗ ಭರತನ ಆಯುಧಾಗಾರದಲ್ಲಿ 'ಚಕ್ರರತ್ನದ ಉದಯವೂ ಹಾಗೂ ವೃಷಭನಾಥನಿಗೆ 'ಕೇವಲಜ್ಞಾನ'ವೂ ಏಕ ಕಾಲದಲ್ಲಿ ಪ್ರಾಪ್ತವಾಯಿತು. ಭರತನು ಚಕ್ರರತ್ನದ ಸಹಾಯದಿಂದ ದಿಗ್ವಿಜಯವನ್ನು ಮುಗಿಸಿಕೊಂಡು ಹಿಂದಿರುಗಿ ಬಂದಾಗ ಆತನಿಗೆ ಚಕ್ರವರ್ತಿಯ ಪಟ್ಟವನ್ನು ಕಟ್ಟಲಾಯಿತು. ಅನಂತರ ಭರತನು ತನ್ನ ಕುಟುಂಬವನ್ನು ನೋಡಲು ಹೋರಟನು. ಭರತನ

ಅಪ್ಪಣೆಯಿಲ್ಲದೆ ದೀಕ್ಷೆಯನ್ನು ಪಡೆಯದೆ ಕೃಶಳಾಗಿದ್ದ ಸುಂದರಿಯ ಅವಸ್ಥೆಯನ್ನು ನೋಡಿ ಅವನು ಕುಪಿತನಾದನು. ಅನಂತರ ಆತನಿಗೆ ಸುಂದಿರಯು ಜೀವಿಸಲು ಎಷ್ಟು ಬೇಕೋ ಅಷ್ಟು ಒಣಗಿದ ಫಲವನ್ನು ಮಾತ್ರ ಸ್ವೀಕರಿಸುತ್ತಿರುವುದಾಗಿ ತಿಳಿದು ಬಂದಿತು. ಆಗ ಭರತನು ಅವಳಿಗೆ ದೀಕ್ಷಾಬದ್ಧಳಾಗಲು ತಿಳಿಸಿದನು.

ಭರತನಿಗೆ ತನ್ನ ತಮ್ಮಂದಿರು ತಾನು ಚಕ್ರೇಶ್ವರ ಪಟ್ಟವನ್ನು ಪಡೆಯುವಾಗ ಬಂದಿರಲಿಲ್ಲವೆಂಬುದು ತಿಳಿಯಿತು. ನಿಮಗೆ ರಾಜ್ಯದ ಇಚ್ಛೆಯಿದ್ದರೆ ಭರತನನ್ನು ಸೇವಿಸಿ, ಎಂದು ದೂತರನ್ನು ತಮ್ಮಂದಿರ ಬಳಿಗೆ ಕಳುಹಿಸಿದನು. ಅವರು ವೃಷಭನಾಥನ ಬಳಿಗೆ ಹೋಗಿ ನಡೆದ ವಿಷಯವನ್ನು ತಿಳಿಸಿದಾಗ ಸ್ವಾಮಿಯ ಲೌಕಿಕ ಲಾಲಸೆ ಮುಗಿಯುವಂತಹದ್ದಲ್ಲಿ ಆತ್ಮನಿಗ್ರಹವೇ ಸರಿಯಾದ ಮಾರ್ಗವೆಂದು ತಿಳಿಸಿದಾಗ ಅವರೆಲ್ಲರೂ ದೀಕ್ಷೆಯನ್ನು ಸ್ವೀಕರಿಸಿದರು. ಆದರೆ ಬಾಹುಬಲಿಯು ಮಾತ್ರ ಈ ಸಂದರ್ಭದಲ್ಲಿ ದೀಕ್ಷೆಯನ್ನು ಸ್ವೀಕರಿಸದೆ ರಾಜ್ಯಭಾರವನ್ನು ಮುಂದುವರಿಸಿದನು. ಈ ಕಡೆ ಚಕ್ರರತ್ನವು ಆಯೋಧ್ಯೆಯನ್ನು ಪ್ರವೇಶಿದೆ ನಿಂತಿತ್ತು. ಇದಕ್ಕೆ ಬಾಹುಬಲಿಯು ಅಜೇಯನಾಗಿರುವುದೇ ಕಾರಣವೆಂದು ತಿಳಿಯುತ್ತದೆ. ಸುವೇಗನು ಭರತನ ಧೂತನಾಗಿ ಹೋದಾಗ ಬಾಹುಬಲಿಯು ತನ್ನ ರಾಜ್ಯ ಹಾಗೂ ಪ್ರಾಣವು ಭರತನಿಗೆ ಬೇಕಿದ್ದರೆ ಆತನೇ ತನ್ನನ್ನು ಕಾಣಬೇಕೆಂದು ಹೇಳಿದನು.

ಇದರಿಂದ ಭರತನು ಕೋಪಗೊಂಡು ಯುದ್ಧಕ್ಕೆ ಸಿದ್ಧನಾದನು. ಯುದ್ಧ ಆರಂಭದಲ್ಲಿ ದೇವತೆಗಳು ಬಂದು ಸಂಧಾನವನ್ನು ನಡೆಸಲು ಹೋಗಿ ವಿಫಲರಾದರು. ಕೊನೆಗೆ ಭರತ - ಬಾಹುಬಲಿಗಳು ಸೈನ್ಯದೊಂದಿಗೆ ಯುದ್ಧಮಾಡುವ ಬದಲು ದೃಷ್ಟಿಯುದ್ಧ, ದ್ವಂದ್ವ ಯುದ್ಧವನ್ನು ಮಾಡಲಿ ಎಂದು ತಿಳಿ ಹೇಳಿದರು. ಇದು ಶ್ವೇತಾಂಬರರ ಸಂಪ್ರದಾಯದಲ್ಲಿ ವಿಶೇಷ ಸಂದರ್ಭವಾಗಿ ನಿರೂಪಿತವಾಗಿದೆ.

ಈ ಸಂದರ್ಭದಲ್ಲಿ ಭರತನ ಸೈನಿಕರಿಗೆ ತಾವಿಲ್ಲದೆ ಭರತ ಬಾಹುಬಲಿಯನ್ನು ಜಯಿಸುವುದು ಕಷ್ಟವೆಂದು ಸಂಶಯ ಉಂಟಾಯಿತು. ಆಗ ಭರತನು ತನ್ನ ಸಾಮರ್ಥ್ಯವನ್ನು ಸೈನಿಕರಿಗೆ ತೋರಿಸುವ ದೃಷ್ಟಿಯಿಂದ ತನ್ನ ಕೈಯ ಕಿರು ಬೆರಳನ್ನು ಸ್ವಲ್ಪ ಬಾಗಿಸಿಕೊಂಡು ಅದನ್ನು ಸರಿಪಡಿಸಲು ಸರಪಣಿಯನ್ನು ಕಟ್ಟಿಸಿಕೊಂಡು ಎಳೆಯುವಂತೆ ಸೈನಿಕರಿಗೆ ಹೇಳುತ್ತಾನೆ. ಆಗ ಸೈನಿಕರೆಲ್ಲರೂ ಸರಪಳಿಯನ್ನು ಎಳೆದ ಸೇನಿಕರಾದಿಯಾಗಿ ಎಲ್ಲರೂ ಕೆಳಗೆ ಬೀಳುವಂತೆ ಮಾಡಿ ತನ್ನ ಶಕ್ತಿ ಪ್ರದರ್ಶನವನ್ನು ಮಾಡಿ ಸೈನಿಕರ ಸಂಶಯವನ್ನು ನಿವಾರಿಸಿದನು.

ದೃಷ್ಟಿಯುದ್ಧ, ಧ್ವನಿಯುದ್ಧ, ಮಲ್ಲಯುದ್ಧ, ದ್ವಂದ್ವ ಯುದ್ಧಗಳಲ್ಲಿ ಭರತನು ಸೋಲುತ್ತಾ ಬಂದನು. ಭರತನು ಕೊನೆಗೆ ಚಕ್ರರತ್ನವನ್ನು ಬಾಹುಬಲಿಯ ಮೇಲೆ ಪ್ರಯೋಗ ಮಾಡಿದನು. ಅದು ಆತನನ್ನು ಪ್ರದಕ್ಷಿಣೆ ಮಾಡಿ ಮತ್ತೆ ಭರತನ ಕೈಗೆ ಬಂದು ಸೇರಿತು. ಇದರಿಂದ ಕೋಪಗೊಂಡ ಬಾಹುಬಲಿಯು ಮುಷ್ಟಿಯನ್ನು ಏರಿಸಿ ಭರತನನ್ನು ಕೊಲ್ಲಲು ಮುಂದಾಗುತ್ತಾನೆ. ಭರತನ ಬಳಿಗೆ ಹೋದ ತಕ್ಷಣ ಬಾಹುಬಲಿಯ ಮನಸ್ಸು ಪರಿವರ್ತನೆಯಾಗಿ 'ಛೇ' ಅಣ್ಣನನ್ನು ಕೊಲ್ಲಲು ಚಿಂತಿಸಿದ ತನ್ನ ಕ್ರೌರ್ಯಕ್ಕೆ ಧಿಕ್ಕಾರವಿರಲಿ ಎಂದು ಬಗೆದು ಸಾಮ್ರಾಜ್ಯ ಲಕ್ಷ್ಮಿಯಲ್ಲಿ ವಿರಕ್ತಿಯನ್ನು ಹೊಂದಿದನು. ತಕ್ಷಣ ತನ್ನ ಹೀನ ಅಲೋಚನೆಗೆ ಪಶ್ಚಾತ್ತಾಪವಾಗಿ ಮುಷ್ಟಿಯಿಂದ ಕೂದಲನ್ನು ಕಿತ್ತನು. ಈ ಸಂದರ್ಭದಲ್ಲಿ ದೇವತೆಗಳ ಹರ್ಷೋದ್ಗಾರ ಮಾಡಿದರು. ತಪಸ್ಸಿಗೆ ಹೊರಟ ಬಾಹುಬಲಿ ತಂದೆಯ ಬಳಿಗೆ ಈಗ ಹೋದರೆ ತನ್ನ ತಮ್ಮಂದಿರಿಗಿಂತಲೂ ಸನ್ಯಾಸ ಪದವಿಯಲ್ಲಿ ತನಗೆ ಕೆಳದರ್ಜೆಯ ಸ್ಥಾನ ದೊರೆಯುವುದೆಂದು ತಿಳಿದು ಕೇವಲಜ್ಞಾನ ಪ್ರಾಪ್ತಿಯಾದ ನಂತರ ಅಲ್ಲಿಗೆ ಹೋಗಲು ನಿಶ್ಚಯಿಸಿದನು. ಈ ಗರ್ವಮನೋಭಾವದಿಂದ ತಪ್ಪಸ್ಸಿಗೆ ನಿಂತು ಬಾಹುಬಲಿಯನ್ನು ಭರತ ಪೂಜಿಸಿ ಸೋಮಯಶನನ್ನು ರಾಜ್ಯದಲ್ಲಿ ಸ್ಥಾಪಿಸಿ ಅಯೋಧ್ಯಗೆ ಹಿಂದಿರುಗಿದನು.

ಒಂದು ವರ್ಷಕಾಲ ಬಾಹುಬಲಿಯು ಉಗ್ರ ತಪಶ್ಚರ್ಯೆಯಲ್ಲಿ ತೊಡಗಿದ. ಆದರೆ ಕೇವಲ ಜ್ಞಾನ ಪ್ರಾಪ್ತವಾಗಲಿಲ್ಲ. ವೃಷಭನಾಥನ ಆದೇಶದಂತೆ ಬ್ರಾಹ್ಮಿ ಮತ್ತು ಸುಂದರಿಯರು ಬಾಹುಬಲಿಯ ಬಳಿಗೆ ಬಂದು ಆತನಲ್ಲಿರುವ ಮನ:ಕಷಾಯಿರ ಸೂಚನೆಯನ್ನು ನೀಡಿದರು. ಆಗ ಬಾಹುಬಲಿಯು ಅದರಿಂದ ದೂರವಾಗಿ ಕೇವಲ ಜ್ಞಾನವನ್ನು ಪಡೆಯುತ್ತಾನೆ.

ಬಾಹುಬಲಿ ಅಥವಾ ಭುಜಬಲಿ ಎಂದು ಜೈನ ಪರಂಪರೆಯಲ್ಲಿ ಪರಿಚಿತನಾದ ಪುರಾಣ ಪುರುಷನೆ ಗೋಮ್ಮಟ. ಶ್ರವಣಬೆಳಗೊಳದ ಈ ಭವ್ಯ ಮೂರ್ತಿಯನ್ನು ಪ್ರತಿಷ್ಠಾಪಿಸಿದವನು ಚಾವುಂಡರಾಯ. ಈತ ಕರ್ನಾಟಕವನ್ನು ಆಳಿದ ಗಂಗರೆಂಬ ರಾಜವಂಶದ ಮಂತ್ರಿ ಮತ್ತು ಸೇನಾನಿಯಾಗಿದ್ದ. ಅವನಿಗೆ ಗೊಮ್ಮಟ ಎಂಬ ಇನ್ನೊಂದು ಹೆಸರು ಇತ್ತು. ಈ ಬಾಹುಬಲಿ ಮೂರ್ತಿಗೆ ತನ್ನ ಪ್ರತಿಷ್ಠಾಪಕನಿಂದಾಗಿ 'ಗೋಮ್ಮಟ' ಎಂಬ ಹೆಸರು ರೂಢವಾಯಿತು.[3]

ಜೈನ ಪರಂಪರೆಯಲ್ಲಿ 24 ಕಾಮದೇವರನ್ನು ಎಣಿಸುತ್ತಾರೆ. ಇದರಲ್ಲಿ ಭುಜಬಲಿ ಮೊದಲನೆಯವನು. ಕಾಮದೇವನು ಸುಂದರನೆಂಬುದು ಸರ್ವವಿದಿತ. ಸುಂದರವಾದುದ್ದನ್ನು ಗೋಮ್ಮಟ ಎಂದು ಪ್ರಾಕೃತ ಭಾಷೆಯಲ್ಲಿ ಕರೆಯುತ್ತಾರೆ.[4] ಸುಂದರವಾದ ಕಾಮದೇವನೆಂಬ

ಅರ್ಥದಲ್ಲಿ ಗೋಮ್ಮಟ ಎಂಬ ಹೆಸರು ಭುಜಬಲಿಗೆ ಸೂಕ್ತವಾಗಿ ಅಂಟಿಕೊಂಡಿತ್ತು. ಪ್ರಾಕೃತದಲ್ಲಿ 'ಗೊಮ್ಮಟ' ಎಂದರೆ ಮನ್ಮಥ ಎಂದು ಅರ್ಥವಾಗುತ್ತಿದೆ. ಈ ಅಭಿಪ್ರಾಯನ್ನು ನೀಡಿರುವ ಗೋವಿಂದ ಪೈ ಈ ಭವ್ಯ ಪ್ರತಿಮೆಯನ್ನು ಸ್ಥಾಪಿಸಿದ ಚಾವುಂಡರಾಯನ ಹೆಸರು ಬಾಹುಬಲಿಗೆ ಅಂಟಿಕೊಂಡು ಬಂದಿರುವುದಾಗಿ ಹೇಳಿದ್ದಾರೆ.

ಕರ್ನಾಟಕದಲ್ಲಿ ಬಾಹುಬಲಿಯನ್ನು ಕುರಿತು ಬಳಕೆಗೆ ಬಂದ ಗೋಮ್ಮಟ ಎಂಬ ಶಬ್ಧ ಈಗ ಸರ್ವತ್ರ ಪರಿಚಿತವಾಗಿದೆ.

ಜೈನಧರ್ಮದಲ್ಲಿ ಬಾಹುಬಲಿ ಅಥವಾ ಗೋಮ್ಮಟಸ್ವಾಮಿ ಎಂದ ಕೂಡಲೆ ನೆನಪಾಗುವುದು ಹಾಸನ ಜಿಲ್ಲೆಯ ಶ್ರವಣಬೆಳುಗೊಳ.[5] ಶ್ರವಣಬೆಳುಗೊಳ ಪ್ರಸಿದ್ಧವಾದ ಒಂದು ಜೈನ ಕ್ಷೇತ್ರ ಒಂದು ಸಾವಿರ ವರ್ಷಗಳ ಹಿಂದೆಯೆ ಅಲ್ಲಿ ಗೊಮ್ಮಟಸ್ವಾಮಿಯ ದಿವ್ಯ ಸುಂದರ ವಿಗ್ರಹವನ್ನು ನಿರ್ಮಿಸಲಾಯಿತು. ಆದರೆ ಗೊಮ್ಮಟ ವಿಗ್ರಹ ಮೈದಳೆಯುವ ಮೊದಲೆ ಶ್ರವಣಬೆಳಗೊಳ ಜೈನ ಧರ್ಮದ ಪುಣ್ಯ ಕ್ಷೇತ್ರವಾಗಿತ್ತು. ಕ್ರಿಸ್ತಪೂರ್ವದಲ್ಲೇ ಭದ್ರಬಾಹು ಮುನಿಗಳು ಉತ್ತರ ಭಾರತದಲ್ಲಿ ಉಂಟಾದ ಭೀಕರ ಕ್ಷಾಮದ ಕಾರಣದಿಂದಾಗಿ ತಮ್ಮ ಹನ್ನೆರಡು ಸಾವಿರ ಶಿಷ್ಯರೊಂದಿಗೆ ಕರ್ನಾಟಕಕ್ಕೆ ನಡೆದು ಶ್ರವಣಬೆಳಗೊಳದಲ್ಲಿ ನೆಲೆಸಿದರೆಂಬುದು ಆತಿಹ್ಯ. ಮೌರ್ಯ ವಂಶದ ಪ್ರಸಿದ್ಧ ದೊರೆ ಚಂದ್ರಗುಪ್ತ ಇವರ ಶಿಷ್ಯನಾಗಿದ್ದು ಭದ್ರಬಾಹು ಮುನಿಗಳು ಶ್ರವಣಬೆಳಗೊಳಕ್ಕೆ ಬಂದಾಗ, ಇವರಿಂದ ಜಿನ ದೀಕ್ಷೆ ಪಡೆದು ಮುನಿಯಾಗಿದ್ದ ಚಂದ್ರಗುಪ್ತ ತಾನೂ ಕರ್ನಾಟಕಕ್ಕೆ ಬಂದ, ಸಲ್ಲೇಖನವ್ರತದಿಂದ ಭದ್ರಬಾಹು ಮುನಿ ತೀರಿಕೊಂಡ ನಂತರ ಚಂದ್ರಗುಪ್ತನೂ ಸಲ್ಲೇಖನ ವ್ರತದಿಂದ ಮುಕ್ತನಾದನಂತೆ.

ಶ್ರವಣಬೆಳಗೊಳದಲ್ಲಿ ಜೈನ ಧರ್ಮದ ಪ್ರತೀಕವಾದ ಚಿಕ್ಕ ಬೆಟ್ಟ ಮತ್ತು ದೊಡ್ಡ ಬೆಟ್ಟ, ಚಂದ್ರಗಿರಿ ಮತ್ತು ವಿಂಧ್ಯಗಿರಿ (ಇಂದ್ರಗಿರಿ) ಎಂಬ ಎರಡು ಬೆಟ್ಟಗಳಿವೆ. ಚಿಕ್ಕ ಬೆಟ್ಟವು ಅನೇಕ ಬಸದಿಗಳನ್ನು ಒಳಗೊಂಡಿದ್ದು, ಜೈನ ಧರ್ಮದ ಪ್ರಧಾನ ಆಕರ್ಷಣಾ ಕೇಂದ್ರವಾಗಿತ್ತು. ಆದರೆ ಬೆಳ್ಗೊಳದ ದೊಡ್ಡ ಬೆಟ್ಟದ ಮೇಲೆ ಗೊಮ್ಮಟ ಮೂರ್ತಿ ಸ್ಥಾಪಿತವಾದ ಮೇಲೆ ಶ್ರವಣಬೆಳಗೊಳದ ಪ್ರಧಾನ ಕೇಂದ್ರ ದೊಡ್ಡ ಬೆಟ್ಟವಾಯಿತು.

[3]ಗೊಮ್ಮಟೇಶ್ವರನ ಈ ಬೃಹತ್ ಮೂರ್ತಿಯನ್ನು ಗಂಗರ ದೊರೆ ರಾಜಮಲ್ಲನ ಮಂತ್ರಿಯಾದ ಚಾಮುಂಡರಾಯನು ಕ್ರಿ. ಶ. 982 - 83 ರ ಸುಮಾರಿಗೆ ಪ್ರತಿಷ್ಠಾಪಿಸಿದ ನಂತರ

ಚಂದ್ರಗಿರಿ ಮತ್ತು ವಿಂದ್ಯಗಿರಿಗಳ ನಡುವಿನ ಸುಂದರವಾದ ವಿಶಾಲ ಪುಷ್ಕರಣಿಯ ಬೆಳಗೊಳವೆಂದು ಖ್ಯಾತವಾಗಿತ್ತು. ಜೈನ ಸನ್ಯಾಸಿಗಳ ವಾಸ ಸ್ಥಾನವಾಗಿತ್ತು. ಅಂದಿನಿಂದ ಇಲ್ಲಿಯೇ ಜೈನ ಮಠವು ಇದೆ.

ಬಾಹುಬಲಿ ಮೂರ್ತಿಯು ಶಿಲ್ಪಿ ಯಾರೆಂದು ಇಂದಿಗೂ ತಿಳಿಯದು. ಇಂಥ ಬೃಹದಾಕಾರದ ಮೂರ್ತಿ ಭಾರತದಲ್ಲಿ ಮತ್ತೆಲ್ಲಿಯೂ ಇಲ್ಲ. ಈ ಮೂರ್ತಿಯ ಎತ್ತರ ಸುಮಾರು ಐವತ್ತೇಳು ಅಡಿಗಳು, ಈ ಗೊಮ್ಮಟನ ಭುಜಗಳ ನಡುವಿನ ಅಂತರ ಇಪ್ಪತ್ತಾರು ಅಡಿ, ಪಾದದ ಉದ್ದ ಒಂಭತ್ತು ಅಡಿ, ಕೈಯ ತೋರು ಬೆರಳು ಮೂರು ಅಡಿ, ಮುಖ ಆರುವರೆ ಅಡಿ.

ಜಡೆಗಟ್ಟಿದ ಗುಂಗುರು ಕೂದಲು ಚಾಪಾಕೃತಿಯಲ್ಲಿರುವ ಹುಬ್ಬುಗಳು ಅರೆ ಮುಚ್ಚಿದ ನಾಸಾಗ್ರದಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಿರುವ ಕಣ್ಣುಗಳು; ಜಾನುವನ್ನು ಮುಟ್ಟುವ ಬಾಹುಗಳು ಸಹಜವಾಗಿ ಚಾಚಿರುವ ಬೆರಳುಗಳು, ಕಾಲುಗಳನ್ನು ಅವರಿಸಿರುವ ಮಾಧವೀಲತೆಗಳು; ಮೊಣಕಾಲ ಏರಿನಿಂದ ಹುತ್ತಗಳ ಕೆತ್ತನೆ ಅವುಗಳಿಂದ ಹೊರಹೊಮ್ಮಿ ಪೂತ್ಕರಿಸುವ ಕುಕ್ಕಟ ಸರ್ಪಗಳು, ಹೀಗೆ ಅಖಂಡ ಶ್ವೇತ ವರ್ಣದ ಬಾಹುಬಲಿಯ ಭವ್ಯ ಮೂರ್ತಿಯನ್ನು ಕಂಡು "ನಿನ್ನ ಮುಂದೆ ನಾನೆಂಥ ಹುಲು ಮಾನವ" ಎಂಬ ದೀನ ಭಾವವನ್ನು ನಮ್ಮಲ್ಲಿ ಮೂಡಿಸುತ್ತದೆ ಎಂದು ಸೂರ್ಯನಾಥ ಕಾಮತ್‌ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶ್ರವಣಬೆಳಗೂಳದ ಗೊಮ್ಮಟ ಮೂರ್ತಿಯು ಅತ್ಯಂತ ಶ್ರೇಷ್ಠವಾಗಿದೆ. ಆದರೆ ಕರ್ನಾಟಕದಲ್ಲಿ ಇನ್ನೂ ಹಲವಾರು ಗೊಮ್ಮಟು ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ಅವುಗಳೆಂದರೆ ಕಾರ್ಕಳ, ವೇಣೂರು, ಧರ್ಮಸ್ಥಳ, ಕಳಸಾಪುರಸ ಹೊಸಕೋಟೆ, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಅರತಿಪ್ಪೂರು, ಮೈಸೂರು ಬಳಿಯ ಗೊಮ್ಮಟ ಮೂರ್ತಿಗಳು ಮುಖ್ಯವಾಗಿವೆ.

ಶ್ರವಣಬೆಳಗೂಳದ ಗೊಮ್ಮಟವನ್ನು ಹೊರತು ಪಡಿಸಿ ನೋಡಿದಾಗ ಕಾಲದ ದೃಷ್ಟಿಯಿಂದ ಅಲ್ಲದಿದ್ದರೂ ಗಾತ್ರದ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಗೊಮ್ಮಟ ಪ್ರತಿಮೆಗಳು ಶ್ರೇಷ್ಠವಾಗಿ ಗಣನೀಯವಾಗುತ್ತವೆ. ಇತ್ತೀಚೆಗೆ ಧರ್ಮಸ್ಥಳದಲ್ಲಿ ಪ್ರತಿಷ್ಠಾಪಿತವಾಗಿರುವ ಪ್ರತಿಮೆ ಈ ಎರಡಕ್ಕೂ ದೊಡ್ಡದು. ಗಾತ್ರದ ದೃಷ್ಟಿಯಿಂದ ನೋಡಿದರೆ ಶ್ರವಣಬೆಳಗೂಳದ ನಂತರದದ್ದು ಧರ್ಮಸ್ಥಳ. ಮುಂದೆ ಕಾರ್ಕಳ ಹಾಗೂ ವೇಣೂರು ಪ್ರತಿಮೆಗಳು ಕ್ರಮವಾಗಿ ಪರಿಗಣಿಸಬಹುದು. ಆದರೆ ಧರ್ಮಸ್ಥಳದ ಪ್ರತಿಮೆ ಇತ್ತೀಚಿನದ್ದಾಗಿದೆ.

ಕಾರ್ಕಳದ ಗೊಮ್ಮಟ ಮೂರ್ತಿಯ ಪ್ರತಿಮೆ ಸ್ಥಾಪನೆ ಮಾಡಿದವರೂ ಕಾರ್ಕಳವನ್ನು ಆಳುತ್ತಿದ್ದ ಸಾಂತರ ಎಂಬ ಕಿರುರಾಜವಂಶದ ಅರಸ. ಈ ಸಾಂತರ ವಂಶದ ಬಗ್ಗೆ ಮೊದಲ ಉಲ್ಲೇಖವು ಕದಂಬ ಹರಿವರ್ಮನ ಕ್ರಿ. ಶ. 526 ರ ಸಂಗೊಳ್ಳಿ ಶಾಸನದಲ್ಲಿ ಬಂದಿದೆ. ಈ ಸಾಂತರು ರಾಷ್ಟ್ರಕೂಟ ಅಮೋಘವರ್ಷನ ಮಾಂಡಲಿಕ ಎಂಬ ಉಲ್ಲೇಖ ಕ್ರಿ. ಶ. 831ರಲ್ಲಿ ಬರೆದ ಜಯಕೇಶಿ ಶಾಸನದಲ್ಲಿ ದೊರೆಯುತ್ತದೆ. ಈ ಸಾಂತ ವಂಶದವರು ಮೂಲತಃ ಜೈನರಾಗಿದ್ದರಷ್ಟೇ ಅಲ್ಲದೆ ಬಾಹುಬಲಿಯ ಬಗ್ಗೆ ವಿಶೇಷ ಭಕ್ತಿ ಉಳ್ಳವರಾಗಿದ್ದರು. ಈ ಸಾಂತರು ವಂಶದ ಅರಸ ವೀರ ನರಸಿಂಹನು ಕಾರ್ಕಳವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಈತನ ಮಗನಾದ ವೀರಪಾಡ್ಯನು ತನ್ನ ಗುರು ಲಲಿತ ಕೀರ್ತಿ ಭಟ್ಟಾರಕರ ಮಾರ್ಗದರ್ಶನದಲ್ಲಿ ಕಾರ್ಕಳದ ಗುಡ್ಡದ ಮೇಲೆ ನಲವತ್ತೊಂದು ಅಡಿ ಐದು ಅಂಗುಲ ಎತ್ತರದ ಗೊಮ್ಮಟ ಮೂರ್ತಿಯನ್ನು ಕೆತ್ತಿಸಿದನು.[3]

ವೇಣೂರು ಗೊಮ್ಮಟ ಮೂರ್ತಿಯನ್ನು ಚಾವುಂಡರಾಯ ವಂಶಿಕನಾದ ಅಜಿಲ ವಂಶದಲ್ಲಿ ಆಳುತ್ತಿದ್ದ ರಾಯಕುಮಾರನೆಂಬ ಅರಸನ ಸೋದರಳಿಯನು, ರಾಯಕುಮಾರನ ಸೋದರಿ ಪಾಂಡ್ಯಕ್ಕೆಯ ಮಗನೂ ಆದ ತಿಮ್ಮಣ್ಣಾಜಿಲನು 1604 ರಲ್ಲಿ ವೇಣೂರಿನ ಗುಡ್ಡದ ಮೇಲೆ 35 ಅಡಿ ಎತ್ತರದ ಗೊಮ್ಮಟನನ್ನು ಶ್ರವಣಬೆಳಗೂಳದ ಚಾರುಕೀರ್ತಿ ಪಂಡಿತರ ಸಲಹೆಯಂತೆ ನಿರ್ಮಿಸಿದ್ದಾನೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬಸ್ತಿ ತಿಪ್ಪೂರು ಗಂಗರ ಕಾಲದಲ್ಲಿಂದಲೂ ಒಂದು ಗಣ್ಯ ಜೈನರ ಕೇಂದ್ರವಾಗಿದೆ. ಈ ಊರು ಅರತಿಪ್ಪೂರು (ಕಲ್ಲುಗಳಿಂದ ತುಂಬಿದೆಂದು) ಇಲ್ಲವೇ ಬಸ್ತಿ ತಿಪ್ಪೂರು ಎಂದು ಪ್ರಸಿದ್ದಿ. ಇದು ಜೈನ ಧಾರ್ಮಿಕ ಚಟುವಟಿಕೆಗಳು ನಡೆದ ಸ್ಥಳವಾದ್ದರಿಂದ ಈ ತಿಪ್ಪೂರು ಬಳಿ ಇರುವ ದೊಡ್ಡ ಬೆಟ್ಟದಲ್ಲಿ 10 ಅಡಿ ಎತ್ತರದ ಹೊಯ್ಸಳರ ಕಾಲದ ಒಂದು ಗೊಮ್ಮಟ ಪ್ರತಿಮೆ ಇದೆ. ಈ ಪ್ರತಿಮೆಯ ಪ್ರತಿಷ್ಠಾಪಕರು ಯಾರೆಂಬ ಬಗ್ಗೆ ಏನೊಂದು ಕುರುಹು ಇಲ್ಲ. ಕಿರಿದಾದರೂ ದರ್ಶನೀಯವಾದ ಮೂರ್ತಿ ಇದು.

ಮೈಸೂರು ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಮಾವಿನಕೆರೆಯ ಬಳಿಯ ಬಸ್ತಿ ಹೊಸಕೋಟೆಯಲ್ಲಿ ಬೆಟ್ಟವೊಂದರ ಮೇಲೆ ಸುಮಾರು 18 ಅಡಿ ಎತ್ತರದ ಒಂದು ಬಳಪದ ಕಲ್ಲಿನ ಹೊಯ್ಸಳರ ಕಾಲದ ಸುಂದರ ಬಾಹುಬಲಿ ಮೂರ್ತಿ ಇದೆ. ಇದರ ಸ್ಥಾಪಕರು ಯಾರೆಂಬುದರ ಬಗ್ಗೆ ಖಚಿತವಾದ ಮಾಹಿತಿ ಇಲ್ಲದಿದ್ದರೂ ಹೊಯ್ಸಳರ ಸೇನಾನಿ

ಪುನಿಸಮಯ್ಯನೆಂಬಾತನು ಇದರ ಸ್ಥಾಪಕನೆಂಬುದು ಸಾಧಾರಣವಾದ ಊಹೆಯೊಂದಿದೆ ಎಂಬ ಮಾತನ್ನು ಸೂರ್ಯನಾಥ್ ಕಾಮಥ್‌ರವರು ತಮ್ಮ ಗೊಮ್ಮಟ ಎನ್ನುವಂತಹ ಕೃತಿಯಲ್ಲಿ ತಿಳಿಸಿದ್ದಾರೆ.

ಇನ್ನೊಂದು ಹೊಯ್ಸಳರ ಕಾಲದ ಭಗ್ನ ಪ್ರತಿಮೆಯು ಹಳೇಬೀಡಿನಲ್ಲಿ ಭಾರತೀಯ ಪುರಾತತ್ವ ಇಲಾಖೆಯವರು ಉತ್ಖನನ ನಡೆಸುತ್ತಿರಲಾಗಿ ಚೂರು ಚೂರಾದ ಸ್ಥಿತಿಯಲ್ಲಿ ದೊರೆತಿದ್ದು ಅದನ್ನು ಜೋಡಿಸಿ ಅಲ್ಲಿನ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಸುಮಾರು 14 - 15 ಅಡಿ ಎತ್ತರದ ಈ ಸುಂದರ ಮೂರ್ತಿಯ ಕೆಲವು ಭಾಗಗಳು ದೊರೆಯದೇ ಇದ್ದರೂ ಖಂಡಿತ ಸ್ಥಿತಿಯಲ್ಲಿಯೂ ಈ ಮೂರ್ತಿಯು ತನ್ನ ಸೌಂದರ್ಯವನ್ನು ಸಾರಿ ಹೇಳುತ್ತದೆ ಎಂಬ ಮಾತನ್ನು ಪಂಡಿತರು ತಿಳಿಸಿದ್ದಾರೆ.

ಮೈಸೂರಿನಿಂದ 16 ಮೈಲಿ ದೂರದ ಬೆಳಗೊಳದ ಬಳಿಯ ಗೊಮ್ಮಟಗಿರಿ ಎಂದು ಕರೆಯಲಾಗುವ ಒಂದು ಸ್ಥಳದಲ್ಲಿ ಹಿಂದೆ ಶ್ರವಣಗುಡ್ಡ ಎಂದು ಕರೆಯುತ್ತಿದ್ದ ಸುಮಾರು 100 ಅಡಿ ಬೆಟ್ಟದ ಮೇಲೆ 18 ಅಡಿ ಎತ್ತರದ ಬಾಹುಬಲಿಯ ಒಂದು ಪ್ರತಿಮೆ ಇದೆ. ಜೈನರಾದ ಪಿರಿಯಾಪಟ್ಟಣದ ಚಂಗಾಳ್ವ ದೊರೆಗಳು ಇದನ್ನು ಕಟ್ಟಿರಬೇಕೆಂದು ಪ್ರೊ. ಶಂಭು ಚಂದ್ರರವರು ಅಭಿಪ್ರಾಯ ಪಡುತ್ತಾರೆ.[3]

ಶ್ರವಣಬೆಳಗೊಳದ ಗೊಮ್ಮಟ ಮೂರ್ತಿಯ ನಂತರದ ಸ್ಥಾನವನ್ನು ಧರ್ಮಸ್ಥಳದಲ್ಲಿ ನಿರ್ಮಿಸಿರುವ 42 ಅಡಿ ಎತ್ತರವಿರುವ ವಿಗ್ರಹವನ್ನು ಇತ್ತೀಚಿಗಿನ ದಿನಗಳಲ್ಲಿ 1982 ರಲ್ಲಿ ವೀರೇಂದ್ರ ಹೆಗ್ಗಡಿಯವರ ನೇತೃತ್ವದಲ್ಲಿ ಪ್ರತಿಷ್ಠಾಪಿಸಲಾಯಿತು. ಇದು ಭಾರತದ ಅತ್ಯಂತ ಎತ್ತರದ 2ನೇ ಏಕಶಿಲಾ ಮೂರ್ತಿಯಾಗಿದೆ.

ಜೈನ ಧರ್ಮದ ಭವ್ಯ ಮೂರ್ತಿಯಾದ ಬಾಹುಬಲಿಗೆ ಹನ್ನೆರಡು ವರ್ಷಕ್ಕೊಮ್ಮೆ ಮಹಾಮಸ್ತಕಾಭಿಷೇಕವನ್ನು ಮಾಡುವ ಮೂಲಕ ಜೈನ ಧರ್ಮದಲ್ಲಿ ಬಾಹುಬಲಿಗೆ ಇರುವ ಸ್ಥಾನವನ್ನು ವಿಜೃಂಭಿಸಲಾಗುತ್ತದೆ.

ಅಡಿ ಟಿಪ್ಪಣಿ

1. ಡಾ. ಸರಸ್ವತಿ ವಿಜಯ ಕುಮಾರ್ 'ಕನ್ನಡ ಆದಿತೀರ್ಥಂಕರರ ಚರಿತೆಗಳು' ಪುಟ 54
- ಸವಿ ಪ್ರಕಾಶನ, ಮೈಸೂರು - 1994

2. ಬಿ. ಬಿ. ಮಹಿಷವಾಡಿ 'ಜೈನ ವಾಙ್ಮಯ ಪರಿಶೋಧನೆ' ಪುಟ 2, 3, 4
- ಜ್ಞಾನ ವಿಕಾಸನ ಪ್ರಕಾಶನ, ಧಾರವಾಡ - 1977

3. ಸೂರ್ಯನಾಥ್ ಕಾಮಥ್ 'ಗೊಮ್ಮಟ' ಪುಟ 31, 42
- ಪ್ರಸಾರಂಗ, ಬೆಂಗಳೂರು ವಿ.ವಿ. - 1999

4. ಎಂ. ಬಿ. ವಸಂತರಾಜು 'ಜೈನ ಇತಿಹಾಸ ದೀಪಿಕೆ' ಪುಟ 229-37
- ವ. ರ. ಪ್ರಕಾಶನ, ಮೈಸೂರು - 1997

5. ಜಿ. ಎಸ್. ಶಿವರುದ್ರಪ್ಪ 'ಶ್ರವಣಬೆಳಗುಳ ಒಂದು ಸಮೀಕ್ಷೆ'
- ಬೆಂಗಳೂರು ವಿಶ್ವವಿದ್ಯಾಲಯ - 1983

6. ಡಾ. ಹೆಚ್. ಎಸ್. ವೆಂಕಟೇಶ ಮೂರ್ತಿ, ಬಾಹುಬಲಿ ಪುಟ 24 - 25
ಸ್ವಪ್ನ ಬುಕ್ ಹೌಸ್, ಬೆಂಗಳೂರು - 2007

ಅಧ್ಯಾಯ - ಮೂರು
ಕನ್ನಡ ಕಾವ್ಯದ ಕಥಾ ವಸ್ತುವಾಗಿ ಬಾಹುಬಲಿ

ಸಾಹಿತ್ಯ ಎಂಬುದು ಒಂದು ಅಗಾಧವಾದ ಶಕ್ತಿ; ಈ ಶಕ್ತಿಯು ಮಾನವನಲ್ಲಿ ಅಡಕವಾಗಿರುವುದು ಮಹತ್ವದ್ದಾಗಿದೆ. ಗದ್ಯ ಪದ್ಯಗಳಿಂದ ಮಿಶ್ರಿತವಾಗಿ ರಚಿತವಾದುದ್ದನ್ನು ಸಾಹಿತ್ಯ ಎನ್ನುತ್ತಾರೆ. ಸಾಹಿತ್ಯದಲ್ಲಿ ಕಾವ್ಯ ಎಂಬ ಪದವು ಪರ್ಯಾಯವಾಗಿದೆ. ವಿಶಿಷ್ಟವಾದ ಭಾಷಾ ಬಳಕೆಯಿಂದ ಕೂಡಿದ್ದು ಕಾವ್ಯ.

ಕ್ರಿ. ಶ. 981 ರಲ್ಲಿ ಬಾಹುಬಲಿಯ ಪ್ರತಿಮೆಯು ಬೆಳ್ಗೊಳದಲ್ಲಿ ಚಾವುಂಡರಾಯನಿಂದ ರಚಿತವಾಗುವ ಮುಂಚೆಯೆ ಆದಿಕವಿ ಎಂದು ಪ್ರಖ್ಯಾತನಾದ ಪಂಪ ಕವಿಯು 'ಆದಿಪುರಾಣ' ಎಂಬ ಕಾವ್ಯವನ್ನು ರಚಿಸಿದ್ದಾನೆ. ಈ ಕನ್ನಡದ ಪ್ರಥಮ ಕಾವ್ಯದಲ್ಲಿ ಹದಿನಾರು ಅಶ್ವಾಸನಗಳಿವೆ. ಈ ಕಾವ್ಯದಲ್ಲಿ ಕೊನೆಯ ಮೂರು ಅಶ್ವಾಸನಗಳಲ್ಲಿ ಬಾಹುಬಲಿಯನ್ನು ತನ್ನ ಕಾವ್ಯ ಭಾಗದ ನಾಯಕನಾಗಿ ಮಾಡಿಕೊಂಡು ಅದ್ಭುತವಾಗಿ ಚಿತ್ರಿತವಾಗಿದೆ. ಪಂಪನು ತನ್ನ ಕಾವ್ಯ ಶೈಲಿಯಿಂದ ಬಾಹುಬಲಿಯ ಪಾತ್ರಕ್ಕೆ ಪೂರಕವಾಗುವಂತೆ ಭರತ, ಭರತನ ದೂತರು ಮಂತ್ರಿಗಳ ಪಾತ್ರವನ್ನು ನಿರ್ಮಿಸಿಕೊಂಡಿದ್ದಾನೆ. ಕಾವ್ಯವನ್ನು ತನ್ನದೇ ಆದ ವರ್ಣನಾ ಶೈಲಿಯಲ್ಲಿ ಸುಂದರವಾದ ರಸಭಾವಗಳನ್ನು ತುಂಬಿ ಅತ್ಯುತ್ತಮವಾಗಿ ಚಿತ್ರಿಸಿದ್ದಾನೆ. ಪಂಪನು ತನ್ನ ಕಾವ್ಯದಲ್ಲಿ ಬಾಹುಬಲಿಯನ್ನು ಶ್ರೇಷ್ಠನಾಗಿಸುವಲ್ಲಿ ಬಳಸಿರುವ ಕಥಾ ಕೌಶಲ್ಯ ಅದ್ಭುತವಾಗಿದೆ.[4]

ಪಂಪನ ನಂತರ ಕನ್ನಡದಲ್ಲಿ ಗಂಗರ ಮಂತ್ರಿಯಾದ ಚಾವುಂಡರಾಯರ 'ಚಾವುಂಡರಾಯ ಪುರಾಣ' [2] ಎಂಬ ಕಾವ್ಯವನ್ನು ರಚಿಸಿದ್ದಾನೆ. ಈ ಕಾವ್ಯದಲ್ಲಿ ಆದಿಪುರಾಣ ಭಾಗದ ಕಥೆಯಲ್ಲಿ ಪಂಪನಂತೆಯೆ ಚಾವುಂಡರಾಯನೂ ಸಹ ಭರತ ಬಾಹುಬಲಿಯರ ಯುದ್ಧ ಸನ್ನಿವೇಶವನ್ನು ಚಿತ್ರಿಸಿದ್ದು, ಬಾಹುಬಲಿಯ ಶ್ರೇಷ್ಠತೆಯನ್ನು ಉತ್ತಮವಾಗಿ ತಂದಿದ್ದಾರೆ. ಇವನು ಮೂಲ ಕಥೆಯನ್ನು ಅವಲೋಕಿಸಿದ್ದರೂ ಸಹ ತಮ್ಮದೇ ರೀತಿಯಲ್ಲಿ ಅದ್ಭುತವಾದ ವಿವರಣೆಯನ್ನು ನೀಡುವುದರ ಮೂಲಕ ಬಾಹುಬಲಿಯನ್ನು ಮೇಲ್‌ಸ್ತರಕ್ಕೆ ಏರಿಸಿದ್ದಾನೆ.

ಗೊಮ್ಮಟ ಅಥವಾ ಬಾಹುಬಲಿ ಮೂರ್ತಿಯನ್ನು ಕಂಡವರು ಅಥವಾ ನೆನೆದಂತಹ ಅನೇಕ ಕವಿಗಳು ತಮ್ಮದೆ ರೀತಿಯಲ್ಲಿ ತಮ್ಮಲ್ಲಿ ಉಂಟಾದ ಭಾವನೆಗಳನ್ನು ಕಾವ್ಯಗಳ ಮೂಲಕ ವ್ಯಕ್ತಿ ಪಡಿಸಿದ್ದಾರೆ. ಇವರು ತಮ್ಮದೇ ಭಾಷಾ ಶೈಲಿಯಲ್ಲಿ ಬಾಹುಬಲಿಯ ಕಥೆಯನ್ನು ಕನ್ನಡದಲ್ಲಿ ಪುಷ್ಟಿಗೊಳಿಸಿದ್ದಾರೆ.

ಶ್ರವಣಬೆಳಗೊಳದ ಬಾಹುಬಲಿಯ ಮೂರ್ತಿ ಕೇವಲ ಶಿಲ್ಪಿಗಳನ್ನು ಕವಿಗಳನ್ನೂ ಪ್ರೇರೇಪಿಸಿದ್ದಾನೆ. ಈ ಮೂರ್ತಿಯ ಭವ್ಯತೆಯನ್ನು ಕಂಡು ಕ್ರಿ. ಶ. 1180 ರಲ್ಲಿ ರಚಿತವಾದ ಕವಿ ಬೊಪ್ಪಣನ "ಗೊಮ್ಮಟ ಸ್ತುತಿ"ಎಂಬುದು ಕನ್ನಡದ ಶಾಸನ ರೂಪದ ಮೊಟ್ಟ ಮೊದಲನೆಯ ಕಾವ್ಯವಾಗಿದೆ. ಅಷ್ಟೇ ಅಲ್ಲದೆ ಕನ್ನಡ ಏಕೈಕ ಶಾಸನ ಕಾವ್ಯವಾಗಿದೆ. 32 ವೃತ್ತಗಳುಳ್ಳ ಈ ಕಾವ್ಯ ಸ್ತುತಿ ಬಾಹುಬಲಿಯ ದಿವ್ಯ ವ್ಯಕ್ತಿತ್ವದ ಉದಾತ್ತ ಕಥನವಾಗಿದೆ.[1]

"ಅತಿ ತುಂಗಾಕೃತಿಯಾದೊಡೆ ಆಗದು ಅದರೊಳ್ ಸೌಂದರ್ಯ ಮೌನ್ನತ್ಯಮುಂ -
ನುತ ಸೌಂದರ್ಯಮುಮಾಗೆಮತ್ತತಿಶಯಂ ತಾನಾಗ ದೌನ್ನತ್ಯಮುಂ
ನುತ ಸೌಂದರ್ಯಮಂ ಊರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವು ಏಂ
ಕ್ಷಿತಿ ಸಂಪೂಜ್ಯಮೋ ಗೊಮ್ಮಟೇಶ್ವರ ಜಿನ ಶ್ರೀ ರೂಪಮಾತ್ಮೋಪಮಂ

- ಸಾಮಾನ್ಯವಾಗಿ ಅತ್ಯಂತ ಎತ್ತರವಾದ ಶಿಲ್ಪದಲ್ಲಿ ಸೌಂದರ್ಯ ಹಾಗೂ ಔನ್ನತ್ಯಗಳು ಒಟ್ಟಾಗಿ ಮೂಡಲಾರವು. ಒಂದು ವೇಳೆ ಪ್ರಶಂಸೆಗೆ ಅರ್ಹವಾದ ಸೌಂದರ್ಯ ಒದಗಿದರೂ ಅದು ಅತಿಶಯತೆಯನ್ನು ಪಡೆಯಲಾರದು. ಹೀಗಿದ್ದರೂ ಈ ಗೊಮ್ಮಟ ಮೂರ್ತಿಯು ವಿಗ್ರಹದಲ್ಲಿ ಔನ್ನತ್ಯವೂ ಸೌಂದರ್ಯವೂ ಊರ್ಜಿವಾದ ಅತಿಶಯತೆಯೂ ಮುಪ್ಪರಿಗೊಂಡು ಗೊಮ್ಮಟನ ಈ ಮೂರ್ತಿ ಕ್ಷಿತಿ ಸಂಪೂಜ್ಯವಾಗಿದೆ. ಹಾಗೆ ನೋಡಿದರೆ ಈ ಗೊಮ್ಮಟ ಮೂರ್ತಿಯು ಕೇವಲ ಮತ್ಯಾವ ಚೆಲುವಿನ ಮೂರ್ತಿಯಲ್ಲೂ ಇಲ್ಲ. ಇದು ಗೊಮ್ಮಟನ ಶ್ರೀರೂಪ ಒಳಗಿನ ಆತ್ಮಕ್ಕೆ ನಿರ್ಮಿಸಿದ ಹೋಲಿಕೆಯಷ್ಟೇ! ಸೌಂದರ್ಯವು ಶ್ರೇಷ್ಟತೆಯನ್ನು ಅತಿಶಯತೆಯನ್ನು ಪಡೆಯುತ್ತದೆ. ಅದು ಒಳಗಿನ ಆತ್ಮಸೌಂದರ್ಯದ ಪ್ರತೀಕವಾಗಿದೆ ಎಂಬ ಮಾತನ್ನು ಬೊಪ್ಪಣ ಕವಿಯು ತನ್ನ ಗೊಮ್ಮಟ ಸ್ತುತಿಯಲ್ಲಿ ನಿರೂಪಿಸಿದ್ದು, ಬಾಹುಬಲಿ ಮೂರ್ತಿಯ ಸೌಂದರ್ಯ ಬೆಡಗಿನ ಅಂತರಾತ್ಮವನ್ನು ತಿಳಿಸಿದ್ದಾನೆ.

ಹದಿನಾರನೆಯ ಶತಮಾನದಲ್ಲಿ ಜೀವಿಸಿದಂತಹ ರತ್ನಾಕರವರ್ಣಿಯ 'ಭರತೇಶ ವೈಭವವು' ಎಂಬ ಕಾವ್ಯದಲ್ಲಿ ಭರತನ ಸಾಮರ್ಥ್ಯ ಪ್ರತಿಷ್ಠೆಯನ್ನು ವೈಭವವನ್ನು ದಿಗ್ವಿಜಯವನ್ನು ಸುಮಧುರವಾಗಿ ವರ್ಣಿಸಿದ್ದಾನೆ. ಭರತನ ಪಾತ್ರಕ್ಕೆ ಹೆಚ್ಚು ಮನ್ನಣೆ ನೀಡಿದ್ದರೂ ಭರತನ ಪಾತ್ರವನ್ನು ಪುಷ್ಟಿಗೊಳಿಸುವ ಪ್ರಯತ್ನದಲ್ಲಿ ಬಾಹುಬಲಿಯ ಪಾತ್ರವನ್ನು ತನ್ನ ಕಾವ್ಯದಲ್ಲಿ ಗೌಣಾಗಿ ನಿರೂಪಿಸುವಾಗ ತನ್ನದೇ ಕಾವ್ಯ ಶೈಲಿಯ ಅದ್ಭುತವನ್ನು ಮೆರಿದಿದ್ದಾನೆ. ಅಂದರೆ ಭರತನ ದಿಗ್ವಿಜಯದ ನಂತರ ಬರುವ ಭರತ ಬಾಹುಬಲಿಯರ ಯುದ್ಧ ಸಂದರ್ಭದಲ್ಲಿ ಕವಿ

ಬಾಹುಬಲಿಯಿಂದ ವ್ಯಂಗ್ಯದ ಮಾತುಗಳನ್ನು ಆಡಿಸುವ ಮೂಲಕ ಕುಬ್ಜನಾಗಿಸಿದ್ದಾನೆ. ರತ್ನಾಕರನು ತನ್ನ ಕಾವ್ಯದಲ್ಲಿ ಬಾಹುಬಲಿಯ ಪಾತ್ರ ತಂದಿರುವುದು ಭರತನ ಹಿರಿಮೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇವಲ ಮೂಲ ನಾಯಕನಿಗೆ ಪ್ರತಿನಾಯಕನಾಗಿ ಹಾಗೂ ಪೋಷಕ ಪಾತ್ರವಾಗಿ ಬಾಹುಬಲಿಯನ್ನು ಚಿತ್ರಿಸಿದ್ದಾನೆ.

ಹದಿನಾರನೆಯ ಶತಮಾನದ ನಂತರ ಬಂದಂತಹ ಆಧುನಿಕ ಕಾವ್ಯಗಳಲ್ಲಿ ಬಾಹುಬಲಿಯನ್ನು ಅನೇಕ ಕನ್ನಡ ಕವಿಗಳು ತಮ್ಮದೆ ಕಾವ್ಯ ಶೈಲಿಯಲ್ಲಿ ಅನೇಕ ಕವಿತೆಗಳಲ್ಲಿ ನಿರೂಪಿಸಿದ್ದಾರೆ.

ಶ್ರವಣಬೆಳ್ಗೊಳದಲ್ಲಿ ಬಾಹುಬಲಿ ಮೂರ್ತಿ ನಿರ್ಮಾಣವಾಗಿ ಒಂದು ಸಾವಿರ ವರ್ಷವಾದರೂ ಆ ದಿವ್ಯ ಮೂರ್ತಿ ಇಂದಿಗೂ ಅನೇಕ ಕವಿಗಳ ಕಾವ್ಯ ರಚನೆಗೆ ಪ್ರೇರಣ ಶಕ್ತಿಯಾಗಿ ಪರಿಣಮಿಸಿದೆ. ಪಂಪನ ಆದಿಪುರಾಣದಲ್ಲಿ ಮೊಟ್ಟ ಮೊದಲಿಗೆ ಬಾಹುಬಲಿಯ ಯೋಗ ಮೂರ್ತಿಯಾಗಿ ನಿಂತ ವರ್ಣನೆಯನ್ನು ನೋಡಿದ್ದೇವೆ. ಈ ವರ್ಣನೆ ಗೊಮ್ಮಟ ಮೂರ್ತಿಯನ್ನು ಕಡೆಯುವಾಗ ಶಿಲ್ಪಿಯ ಮನಸ್ಸಿನಲ್ಲಿಯೂ ಅನುಕರಿಸಿರಲೇ ಬೇಕು.[3]

ಗೊಮ್ಮಟ ಶಿಲ್ಪದಿಂದ ಪ್ರೇರಣೆಗೊಂಡು ರಚಿತವಾದ ಹೊಸಗನ್ನಡ ಕೃತಿಗಳಲ್ಲಿ ರಾಷ್ಟ್ರಕವಿ ಕುವೆಂಪು ಅವರು ಮೂರು ಕವಿತೆಗಳ ರಚನೆಗಳನ್ನು ಗಮನಿಸಬಹುದು. ಮುಖ್ಯ ಸಂಗತಿ ಎಂದರೆ ಕುವೆಂಪು ಅವರು ಗೊಮ್ಮಟ ಮೂರ್ತಿಯ ಚೆಲುವನ್ನು ವರ್ಣಿಸಿದಾಗ ಕುವೆಂಪು 'ಗೋಮ್ಮಟೇಶ್ವರ' ಎಂಬ ಕವಿತೆಯನ್ನು ರಚಿಸಿದ್ದಾರೆ.

ಶ್ರೀ ಗೋಮ್ಮಟೇಶ್ವರಾ ಗೂಢತರ ಮೌನದಿಂ -
ದೇಕಾಕಿಯಾಗಿ ನೀನಿಂತು ನಿಂತು
ಶತಮಾನಗಳೆಷ್ಟು ದಣಿವ ಕಾಣದೆ ಕಳದೆ?
ಸ್ಯೆರಣೆಯಾವುದ್ಯೆ? ಯಾವ ಶಾಂತಿ
ನಿನ್ನ ಹೃದಯವನೊಲಿದು ನಿತ್ಯತೆಯ ನೀಡಿತ್ಯೆ
ಕಾಲದಾಕೋಟಲೆಯ ಸಹಿಸುವಂತೆ?
ನಿರ್ವಾಣ ತಾನನಿರ್ವಚನೀಯವೆಂಬ ನಿಜಮಂ
ತಿಳಿಸಲೇಂ ಮೌನವ್ರತವಾಂತೆಯೋ ಮೌನಿವರ್ಯ!

ಈ ಕವಿತೆಯಲ್ಲಿ ಗೋಮಟೇಶ್ವರನ ಗೂಢತರ ಮೌನವೇ ಕವಿತೆಯ ಮುಖ್ಯ ಭಾಗ. ಈ ಮೌನದಿಂದ ಅಭಿವ್ಯಕ್ತವಾಗುವ ಭಾವ ಯಾವುದು ಎಂದು ಕವಿ ಚಿಂತಿಸುತ್ತಾರೆ.!

ಆನಂತರ ಬಾಹುಬಲಿಯ ಗೂಢತರ ಮೌನವನ್ನು ಅವರ ದಾಟಿಯಲ್ಲಿ ಅರ್ಥೈಸುತ್ತಾರೆ.

ಒಂದು ಸಾವಿರ ವರುಷದ ಇತಿಹಾಸವಿರುವ ಗೊಮ್ಮಟ ಮೂರ್ತಿಯು ಭಾರತ ಮಾತೆಗೆ ಪರಕೀಯರು ಮಾಡಿದ ಅನ್ಯಾಯವನ್ನು ಕಣ್ಣಾರೇ ಕಂಡಿರಬೇಕಲ್ಲವೇ? ಮೋಸದಿಂದ ಭಾರತ ಮಾತೆಯ ಆಭರಣವನ್ನು ಸುಲಿಗೆ ಮಾಡಿರುವುದಕ್ಕೆ ನೀನು ಸಾಕ್ಷಿಯಾಗಬೇಕೆಂದು ಕವಿ ಗೊಮ್ಮಟೇಶ್ವರನನ್ನು ವ್ಯಂಗ್ಯ ಮಾಡುತ್ತಾರೆ. ಹೀಗೆ ಕವಿತೆ ವರ್ತಮಾನದ ನೆಲೆಗೆ ಬರುತ್ತದೆ. ಸಮಕಾಲಿನ ಸ್ಪರ್ಷವಾದ ಕೂಡಲೇ ಕುವೆಂಪು ಅವರ ಸಾಮಾಜಿಕ ಪ್ರಜ್ಞೆ ಜಾಗೃತವಾಗುತ್ತದೆ.

ನಿನ್ನ ಪೂಜಿಪ ಭಕ್ತರೀ ಧರೆಯ ಬಡಜನಗಳಂ
ಬರದಿಂದ ಪೊರೆಯದೆಯೆ ಘೃತ ತೈಲವಾಹಿನಿಗಳಿಂ
ನಿನಗೆ ಜಳಕಂ ಗೈವುದಂ ಕಂಡು ಧರ್ಮ ಮುನಿಸಿಂ
ಪರಿಹಾಸ್ಯಮಾಡಿ ನಸುನಗುತಲಿಹೆ ಗೋಮ್ಮಟೇಶ!

ಗೋಮಟೇಶ್ವರ ಮಹಾಮಸ್ತಕಾಭಿಷೇಕ ಸಂದರ್ಭದಲ್ಲಿ ಹಾಲು ತುಪ್ಪಗಳನ್ನು ಸರಿಯುವ ಬಗ್ಗೆ ಕವಿ ಈ ಮೂಲಕ ತಮ್ಮ ಅಸಮ್ಮತಿಯನ್ನು ಸೂಚಿಸುತ್ತಿದ್ದಾರೆ. ಅದೇ ವೆಚ್ಚವನ್ನು ಬಡವರಿಗೆ ಸಹಾಯ ಮಾಡಲು ವಿನಿಯಾಗಿಸಬಹುದಿತ್ತಲ್ಲವೆ. ಆದುದರಿಂದಲೆ ಬಾಹುಬಲಿಯು ತನ್ನ ಭಕ್ತರನ್ನು ಪರಿಹಾಸ್ಯ ಮಾಡಿ ನಗುತ್ತಿದ್ದಾನೆ ಎಂದು ಕವಿ ಭಾವಿಸುತ್ತಾರೆ.

ಕವಿಯು ದೃಷ್ಟಿ ಕವಿತೆಯ ಕೊನೆಯ ಭಾಗದಲ್ಲಿ ಶಿಲ್ಪಿಯ ಕಡೆ ಹೋಗುತ್ತಿದೆ. ಇಂತಹ ಮಹಾ ಮೂರ್ತಿಯನ್ನು ಕೆತ್ತಿದ ಶಿಲ್ಪಿಯ ಸಾಧನೆ ಯಾವ ಯೋಗ ಸಾಧನೆಗಿಂತ ಕಡಿಮೆ.

ನಿನ್ನ ಸಿದ್ದಿಗೆ ಪರಿದಾವುದೈ ಶಿಲ್ಪಿಸಿದ್ದ?
ನೀನೆ ಜೀವನ್ಮುಕ್ತ ನಿನ್ನದೈ ಬಹ್ಮಯೋಗಂ

ಎನ್ನುತ್ತಾ ಶಿಲ್ಪಿಯನ್ನು ಹೊಗಳುತ್ತಾ ಹೇಳಿದ್ದಾರೆ.

ಶ್ರವಣಬೆಳಗೊಳದ ಗೋಮಟೇಶ್ವರನ ಸಾನಿಧ್ಯದಲ್ಲಿ ಕುವೆಂಪು ರಚಿಸಿರುವ ಎರಡನೆಯ ಕವಿತೆಯ ಶೀರ್ಷಿಕೆ 'ನಗ್ನತೆ' ಬಾಹುಬಲಿ ಮೂರ್ತಿಯನ್ನು ಈ ಕವಿತೆಯನ್ನು ರಚಿಸಿದ್ದಾರೆ.

ದೈತ್ಯ ಕಲೆಯಿದು ದಿವ್ಯ ಕಲೆ! ಕಲ್ಲಿನಲಿ
ನಿರ್ಜೀವ ಜಡತೆಯಲಿ, ನಗೆಗೆಡೆಯ ನಗ್ನತೆಗೆ
ಇಂಥ ಭೀಮಾಕೃತಿಗೆ ಚಿರಜೀವಗಾಂಭಿರ್ಯ
ಭವ್ಯ ತಾಮುದ್ರೆಯನೊತ್ತಿದೀ ದಿವ್ಯಕಲೆ
ದೈತ್ಯಕಲೆ ಎದೆಯಿದ್ದರಿಲ್ಲಿ ನಗು ನೋಡುವಂ
ಬತ್ತಲೆಗೆ ಕಿಲಕಿಲನೆ ನಗುವ ಓ ಲಘು ಹೃದಯ!

ಈ ಭಾಗದಲ್ಲಿ ಗೋಮ್ಮಟೇಶ್ವರನು ದಿಗಂಬರ ಮಹಾನಿರ್ವಣ ಮೂರ್ತಿಯಾಗಿ ಮೈವೆತ್ತಿದೆ ಎಂದು ಕವಿ ಭಾವಿಸುತ್ತಾರೆ.

ನಗ್ನತೆಗೆ ನಾಚದಿಹ ಬೆತ್ತಲೆಗೆ ಬೆದರದಿಹ ಬಾಹುಬಾಲಿಯನ್ನು ಸುಳ್ಳು ನಾಗರೀಕ ವೇಷದಿಂದ ಅಲ್ಪತೆಯನ್ನು ಮುಚ್ಚಿಮೆರಗು ಬೆರಗಿನ ಮೋಸ ಗೈಯದವನು ಅಲ್ಪತಾಲವಲೇಶವಿಲ್ಲದೆ ಎಲ್ಲಾ ಸಮಯದಲ್ಲೂ ಭೂಮನಾಗಿರುವ ಮಹತೋಮಹೀಯನಿಗೆ ಮುಚ್ಚುಮರೆ ಏತಕ್ಕೆ ಎನ್ನುತ್ತಾರೆ.

ಹೀಗೆ ಆಧ್ಯಾತ್ಮ ಮೂರ್ತಿಯಾದಂತಹ ಗೋಮ್ಮಟನನ್ನು ಸಾಮಾಜಿಕ ಎಚ್ಚರದ ಪ್ರತಿಮೆಯಾಗಿ ಕಂಡದ್ದು ಕುವೆಂಪು ಅವರ ಈ ಕವಿತೆಯ ಅನನ್ಯತೆ.

ಕುವೆಂಪು ಅವರು ಮೂರನೆ ಕವಿತೆಯನ್ನು ಮೈಸೂರ ಬಳಿ ಇರುವ ಗೋಮ್ಮಟಗಿರಿಯಲ್ಲಿ ಗೊಮ್ಮಟ ಮೂರ್ತಿಯೊಂದು ಪತ್ತೆಯಾಗಿ ಈ ಮೂರ್ತಿಗೆ ಜೀರ್ಣೋದ್ಧಾರ ನಡೆದ ಸಂದರ್ಭದಲ್ಲಿ "ಶ್ರೀ ಗೋಮ್ಮಟ ಮಹಾಮಸ್ತಕಾಭಿಷೇಕ ಪ್ರಗಾಥಂ" ಎಂಬ ಹೆಸರಿನಲ್ಲಿ ರಚಿಸಿದ್ದಾರೆ. ಈ ಕವಿತೆಯಲ್ಲಿ ಧಾರ್ಮಿಕ ವಿಧಿಯನ್ನು ಸಾಂಕೇತಿಕ ಪರಿಭಾಷೆಗೆ ಕವಿ ಪರಿವರ್ತಿಸಿಕೊಳ್ಳುತ್ತಾರೆ. ಮಹಾಮಸ್ತಕಾಭಿಷೇಕ ಮತ್ತು ಜೀರ್ಣೋದ್ದಾರದ ಕಲ್ಪನೆಯನ್ನು ಆತ್ಮಗತ ಮಾಡಿಕೊಳ್ಳುತ್ತಾರೆ.

ಕುವೆಂಪು ರಚಿಸಿರುವ ಪ್ರಗಾಥಕ್ಕೆ ಗೋಮಟಶಿಲ್ಪ ಮತ್ತು ಮಸ್ತಕಾಭಿಕ್ಷೇಕದ ಸಂದರ್ಭ ಹೇಳಿಮಾಡಿಸಿದಂತಿದೆ.

ಕುವೆಂಪು ಈ ಕವಿತೆಯಲ್ಲಿ ಮಹಾಮಸ್ತಾಕಾಭಿಷೇಕದಲ್ಲಿ ಬಳಸುವ ಹಾಲು ತುಪ್ಪ ಮೊಸರು ಇವು ಜ್ಞಾನ ಭಕ್ತಿ ವೈರಾಗ್ಯದ ಸಂಕೇತಗಳಾಗುತ್ತವೆ. ಮಸ್ತಕಾಭಿಷೇಕ ಕೊಳೆಯಾದ ನಮ್ಮ ಬಾಳನ್ನು ತೊಳೆಯುವ ಪ್ರತೀಕವಾಗುತ್ತದೆ ಎಂದು ಕವಿತೆಯಲ್ಲಿ ನಿದರ್ಶಿಸಿದ್ದಾರೆ.

ಕವಿತೆಯ ಮುಂದಿನ ಭಾಗದಲ್ಲಿ ಗೋಮಟೇಶ್ವರ ನಿರ್ಮಾಣಕ್ಕೆ ಕಾರಣವಾದ ಚಾರಿತ್ರಿಕ ಘಟನೆಗಳನ್ನು ಪುನರ್ ಕಥಿಸಲಾಗಿದೆ. ಪಂಪ ಆದಿಪುರಾಣದಲ್ಲಿ ಬಾಹುಬಲಿ ಮೂರ್ತಿಯ ಆಧ್ಯಾತ್ಮದ ಪೆಂಪನ್ನು ಧೈರ್ಯ, ಔಧರ್ಯ ಮೈತ್ರಿ ಮತ್ತು ತ್ಯಾಗದ ಗುಣವನ್ನು ವರ್ಣಿಸಿದ್ದಾನೆ.

ಕವಿತೆಯ ಮುಂದಿನ ಭಾಗದಲ್ಲಿ ಭರತ ಚಕ್ರವರ್ತಿಯ ವಿಜಯ ಪ್ರಶಸ್ತಿ ಪ್ರಸಂಗದ ವರ್ಣನೆಯಿದೆ. ಇಲ್ಲಿ ನೇರವಾಗಿ ಕುವೆಂಪು ಪಂಪನ ಆರು ಪದ್ಯಗಳನ್ನು ತಮ್ಮ ಕವಿತೆಯ

22

ಶರೀರದಲ್ಲಿ ಅಂತಸ್ಥಗೊಳಿಸುತ್ತಾರೆ. ಭರತನು ವಿಜಯ ಪ್ರಶಸ್ತಿಯನ್ನು ಬರೆಸಿ ತನ್ನ ಕೀರ್ತಿಯನ್ನು ನೆಲ ನಿಲ್ಲುವವರೆಗೂ ಶಾಶ್ವತಗೊಳಿಸಿದನಂತೆ! ಭಾರತನು ವಿಜಯ ಪ್ರಶಸ್ತಿಯನ್ನು ವೃಷಭಾಚಲದ ಬಂಡೆಯ ಮೇಲೆ ಕೆತ್ತಿಸಿದ ಆದರೆ ಬಾಹುಬಲಿ ತನ್ನ ವಿಜಯ ಪ್ರಶಸ್ತಿಯನ್ನು ಮನುಷ್ಯರ ಮನಸ್ಸೆಂಬ ವೃಷಭಗಿರಿಯ ಭಿತ್ತಿಯಲ್ಲಿ ವಜ್ರ ಲಿಪಿಯಲ್ಲಿ ಕೆತ್ತಿಸಿದ. ಸ್ಥಾವರಕ್ಕಳಿವುಂಟು, ಜಂಗಮಕ್ಕೆ ಅಳಿವಿಲ್ಲ ಎನ್ನುವ ವಚನಕಾರರ ಉಕ್ತಿಯು ತಿಳಿಸುವುದಾಗಿದೆ. ಕುವೆಂಪು ಭರತ ಬಾಹುಬಲಿಗಳ ವಿಜಯ ಪ್ರಶಸ್ತಿಗಳನ್ನು ಮುಖಾಮುಖಿಗೊಳಿಸಿ ಕಾವ್ಯಕ್ಕೆ ಹೊಸ ಆಕರ್ಷಣೆಯನ್ನು ದೊರಕಿಸಿದ್ದಾರೆ.

ಬಾಹುಬಲಿಯ ಬಗ್ಗೆ ಕುವೆಂಪು ಅವರು ರಚಿಸಿರುವ ಕವಿತೆಗಳು ಕನ್ನಡ ಸಾಹಿತ್ಯದಲ್ಲಿ ಶಾಶ್ವತವಾಗಿವೆ.

ಬಾಹುಬಲಿಯನ್ನು ಕುರಿತು ಆ ಗೊಮ್ಮಟಗಿರಿಯ ನೆತ್ತಿಯಲಿ ಕಲ್ಲರಳಿದ್ದು ಕಾರ್ಯ ಕಾರಣ ಅದೊಂದು ಅಪೂರ್ವ ನಟನೆ'' ಎಂದು ಗೋಪಾಲ ಕೃಷ್ಣ ಅಡಿಗರು ತಮ್ಮ ಕವಿತೆಯಲ್ಲಿ ಹೇಳಿದ್ದಾರೆ.

ಗೊಮ್ಮಟಜಿನನ ಶ್ರವಣಬೆಳಗೊಳವನ್ನೂ ಕುರಿತು ಪು. ತಿ. ನರಸಿಂಹಚಾರ್ಯರು ರಚಿಸಿರುವ ಸುನೀತವು ಗೋಮ್ಮಟಮೂರ್ತಿಯ ದಯೆ ಜೇನಿನಂತಹ ಮೆಲುನಗೆಯನ್ನೂ ಆ ಮೆಲುನಗೆಯು ಸೂಚಿಸುವ ಮನಸ್ಸಿನ ಸುಖವನ್ನೂ ವರ್ಣಿಸುವ ಕವಿತೆಯಾಗಿದೆ. ಗೊಮ್ಮಟನ ತುಟಿ ಕವಿಗೆ ಮಗುವಿನ ಸುಂದರವಾದ ಸ್ನಿಗ್ಧ ಮಧುರಾಧರವಾಗಿ ಕಾಣುತ್ತದೆ. ಬಾಹುಬಲಿಯ ಶಿಲ್ಪದ ಶಿಶು ಸಹಜ ಸೌಂದರ್ಯವನ್ನು ವರ್ಣಿಸುವುದು ಈ ಕವಿತೆಯ ವಿಶೇಷವಾಗಿದೆ. ಬಾಹುಬಲಿಯನ್ನು ಆತ್ಮಧ್ವಜವೆಂದು ಕರೆಯುವ ಈ ಕವಿತೆ ತನ್ನ ಸೂಕ್ಷ್ಮತೆ ವಿಲಕ್ಷಣತೆ ಮತ್ತು ಸೌಷ್ಠವದಿಂದ ವಿಶಿಷ್ಟವಾಗಿ ನಿಲ್ಲುತ್ತದೆ.

ಸು. ರಂ. ಎಕ್ಕುಂಡಿ ಗೊಮ್ಮಟನನ್ನು ಮಗುವಿನ ಮನಸ್ಸಿನ ಮೂಲಕ ನೋಡುವ ಚೆಲುವಾದ ಪ್ರಸಂಗವನ್ನು "ನನ್ನ ಹಾಗೆಯೆ'' ಎಂಬ ಕವಿತೆಯಲ್ಲಿ ರಚಿಸಿದ್ದಾರೆ. ಅಜ್ಜ ಮತ್ತು ಆತನ ಪುಟ್ಟ ಮೊಮ್ಮಗ ಗೊಮ್ಮಟನ ಮಹಾಮಸ್ತಕಾಭಿಷೇಕಕ್ಕೆ ಬೆಳಗೊಳಕ್ಕೆ ಹೋಗಿದ್ದಾರೆ. ಮೊಮ್ಮಗ ತಾತನನ್ನು ಕೇಳುತ್ತಾನೆ. 'ತಾತ ಇವನು ಯಾರು? ಬೆಟ್ಟದ ಮೇಲೆ ಒಬ್ಬನೇ ನಿಂತು ಏನು ಮಾಡುತ್ತಿದ್ದಾನೆ? ಎಂದು ಮಗು ಕೇಳಿದಾಗ ತಾತ ಮಗುವಿಗೆ ಬಾಹುಬಲಿ ಕಥೆಯನ್ನು ಕೆಲವು ಸಾಲುಗಳಲ್ಲಿ ಸಂಕ್ಷಿಪ್ತವಾಗಿ ತಿಳಿಸುವ ರೀತಿಯಲ್ಲಿ ಕವಿತೆಯನ್ನು ಚಿತ್ರಿಸಿದ್ದಾರೆ.

ಮಗು ಇಂದು ಇವನಿಗಿಲ್ಲಿ ಹಾಲಿನಲ್ಲಿ ಸ್ನಾನವು
ದಾರಿಯಲ್ಲಿ ದಣಿದವರಿಗೆ ಇವನದೊಂದೆ ಧ್ಯಾನವು
ಮುದ್ದು ಮುಖದಿ ಮುಗುಳ್ನಕ್ಕು ಸಿದ್ದನಾಗಿ ನಿಂತಿಹ
ದುಗ್ಧಹಾಸದಲ್ಲಿ ನಲಿವ ಮುಗ್ಧಮಗುವಿನಂತಹ''
ತಾತ ಎರೆವ ಮುಂಚೆ ಎಣ್ಣೆಹಚ್ಚಿ ಅಮ್ಮ ನನಗೆ ಹೀಗೆಯೆ
ನಿಲ್ಲಿಸುವಳು ಬಾಹುಬಲಿಯು ಕೂಡ ನನ್ನ ಹಾಗೆಯೆ
ನಿಂತು ಕಾಯುತಿರುವ ಕಣ್ಣು ತೆರೆದು ಮೊದಲ ಚೆಂಬಿಗೆ!
ಗೊಮ್ಮಟೇಶ ನಕ್ಕುಬಿಟ್ಟ ಕಂಡು ಮುಗ್ಧ ನಂಬಿಗೆ!

ಈ ಕವಿತೆಯಲ್ಲಿ ಮಗುವಿನ ಗುಣ ಹಾಗೂ ಬಾಹುಬಲಿ ಎರಡು ಒಂದೆ ಎಂದು ಹೇಳುತ್ತಿದ್ದಾರೆ.

ಚೆನ್ನವೀರ ಕಣವಿ ಅವರ ಗೊಮ್ಮಟೇಶ ಎಂಬ ಸುನೀತ ತನ್ನ ಪ್ರತೀಕಾತ್ಮಕತೆಯಿಂದ ಮನಸೆಳೆಯುವ ರಚನೆಯ, ಕವಿತೆಯನ್ನು ಮಣ್ಣಿನಿಂದಲೇ ಮೇಲೆದ್ದು ನಿಲ್ಲುವ ಗಿರಿಯೋಗದ ಅಲೌಕಿಕದ ಪ್ರತಿಮೆಯಾಗುತ್ತದೆ. ಹಂತ - ಹಂತದಲ್ಲಿ ಅರುಹಂತ ತುಳಿದ ಬೆಂಕಿಯ ದಾರಿಯಾಗಿ ಬಾಹುಬಲಿಯ ಬಾಳು ಕವಿಯು ಕಣ್ಣಿಗೆ ಕಟ್ಟುತ್ತದೆ. ಎದುರಿಗೆ ಈ ಪರಿಪೂರ್ಣವತಾರಿ ಕಂಡರೆ ಮನಸ್ಸಿನಲ್ಲಿ ಭಗ್ನ ಮೂರ್ತಿಯಾಗಿ ಕಾಣುತ್ತದೆ. ಹೀಗೆ ಬಾಹುಬಲಿಯ ಈ ಕವಿತೆಯ ಆತ್ಮವಿಮರ್ಶೆಗೂ ದಾರಿಮಾಡಿಕೊಡುತ್ತಿದೆ.

ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರು ಗೋಮಟೇಶನ ಬಗ್ಗೆ ಬರೆದಿರುವ ತಮ್ಮ ಕಿರುಗವಿತೆಯಲ್ಲಿ ಅವನನ್ನು ಪ್ರೇಮ, ದಯೆ, ಸತ್ಯ ಸೌಂದರ್ಯದ ಸಾಕಾರ ಮೂರ್ತಿ ಎಂದು ಕರೆದಿದ್ದಾರೆ.

ಕವಿ ಎಚ್. ಎಸ್. ವೆಂಕಟೇಶ ಮೂರ್ತಿಯವರು ರಚಿಸಿರುವ ಬೆಳಗೊಳದಲ್ಲಿ ಎಂಬ ಕವಿತೆಯಲ್ಲಿ ಗೋಮ್ಮಟ ಶಿಲ್ಪದ ವರ್ಣನೆ ಕಾವ್ಯ ಯೋಗದ ಪ್ರತೀಕವಾಗಿ ನಿರೂಪಿತವಾಗುತ್ತದೆ.

ಪಾದದಿಂದಲೆ ಎಲ್ಲ ಪ್ರಾರಂಭ ಗೊಮ್ಮಟನ
ಪಾದವೆಂದರೆ ಸಾಮಾನ್ಯವಲ್ಲ.

ಇಲ್ಲಿ ಬರುವ ಪಾದ ಗೊಮ್ಮಟನ ಪಾದವೂ ಹೌದು, ಕವಿತೆಯ ಸಾಲೂ ಹೌದು. ಈ ಕವಿತೆಯಲ್ಲಿ ಬಾಹುಬಲಿಯ ಆತ್ಮಯೋಗದ ವರ್ಣನೆಯಾಗಿರುವಂತೆ ಯಾವುದೇ ಕಲಾವಿದನ ಕಲಾಯೋಗದ ಗೋಮ್ಮಟನ ಸಮಾಧಿಸ್ಥ ಭಾವವನ್ನು ವರ್ಣಿಸಿ ಅದನ್ನು ಯೋಗ ನಿದ್ರೆ ಎಂದು ಕರೆದಿದ್ದಾರೆ. ಬಾಹುಬಲಿಯ ಕಣ್ಣು ಮುಂದೆ ಮಾಯೆ ಎಷ್ಟು ಬಟ್ಟೆಗಳನ್ನು ಬಿಚ್ಚಿದರೂ ಸಹ ಗೊಮ್ಮಟ ವಿಚಲಿತನಾಗದೆ ಯೋಗದಲ್ಲೇ ನೆಲೆ ನಿಂತಿದ್ದಾನೆ.

ವಕ್ಷ ಬೆಳಕಿನ ಪಕ್ಷ ಅಲ್ಲಿ ನಕ್ಷತ್ರಗಣ
ಮೇಘಮಲ್ಹಾರ ಕೊಕ್ಕರೆಯ ಹಾರ
ಒಳಗೆ ಬೆಳುಗೊಳ, ಹಿಂದೆ ವೃಷಭಾಚಲದ ಕೋಡು
ಯಾರು ನೋಡವರು ಕೆಳಗಿರುವ ಊರ?

"ಊರು" ಇಲ್ಲಿ ಗ್ರಾಮವೂ ಹೌದು ತೊಡೆಯೂ ಹೌದು; ಗೊಮ್ಮಟನ ದಿವ್ಯ ಸನ್ನಿಧಿಯಲ್ಲಿ ಲೌಕಿಕತೆ ಎಂಬುದು ಹೇಗೆ ಅಲಕ್ಷಿತವಾಗುತ್ತದೆ ಎಂಬುದನ್ನು ಈ ಸಾಲಗುಳು ಸೂಚಿಸುತ್ತದೆ.

ಆಧುನಿಕ ಕವಿಗಳು ಗೋಮ್ಮಟವನ್ನು ಎಷ್ಟು ಬಗೆಯಾಗಿ ಕರೆಯುತ್ತಾರೆ! ಬಾಹುಬಲಿಯನ್ನು ಧ್ಯಾನ ಮಾರ್ತಿ, ದಿಗಂಬರ, ಮಹಾ ನಿರ್ವಾಣ ಮೂರ್ತಿ, ನಗ್ನ ಗುರುದೇವ, ಮಹಾಗುರು, ಅಭಯ ಮೂರ್ತಿ, ಪುಷ್ಪಧವಲಾಂಗ, ಆತ್ಮಧ್ವಜ ಇವೆಲ್ಲಾ ಬಾಹುಬಲಿಯ ದಿವ್ಯ ವ್ಯಕ್ತಿತ್ವತದ ಶಾಬ್ದಿಕ ಗ್ರಹಿಕೆ.

ಬೆಳ್ಗೊಳದ ಗೊಮ್ಮಟ ಸ್ವಾಮಿಯನ್ನು ಕಂಡಾಗ ರಾಷ್ಟ್ರಕವಿ ಕುವೆಂಪು ಅವರಿಗೆ ಉಂಟಾದ ಭೂಮಾನುಭೂತಿಯ ಭಾವನೆಗಳ ರೂಪವನ್ನು ಅವರ ಕವಿತೆಯೊಂದರಲ್ಲಿ ನಿರೂಪಿತವಾಗಿದೆ.

ಆರೊ ತೆಕ್ಕನೆ ತುಡಕಿ ಬಾಯ್ ಮುಚ್ಚಿ ಹಿಡಿದಂತೆ
ಮೌನಭಾರದಿ ಮಾತು ಮೂರ್ಛೆ ಹೋಗಿಹುದಿಲ್ಲಿ
ಶ್ರೀ ಗೊಮ್ಮಟೇಶ್ವರ ಭವ್ಯ ಸನ್ನಿಧಿಯಲ್ಲಿ

ಶ್ರವಣಬೆಳಗೊಳದ ಬಾಹುಬಲಿ ಮೂರ್ತಿಯನ್ನು ದರ್ಶಿಸಿದಾಗ ಎಂಥವರಿಗೂ ಈ ಕವಿತೆಯ ಅನುಭವವಾಗುತ್ತದೆ.

ಹತ್ತನೇಯ ಶತನಮಾನದ ಪಂಪ ಕವಿಯಿಂದ ಪ್ರಾರಂಭವಾದ ಕನ್ನಡ ಕಾವ್ಯದಲ್ಲಿ ಬಾಹುಬಲಿಯನ್ನು ಒಳಗೊಂಡ ಚಿತ್ರಣ ಆಧುನಿಕ ಕನ್ನಡ ಕವಿಗಳಲ್ಲಿ ಬಾಹುಬಲಿಯ ಅಥವಾ ಗೊಮ್ಮಟ ಮೂರ್ತಿಯ ಪ್ರತಿಮೆ ಎಲ್ಲರ ಮನಸ್ಸಿನಲ್ಲಿ ಕಾವ್ಯ ರಚಿಸುವ ಕವಿತ್ವ ಉತ್ಸಾಹ ತುಂಬುವಂತಾಗುತ್ತದೆ.

ಅಡಿ ಟಿಪ್ಪಣಿ

1. ಡಾ. ಹೆಚ್. ಎಸ್. ವೆಂಕಟೇಶ ಮೂರ್ತಿ 'ಬಾಹುಬಲಿ' ಪುಟ27-35-36-42
   - ಸ್ವಪ್ನ ಬುಕ್ ಹೌಸ್, ಬೆಂಗಳೂರು - 2007.

2. ಡಾ. ಎಸ್. ಪಿ. ಪಾಟೀಲ್, 'ಚಾವುಂಡರಾಯ ಪುರಾಣ ಒಂದು ಅಧ್ಯಯನ' ಮುನ್ನುಡಿ
   - ವೈಶಾಲಿ ಪ್ರಕಾಶನ, ಧಾರವಾಡ - 1993

3. ಟಿ. ವಿ. ವೆಂಕಟಾಚಲಶಾಸ್ತ್ರಿ, 'ಪಂಪ' ಪುಟ 16
   - ಸಾಹಿತ್ಯ ಅಕಾಡೆಮಿ - 1996

4. ಹಂಪನಾಗರಾಜಯ್ಯ 'ಗೊಮ್ಮಟ ಬಾಹುಬಲಿ' ಬಾಪ್ಕೋ
   - ಬೆಂಗಳೂರು - 1981

ಅಧ್ಯಾಯ - ನಾಲ್ಕು
ಪಂಪನ ಆದಿಪುರಾಣದಲ್ಲಿ ಬಾಹುಬಲಿ

ಹತ್ತನೆಯ ಶತಮಾನದಲ್ಲಿ ಪಂಪ ಕವಿಯಿಂದ ರಚಿತವಾಗಿರುವ 'ಆದಿಪುರಾಣ' ಎಂಬುದು ಮೊದಲ ಕಾವ್ಯ. ಕಾವ್ಯ ಎನ್ನುವುದಕ್ಕಿಂತ ಇದನ್ನು ಪುರಾಣ ಕಾವ್ಯ ಎನ್ನುವುದು ಸೂಕ್ತ. ಏಕೆಂದರೆ ಕಾವ್ಯ ಪದ್ಧತಿಯಲ್ಲಿ ಜೈನ ಪುರಾಣದ ಕಥೆಯೊಂದನ್ನು ಇಲ್ಲಿ ನಿರೂಪಿಸಿದೆ. ಈ ಪುರಾಣ ಕಾವ್ಯದಲ್ಲಿ ಜೈನಧರ್ಮದ ಹಿರಿಮೆ, ಅದರಲ್ಲಿನ ಸಾಧನೆ ಮತ್ತು ಸಿದ್ಧಿಗಳು ನಿರೂಪಿತವಾಗಿದೆ. ಈ ಪುರಾಣ ಕಾವ್ಯ ದೊರೆತಿರುವ ಕನ್ನಡದ ಕಾವ್ಯಗಳಲ್ಲಿ ಮೊದಲನೆಯದು. ಈ ಕಾವ್ಯವನ್ನು ಜೈನ ಧರ್ಮದ ಹಿನ್ನೆಲೆಯಲ್ಲಿ ರಚಿಸಲಾಗಿದ್ದು ಇದೊಂದು ಜೈನ ಧರ್ಮೀಯರಿಗೆ ಮಾರ್ಗದರ್ಶಕವಾಗಿದೆ.

ಆದಿಪುರಾಣ ಕಾವ್ಯ 'ಪುರಾಣಕಾವ್ಯ' ಎನ್ನುವ ಮಾತನ್ನು ಕವಿಗಳು ಬಳಸಿರುವ ಉದ್ದೇಶವನ್ನು ನೋಡವುದಾದರೆ ಆದಿಪುರಾಣ ಕಾವ್ಯದಲ್ಲಿ ಆದಿನಾಥನ ಹಿಂದಿನ ಜನ್ಮಜನ್ಮಗಳ ಕಥೆಗಳನ್ನು ಹೇಳುವಂತಹ ಪರಿಯಿದೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಹಿಂದೆ ಘಟಿಸಿರಬಹುದಾದ ಘಟನೆಗಳನ್ನೊಳಗೊಂಡ ಕಥಾ ನಿರೂಪಣೆಯನ್ನು ಪುರಾಣ ಎನ್ನಹುದು. ಪಂಪ ಆದಿಪುರಾಣ ಕಾವ್ಯದಲ್ಲಿ ಘಟಿಸಿರಬಹುದಾದ ಘಟನೆಗಳು ಸಾರವತ್ತಾಗಿರುವುದರಿಂದ ಇದನ್ನು ಪುರಾಣ ಕಾವ್ಯ ಎನ್ನುತ್ತಾರೆ.

[1] ಪಂಪ ಕವಿಯು ಆದಿಪುರಾಣ ಕಾವ್ಯವನ್ನು ಕ್ರಿ. ಶ. 941 ರಲ್ಲಿ ರಚಿಸಿದನು. ಆಗ ಅವನಿಗೆ 39 ವರ್ಷ ವಯಸ್ಸು. ಈ ಕೃತಿಗದ್ಯ ಪದ್ಯಗಳಿಂದ ಮಿಶ್ರಿತವಾದ ಚಂಪೂ ಕಾವ್ಯವಾಗಿದೆ. ಇದರಲ್ಲಿ ಒಟ್ಟು 13 ಆಶ್ವಾಸಗಳಿವೆ. ಈ ಕೃತಿಯಲ್ಲಿ 1930 ಪದ್ಯಗಳಿದ್ದು ಈ ಕೃತಿಗೆ ಒಂದು ಆಕೃತಿಯನ್ನು ತಂದುಕೊಟ್ಟಿದೆ. ಒಂದು ದೊಡ್ಡ ಕೃತಿಯ ರಚನೆಯನ್ನು ಪಂಪನು ಕೇವಲ ಮೂರು ತಿಂಗಳ ಅಲ್ಪಾವಧಿಯಲ್ಲಿ ಬರೆದು ಮುಗಿಸಿರುವುದಾಗಿ ಹೇಳಿಕೊಂಡಿದ್ದಾನೆ. ಕನ್ನಡ ಜೈನ ಪುರಾಣಕಾರರಿಗೆಲ್ಲಾ ಆದಿಪುರಾಣವೇ ಮಾರ್ಗದರ್ಶನ ಗ್ರಂಥವಾಗಿದೆ. ಇದರ ರಚನಾ ಸಂವಿಧಾನ, ಕಾವ್ಯ ಪದ್ಧತಿ, ಭಾಷಾ ಶೈಲಿ ರಸಭಾವಗಳ ಲಹರಿ ಪಂಪ ಕವಿಯ ಹಿರಿಮೆಯನ್ನು ಸಾರುತ್ತವೆ.

ಪಂಪಕವಿಯಿಂದ ರಚಿತವಾಗಿರುವ ಎರಡು ಕಾವ್ಯಗಳಲ್ಲಿ 'ವಿಕ್ರಮಾರ್ಜುನ ವಿಜಯ' ಲೌಕಿಕ ಕಾವ್ಯ ಹಾಗೂ 'ಆದಿಪುರಾಣಂ' ಎಂಬುದು ಆಗಮಿಕ ಕಾವ್ಯ. ಕನ್ನಡ ಕಾವ್ಯ ಪರಂಪರೆಗೆ ಬುನಾದಿಯನ್ನು ಹಾಕಿಕೊಟ್ಟಿದ್ದಾನೆ. ಪಂಪನು ತನ್ನ ಕಾವ್ಯಗಳಲ್ಲಿ 'ಧರ್ಮ ಮತ್ತು ಕಾವ್ಯಧರ್ಮ' ಎರಡನ್ನು ಮೆರಿದಿದ್ದಾನೆ. ಪಂಪ ಕವಿಯ ಕಾವ್ಯ ಶಕ್ತಿಯನ್ನು ಧರ್ಮ ಶ್ರದ್ಧೆ ಮೂಲವಾದ ಜೈನಾಗಮ ಪಾಂಡಿತ್ಯವನ್ನು ಉತ್ತರ ಕಾಲಿನ ಕನ್ನಡ ಕವಿಗಳು ಬಾಯಿತುಂಬ ಹೋಗಳಿದ್ದಾರೆ.

ಪಂಪನು ಆದಿಪುರಾಣ ಕಾವ್ಯವನ್ನು ಜಿನಸೇನಾಚಾರ್ಯರ ಪೂರ್ವಪುರಾಣವನ್ನು ಆಧರಿಸಿ ರಚಿಸಿದ್ದಾನೆ. ಪೂರ್ವಪುರಾಣದಲ್ಲಿ ಸುಮಾರು ಹತ್ತು ಸಾವಿರ ಶ್ಲೋಕಗಳಿಂದ ನಿರೂಪಿತವಾಗಿರುವ ಕಥೆಯನ್ನು ಪಂಪನು ಸುಮಾರು 1930 ಪದ್ಯಗಳಿಗೆ ಅಡಕಗೊಳಿಸಿದ್ದಾನೆ. ಈ ರಚನೆಯಲ್ಲಿ ಕವಿಯು ಹಿರಿದಾದ ಭಾಗವನ್ನು ಕಿರಿದಾಗಿ ರಚಿಸುವಲ್ಲಿ ಪೂರ್ವಪುರಾಣದ ಕಥೆಯ ನಿರಸನ ಎಂಬ ಭಾಗವನ್ನು ಬಿಟ್ಟಿದ್ದಾನೆ. ಇದರಿಂದ ಹೀಗೆ ಮಾಡುವಾಗ ಕಾವ್ಯ ನಿರಸನವೆಂದು ಭಾಗವನ್ನು ಸಂಗತಿಗಳನ್ನು ಬಿಟ್ಟಿದ್ದಾನೆ. ಜೈನ ಧರ್ಮಿಯನಾದ್ದರಿಂದ ಮತಾಂತರಗಳನ್ನೂ, ಉಪದೇಶ ಭಾಗಗಳನ್ನು ಸಂಗ್ರಹವಾಗಿ ನಿರೂಪಿಸಿದ್ದಾನೆ.

ಪಂಪನ ದೃಷ್ಟಿಯಲ್ಲಿ ಆದಿಪುರಾಣಂ ಕಾವ್ಯವು ಜಿನಾಗಮವನ್ನು ಬೆಳಗುವ ಗ್ರಂಥ. ಜೀವರಾಶಿಗೆಲ್ಲಾ ಹಿತವನ್ನು ಜೈನ ಧರ್ಮೀಯರಿಗೆ ಸಂತೋಷವನ್ನು ಲೋಕಕ್ಕೆಲ್ಲಾ ಮಂಗಳವನ್ನು ಉಂಟುಮಾಡುವ ಪೂಜ್ಯ ಗ್ರಂಥ, 'ಕಿವಿಗೆ ಅಮೃತ ಪ್ರಾಯವಾಗಲಿ' ಎಂಬುದಾಗಿ ಬಯಸಿ ಆದಿನಾಥನ ಚರಿತ್ರೆಯನ್ನು ಒಳಗೊಂಡ ಪವಿತ್ರ ಗ್ರಂಥವನ್ನು 16 ಅಶ್ವಾಸಗಳಲ್ಲಿ ರಚಿಸಿದ್ದಾನೆ. ಈ ಕೃತಿಯಲ್ಲಿ ಧರ್ಮ ಮತ್ತು ಕಾವ್ಯ ಧರ್ಮವೂ ಒಟ್ಟಿಗೆ ಅವಕಾಶ ಪಡೆದಿವೆ ಎಂಬುದಾಗಿಯೂ ಹೇಳಿದ್ದಾನೆ. ಈ ಕಾರಣದಿಂದಲೇ ಜೈನ ಧರ್ಮದ ಸಂಪ್ರದಾಯಕ್ಕೆ ಅನುಗುಣವಾಗಿ ತನ್ನ ಪುರಾಣಕೃತಿಯನ್ನು ರಚಿಸಿದ್ದಾನೆ. ಇಲ್ಲಿ ಕವಿಯು ತನ್ನ ಕಾವ್ಯದ ಹಿರಿಮೆನ್ನು ಹೆಚ್ಚಿಸುವ ದೃಷ್ಟಿಯಿಂದ ತನಗೆ ಉಚಿತವಾದ ಸಂದರ್ಭದಲ್ಲಿ ಅದ್ಭುತವಾದ ಕಲಾ ಕೌಶಲ್ಯವನ್ನು ಮೆರಿದಿದ್ದಾನೆ.

ಆದಿಪುರಾಣ ಕಾವ್ಯವು ಆದಿನಾಥನ ಜೀವನ ವೃತ್ತಾಂತವನ್ನು ಹಾಗೂ ಅವನ ಮಕ್ಕಳಾದ ಭರತ - ಬಾಹುಬಲಿಯರ ಕಥೆಯನ್ನು ಒಳಗೊಂಡಂತಹ ಹದಿನಾರು ಆಶ್ವಾಸಗಳುಳ್ಳ ದೀರ್ಘವಾದ ಪುರಾಣ ಕಾವ್ಯ. ಮೊದಲ ಆರು ಆಶ್ವಾಸಗಳಲ್ಲಿ ಪುರದೇವ ಅಥವಾ ಆದಿದೇವನ ಹಿಂದಿನ ಒಂಭತ್ತು ಜನ್ಮಗಳ ಕಥೆಯಿದೆ. ಏಳರಿಂದ ಹತ್ತನೆಯ ಆಶ್ವಾಸದವರೆಗೆ ಪುರದೇವನ

ಜನನ, ಬಾಲ್ಯ, ವಿದ್ಯಾಭ್ಯಾಸ, ವಿವಾಹ, ರಾಜ್ಯಭಾರ, ವೈರಾಗ್ಯ, ತಪಸ್ಸು, ಕೇವಲ ಜ್ಞಾನ, ಸಮವಸರಣ ಇವುಗಳ ವರ್ಣನೆ ಇದೆ. ಹನ್ನೊಂದರಿಂದ ಹದಿನಾರನೆಯ ಆಶ್ವಾಸದವರೆಗೆ ಭರತ ಚಕ್ರವರ್ತಿಯ ಪಟ್ಟಾಭಿಷೇಕ, ದಿಗ್ವಿಜಯ, ಭರತ - ಬಾಹುಬಲಿಯರ ಯುದ್ಧ ಹಾಗೂ ಬಾಹುಬಲಿ ತಪಸ್ಸು ಆಚರಿಸವ ಪ್ರಸಂಗಳು ಕ್ರಮವಾಗಿ ನಿರೂಪಿತವಾಗಿದೆ.

ಜೈನಪುರಾಣದಲ್ಲಿ ತೀರ್ಥಂಕರನೊಬ್ಬನ ಕಥೆಯನ್ನು ಹೇಳುವಾಗ ಚಕ್ರವರ್ತಿಯೊಬ್ಬನ ಜೀವನ, ಅಧಿಕಾರ, ವೈಭವ, ದಿಗ್ವಿಜಯಗಳ ತಿಳಿಸುವಂತೆ ಆದಿಪುರಾಣ ಕಾವ್ಯದಲ್ಲಿ ಪುರದೇವನ ಜನ್ಮಾತರದ ಕಥೆಯೊಂದಿಗೆ ಆತನ ಮಕ್ಕಳಾದ ಭರತ - ಬಾಹುಬಲಿಯರ ಅಧಿಕಾರ ವೈಭವದ ಚಿತ್ರಣವನ್ನು ಚಕ್ರವರ್ತಿಯಾದ ಭರತನ ದಿಗ್ವಜಯದ ಪರಿಯನ್ನು ಆತನು ಚಕ್ರರತ್ನದ ಸಹಾಯದಿಂದ ಷಟ್ಖಂಡ ಭೂಮಂಡಲವನ್ನು ಜಯಿಸಿದ ಹಾಗೂ ದಿಗ್ವಿಜಯದಿಂದ ಹಿಂತಿರುಗಿದಾಗ ಭರತ - ಬಾಹುಬಲಿಯರ ನಡುವೆ ನಡೆದ ಯುದ್ಧದ ಪರಿಯನ್ನು ಆದಿಪುರಾಣ ಕಾವ್ಯದಲ್ಲಿ ಪಂಪನು ಉತ್ತಮವಾಗಿ ಚಿತ್ರಿಸಿದ್ದಾನೆ.

ಪಂಪನ ಆದಿಪುರಾಣದಲ್ಲಿ ಕೊನೆಯ ನಾಲ್ಕು ಆಶ್ವಾಸಗಳಲ್ಲಿ ಬಾಹುಬಲಿಯ ಪಾತ್ರವನ್ನು ನಿರೂಪಿಸಿದ್ದಾನೆ. ಈ ಭಾಗದಲ್ಲಿ ಭರತ - ಬಾಹುಬಲಿಯರ ನಡುವೆ ಯುದ್ಧ ಸಂಘರ್ಷದಲ್ಲಿ ಬರುವ ಪ್ರಸಂಗಗಳಲ್ಲಿ ಬಾಹುಬಲಿಯ ಪಾತ್ರವನ್ನು ಭರತನಿಗಿಂತ ಉನ್ನತ ಸ್ಥಾನಕ್ಕೇರಿಸುವ ಕೆಲಸವನ್ನು ಅದ್ಭುತವಾಗಿ ಕವಿ ನಿರ್ವಹಿಸಿದ್ದಾನೆ.

ಪಂಪನ 'ಆದಿಪುರಾಣ' ಜೈನ ಧರ್ಮದ ಜೈನತೀರ್ಥಂಕರರಲ್ಲಿ ಪ್ರಥಮನಾದ ವೃಷಭನಾಥ ಮತ್ತು ಸುನಂದ ದೇವಿಯ ಮಗನಾದ ಬಾಹುಬಲಿಯು ಪ್ರಖ್ಯಾತಿಯನ್ನು ಪಡೆದಿದ್ದಾನೆ. ಆದಿತೀರ್ಥಂಕರನಾದ ವೃಷಭ ದೇವನು ಭೂಮಂಡಲವನ್ನೆಲ್ಲಾ ಆಳುತ್ತಿದ್ದು ರಾಜ್ಯಭಾರ ಭೋಗ ಲಾಲಸೆಗಳಿಂದ ವೈರಾಗ್ಯವನ್ನು ತಾಳಿ ತನ್ನ ಮಕ್ಕಳಾದ ಭರತ - ಬಾಹುಬಲಿ ಮತ್ತು ಉಳಿದ ನೂರು ಜನ ಮಕ್ಕಳಿಗೂ ರಾಜ್ಯವನ್ನು ಹಂಚಿ ಭರತನು ಆಯೋಧ್ಯಾ ನಗರಕ್ಕೆ ಚಕ್ರವರ್ತಿಯನ್ನಾಗಿ ಮಾಡಿ ಬಾಹುಬಲಿಯನ್ನು ಪೌದನಪುರ ನಗರಕ್ಕೆ ರಾಜನನ್ನಾಗಿ ನೇಮಿಸಿ ಜಿನದೀಕ್ಷೆಯನ್ನು ಪಡೆದು ತಪಸ್ಸಿಗೆ ತೆರಳುತ್ತಾನೆ.

ಅತಿ ಬಲಶಾಲಿಯಾದ ಬಾಹುಬಲಿಯ ಪೌದನಪುರವನ್ನು ರಾಜಧಾನಿಯನಾಗಿ ಮಾಡಿಕೊಂಡು ಆಳ್ವಿಕೆ ಮಾಡುವಾಗ ಬಾಹಬಲಿಯ ಅಣ್ಣನಾದ ಭರತನ ಆಯುಧಗಾರದಲ್ಲಿ ಚಕ್ರರತ್ನ ಉದಯಿಸುತ್ತದೆ. ಅವನು ದಿಗ್ವಿಜಯಕ್ಕೆ ಹೊರಟು ಹೋಗಿ ಸಮಸ್ತ

ಭೂಮಂಡಲವನ್ನೆಲ್ಲಾ ಗೆದ್ದು ಹಿಂದಿರುಗಿ ಬರುವಾಗ ಆತನ ಚಕ್ರರತ್ನವು ಆಯೋಧ್ಯ ನಗರವನ್ನು ಪ್ರವೇಶಿಸದೆ ಪುರದ್ವಾರದ ಬಳಿ ನಿಲ್ಲುತ್ತದೆ. ಭರತನಿಗೆ ಇದರಿಂದ ಆಶ್ಚರ್ಯ ಉಂಟಾಗುತ್ತದೆ. ಇದರ ಕಾರಣವನ್ನು ಪುರೋಹಿತರಿಂದ ತಿಳಿದ ಭರತನು ಬಾಹುಬಲಿ ಸೇರಿದಂತೆ ಎಲ್ಲರೂ ನನ್ನ ದಿಗ್ವಿಜಯವನ್ನು ಒಪ್ಪಿದಿರುವುದನ್ನು ಕೇಳಿ ಅವರನ್ನು ತನಗೆ ಶರಣಾಗುವಂತೆ ತಿಳಿಸುತ್ತಾನೆ. ಇದಕ್ಕೆ ಒಪ್ಪದ ನೂರು ಜನ ತಮ್ಮಂದಿರು ತಂದೆ ನೀಡಿದ ರಾಜ್ಯದಲ್ಲಿ ನಾವಿದ್ದರೂ ಅಣ್ಣನ ಹಂಗೇಕೆ ಎಂದು ರಾಜ್ಯವನ್ನು ತ್ಯಜಿಸಿ ತಂದೆಯ ಬಳಿ ದೀಕ್ಷೆ ಪಡೆದು ತಪಸ್ಸಿಗೆ ತೆರಳುತ್ತಾರೆ.

ಭರತನ ವರ್ತನೆಯನ್ನು ಸಹಿಸದ ಬಾಹುಬಲಿಯು ಅವನ ವಿರುದ್ಧ ಪ್ರತಿಭಟನೆಗೆ ನಿಲ್ಲುತ್ತಾನೆ. ಪಂಪನ ಈ ಕಾವ್ಯದಲ್ಲಿ ಭರತ - ಬಾಹುಬಲಿ ಸಂಘರ್ಷದಿಂದ ಅಂದರೆ ಅಣ್ಣನನ್ನು ಪ್ರತಿಭಟಿಸಿದ ಬಾಹುಬಲಿಯನ್ನು ಯಾವ ರೀತಿಯಾಗಿ ಪಂಪಕವಿ ಚಿತ್ರಿಸಿದ್ದಾನೆ ಎಂಬುದನ್ನು ಬಾಹುಬಲಿಯಲ್ಲಿ ಇದ್ದಂತಹ ಶಕ್ತಿ ಸಾಮರ್ಥ್ಯ ಸಾಹಸವನ್ನು ಇಲ್ಲಿ ಕಾಣಬಹುದು.

ಆದಿ ಪುರಾಣದಲ್ಲಿ ಪಂಪಕವಿಯು ಸಮಸ್ತ ಭೂಮಂಡಲವನ್ನೆಲ್ಲಾ ಜಯಿಸಿದ ಭರತನನ್ನು ಪ್ರತಿನಾಯಕನಾಗಿ ಮಾಡಿ ಭುಜಬಲ ಪರಾಕ್ರಮಿಯಾಗಿ ಬಾಹುಬಲಿಯನ್ನು ಚಿತ್ರಿಸಿದ್ದಾನೆ. ಬಾಹುಬಲಿಯ ಬಳಿಗೆ ಭರತ ಕಳುಹಿಸಿದ ಧೂತರೊಂದಿಗೆ ಅಣ್ಣನ ವಿಜಯದ ವಿರುದ್ಧ ಆಡುವ ಮೂದಲಿಕೆ ಮಾತಿಗಳಿಂದ ಬಾಹುಬಲಿಯ ಸಾಮರ್ಥ್ಯ ಸ್ಪಷ್ಟವಾಗುತ್ತದೆ. ಬಾಹುಬಲಿಯ ಪರಾಕ್ರಮ ಶಕ್ತಿ ಜೈನ ಧರ್ಮದ ಹಿನ್ನೆಲೆಯಲ್ಲಿ ಚಿತ್ರಿತವಾಗಿರುವ ಈ ಕಾವ್ಯದಲ್ಲಿ ಭರತ ಬಾಹುಬಲಿಯರು ಯುದ್ಧಕ್ಕೆ ಸಿದ್ದರಾಗಿರುವ ಸಂದರ್ಭದಲ್ಲಿ ಎರಡು ಕಡೆಯ ಮಂತ್ರಿಗಳು ಮುಂದಾಲೋಚನೆಯಿಂದಾಗಿ ಧರ್ಮ ಯುದ್ಧಕ್ಕೆ ಇಬ್ಬರನ್ನು ಒಪ್ಪಿಸುತ್ತಾರೆ.

ಇಬ್ಬರು ಪರಾಕ್ರಮಿಗಳ ನಡುವೆ ಜೈನ ಧರ್ಮದ ಹಿನ್ನೆಲೆಯಲ್ಲಿ ದ್ವಂದ್ವಯುದ್ಧವಾದ ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳು ನಡೆಯುತ್ತದೆ. ತನ್ನ ಸಾಮರ್ಥ್ಯದ ಬಗೆ ಅಪಾರವಾದ ನಂಬಿಕೆ ಇದ್ದ ಬಾಹುಬಲಿಯು ಭರತನನ್ನು ಮೂರು ಯುದ್ಧಗಳಲ್ಲಿ ಮಣಿಸಿ ಅಣ್ಣನಿಗೆ ನಾಚಿಕೆಯಾಗುವ ರೀತಿ ಮಾಡುತ್ತಾನೆ.

[2] ಪಂಪನ ಕವಿತ್ವಶಕ್ತಿಯಲ್ಲಿ ಕಾವ್ಯದ ವಿನ್ಯಾಸದಂತೆ ದೃಷ್ಟಿ ಯುದ್ಧ ಹಾಗೂ ಜಲಯುದ್ಧಗಳಲ್ಲಿ ಜಯಿಸಿದಂತಹ ಬಾಹುಬಲಿ ಮಲ್ಲಯುದ್ಧದಲ್ಲಿ ಭರತನನ್ನು ಮೇಲಕ್ಕೆ ಎತ್ತಿ ಹಿಡಿದವನು ಅಣ್ಣನೆಂಬ ಕನಿಕರದಿಂದ ನೆಲಕ್ಕೆ ಬಡಿಯದೆ ನಿದಾನವಾಗಿ ಕೆಳಗಿಸುವುದು

ಬಾಹುಬಲಿಯ ವ್ಯಕ್ತಿತ್ವವನ್ನು ಚಿತ್ರಿಸುವ ಒಂದು ನಿದರ್ಶನವಾಗಿದೆ. ಆದರೆ ಭರತನು ಕೋಪಗೊಂಡು ಚಕ್ರರತ್ನವನ್ನು ಬಾಹುಬಲಿಯ ಮೇಲೆ ಪ್ರಯೋಗಿಸಿದಾಗ ಅದು ಬಾಹುಬಲಿಯನ್ನು ಘಾತಿಸದೆ ಪ್ರದಕ್ಷಿಣೆ ಮಾಡಿ ಪಕ್ಕದಲ್ಲಿ ನಿಲ್ಲುತ್ತದೆ. ಇದನ್ನು ಅರಿತ ಬಾಹುಬಲಿಯು ಈ ರಾಜ್ಯ ವ್ಯಾಮೋಹದಿಂದ ಪ್ರೀತಿ ಬಾಂದವ್ಯಕ್ಕೆ ಅಣ್ಣ - ತಮ್ಮಂದಿರಿಗೆ ಕೇಡು ಬಯಸುವಂತಹ ಈ ರಾಜ್ಯ ವ್ಯಾಮೋಹ ಬೇಡವೆಂದು ನಿರ್ಧರಿಸಿ ಅಣ್ಣನಿಗೆ ತನ್ನ ಸಮಸ್ತ ರಾಜ್ಯವನ್ನು ವಹಿಸಿ ಮೋಕ್ಷ ಸಾಮ್ರಾಜ್ಯವನ್ನು ಸಂಪಾದಿಸಲು ಶಾಶ್ವತವಾಗಿ ನಿಲ್ಲುತ್ತಾನೆ.

ಆದಿಪುರಾಣದಲ್ಲಿ ಬರುವಂತಹ ಬಾಹುಬಲಿಯ ಪಾತ್ರವು ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದ್ದು, ಅದ್ಭುತ ಶಕ್ತಿಶಾಲಿಯಾಗಿದ್ದು ಯುದ್ಧ ನಿಪುಣ ಪಂಡಿತನಾಗಿದ್ದು, ಬಾಹುಬಲಿಯು ತನ್ನ ಸ್ವಂತ ಅಣ್ಣನೊಂದಿಗೆ ಹೋರಾಡಿ ಆತನ ಗರ್ವ ಭಂಗಮಾಡಿ ಅದರ ತಪ್ಪನ್ನು ಅರಿತು ಮೋಕ್ಷ ಸಾಧನೆಗೆ ತೆರಳುತ್ತಾನೆ. ಹೀಗೆ ನೋಡಿದರೆ ಪಂಪನ ಕಾವ್ಯದಲ್ಲಿ ಬಾಹುಬಲಿಯ ಪಾತ್ರ ಅದ್ಭುತವಾದದ್ದು, ಕವಿ ಭರತ - ಬಾಹುಬಲಿ ಇಬ್ಬರನ್ನು, ಸಮಾನರಾಗಿ ಚಿತ್ರಿಸುತ್ತ ಒಂದು ಹಂತದಲ್ಲಿ ಸಮಸ್ತ ಭೂಮಂಡಲವನ್ನು ಜಯಿಸಿದ ಭರತನಿಗಿಂತ ಬಾಹುಬಲಿಯನ್ನು ಮೇಲಸ್ಥರಕ್ಕೆ ಏರಿಸಿದ್ದಾನೆ. ಆದಿ ಪುರಾಣ ಕಾವ್ಯದಲ್ಲಿ ಭರತ - ಬಾಹುಬಲಿಯರ ಸಂಘರ್ಷದಲ್ಲಿ ಭರತನಿಗಿಂತ ಬಾಹುಬಲಿ ಪ್ರಧಾನವಾಗಿ ಉಳಿಯುತ್ತಾನೆ.

ವಸ್ತು ವಿನ್ಯಾಸ :

ಪಂಪನ ಆದಿಪುರಾಣ ಕಾವ್ಯದದಲ್ಲಿ ನಾಯಕನಾದ ಆದಿನಾಥ ಮತ್ತು ಅವನ ಮಕ್ಕಳಾದ ಭರತಬಾಹುಬಲಿಯರ ಕಥೆಗೆ ಸಂಬಂಧಿಸಿದಂತೆ ರಚಿತವಾಗಿದೆ. ಕಾವ್ಯದ ವಸ್ತುವಿನ್ಯಾಸದಲ್ಲಿ ನಾಯಕ ವ್ಯಕ್ತಿ ಆದಿನಾಥನ ಪೂರ್ವ ಜನ್ಮಗಳ ಕಥೆಗಳನ್ನು ಆದಿಪುರಾಣದ ಪೂರ್ವಭಾಗವು ಆತನ ಸಂಬಂಧವಾಗಿ ಜರುಗಿದಂತಹ ಪಂಚಕಲ್ಯಾಣಗಳು. ಲೋಕ ಕಲ್ಯಾಣದ ದೃಷ್ಟಿಯಿಂದ ಆದಿನಾಥ ಮಾಡಿದ ಸಾಮಾಜಿಕ ವ್ಯವಸ್ಥೆಯ ಕೆಲಸಗಳು ಹಾಗೂ ಧರ್ಮೋಪದೇಶಗಳು ಸಮಾವೇಶವಾಗಿರುವ ವರ್ತಮಾನದ ಕಥೆಯನ್ನು ಅದರ ಉತ್ತರ ಭಾಗವೆಂದು ಹೇಳಬಹುದು. ಈ ಉತ್ತರ ಭಾಗದಲ್ಲಿ ಆದಿನಾಥನ ಹಿರಿಯ ಮಗ ಭರತ ಚಕ್ರವರ್ತಿಯ ದಿಗ್ವಜಯ ವೃತ್ತಾಂತದ ಕತೆಗಳೂ ಭರತ ಬಾಹುಬಲಿಯರ ವೈಮನಸ್ಸು ಸಾಮರಸ್ಯದ ಸನ್ನಿವೇಶಗಳು ವಿಸ್ತಾರವಾಗಿ ಹಬ್ಬಿದೆ. ಈ ಭಾಗದಲ್ಲಿ ಬಾಹುಬಲಿಯ ಕಥಾವಸ್ತುವನ್ನು ಪಂಪ ಕವಿ ತನ್ನ ಕಾವ್ಯದಲ್ಲಿ ವಿನ್ಯಾಸಗೊಳಿಸಿದ್ದಾನೆ. ಭರತ ಚಕ್ರವರ್ತಿಯು ಷಡ್ಖಂಡ ಭೂಮಂಡಲವನೆಲ್ಲಾ ಜಯಿಸಿ ಹಿಂದಿರುಗಿದಾಗ ಭರತನ ದಿಗ್ವಜಯಕ್ಕೆ ಕಾರಣವಾದ ಚಕ್ರರತ್ನವೂ ಆಯೋಧ್ಯಾ ನಗರವನ್ನು ಪ್ರವೇಶಿಸದೆ ಪುರದ್ವಾರದ ಬಳಿ ನಿಲ್ಲುತ್ತದೆ. ಭರತನು ಈ ವಿಚಾರವನ್ನು ತಿಳಿದು "ಪದಿನಾಲ್ಕು ರತ್ನಕಂ ಮೊದಲು ಎನಗೆ ಈ ಚಕ್ರರತ್ನಂ ಇದಂ ಮೇಲಾವುದು ದೈವಂ ಎನಗೆ"[3] ಎಂದು ನಂಬಿದ್ದ ಭರತನಲ್ಲಿ ಆಶ್ಚರ್ಯವಾಯಿತು. ಈ ಸಂದರ್ಭದಲ್ಲಿ ಪುರೋಹಿತರು "ಇದು ಪಗೆವರುಳ್ಳುದಂ ತೋರೆದಪುದ" ಎಂದು ತಿಳಿಸುವರು. ತಮ್ಮ ಮಾತನ್ನು ಮುಂದುವರೆಸಿ ಹೇಳುವ ಮಾತಿನಲ್ಲಿ ಭರತನ ತಮ್ಮಂದಿರ ಅದರಲ್ಲಿಯೂ ಬಾಹುಬಲಿಯ ಶ್ರೇಷ್ಠತೆಯನ್ನು ಪುರೋಹಿತರಿಂದ ಕವಿ ಈ ಮಾತುಗಳನ್ನು ಆಡಿಸಿದ್ದಾನೆ.

ನಿನ್ನನುಜರನಿಬರುಂ ಮಣ
ನೋನ್ನತರಣ ಮೇಳಗರವರೊಳಗ್ಗಳದದಟಂ
ತನ್ನಭಿಮಾನದ ಭುಜಬಲ
ದುನ್ನತಿಯನೆ ಮೇರವ ಬಾಹುಬಲಿ ಮುನ್ನೆರಗಂ [4]

ಈ ಪದ್ಯ ಭಾಗದ ಮಾತುಗಳನ್ನು ಪುರೋಹಿತರು ಭರತನಿಗೆ ಹೇಳುವ ರೀತಿ ಹೀಗೆದೆ ನಿನ್ನ ಅಷ್ಟು ಮಂದಿ ತಮ್ಮಂದಿರೂ ಹೆಚ್ಚಿನ ಮಾನಾಭಿಮಾನವುಳ್ಳವರು ಅವರು ನಿನಗೆ ಸ್ವಲ್ಪವೂ

ಕೂಡ ಬಾಗುವರಲ್ಲ. ಅವರಲ್ಲಿ ಶ್ರೇಷ್ಠನಾದ ಪರಾಕ್ರಮಿಯೂ ಆದಂತಹ ತನ್ನದೊಂದು ಅಭಿಮಾನದ ಭುಜಬಲವ ಮೆರೆದು ತೋರುವ ಬಾಹುಬಲಿಯಂತು ಮೊದಲೆ ಬಾಗುವವನಲ್ಲ ಎಂದು ಪುರೋಹಿತ ಹೇಳುವ ಪರಿ ಬಾಹುಬಲಿಯನು ಪಂಪನ ದೃಷ್ಟಿಯಲ್ಲಿ ಎಷ್ಟು ಶ್ರೇಷ್ಠನಾಗಿದ್ದ ಎಂದು ತಿಳಿಯುತ್ತದೆ.

ಆದಿಬ್ರಹ್ಮರ ಕೊಟ್ಟೀ
ಮೇದಿನಿಗಾನೊಡೆಯ ನಾತನರ ಸಿನಿವಿರಿದೊಂ
ದಾದೊಡಮೇ ನೆನಗೆಂಬ ಮ
ದೋದಯದೊಳ್ ದೇವ ಬಾಹುಬಲಿ ಬಲಿದಿರ್ದ್ದಂ[4]

ಆದಿಬ್ರಹ್ಮನಾದ ವೃಷಭನಾಥನು ಕೊಟ್ಟಿರುವ ಭೂಮಿಗೆ ನಾನು ಒಡೆಯನಾಗಿದ್ದೇನೆ. ಭರತರಾಜನ ಅರಸುತನ ಎಷ್ಟೇ ದೊಡ್ಡದಾಗಿದ್ದರೂ ನನಗೇನು ಎಂದು ವಾದದಿಂದ ಬಾಹುಬಲಿ ಬಲಿತಿರುವನ್ನು ಎಂದು ಹೇಳಿರುವುದು ಮುಂದೆ ಈತನು ಆಡಿದ ಮಾತುಗಳಲ್ಲಿ ಸತ್ಯವಿದೆ ಎನಿಸುತ್ತದೆಯಾದರೂ ಅಣ್ಣ ತಮ್ಮಂದಿರಲ್ಲಿ ಅಸಮದಾನವನ್ನು ಮೂಡಿಸುವ ಮಾತುಗಳ ಕಂಡುಬರುವಂತೆ ಚಿತ್ರಿತವಾಗಿದೆ. ಪುರೋಹಿತರ ಮಾತುಗಳಲ್ಲಿ ಭರತನ ಬಗೆಗೆ ತಮ್ಮಂದಿರಲ್ಲಿ ಉಂಟಾಗಬೇಕಾದ ಕೋಪಕ್ಕೆ ಕಾರಣಗಳನ್ನು ಪುರೋಹಿತಿರ ಮಾತುಗಳಲ್ಲಿ ಚಿತ್ರಿಸಿದ್ದಾನೆ.

ಪುರೋಹಿತರ ಮಾತಿನಿಂದ ಕೋಪಗೊಂಡಂತಹ ಭರತನಲ್ಲಿ ಸಕಲವನ್ನು ಗೆದ್ದಿದ್ದರೂ ಸಹ ಎಲ್ಲಾ ಅರಸರು ನನಗೆ ಏರಗಿದರೂ ಏನು ಪ್ರಯೋಜನ. ಬಾಹುಬಲಿ ಮತ್ತು ಅವನ ಆಳ್ವಿಕೆಯಲ್ಲಿ ಇರುವ ಪೌದನಾಪುರ ನನ್ನ ಒಡೆತನಕ್ಕೆ ಬರದಿದ್ದರೆ ಸಕಲ ಪಟ್ಟಣಗಳ ನನ್ನ ವಶಕ್ಕೆ ಬಂದರೇನು ಎಂಬ ಭರತನ ಮನಃ ಸ್ಥಿತಿಯಲ್ಲಿ ಬಾಹುಬಲಿಯಲ್ಲಿ ಇರುವ ದೃಢತೆಯನ್ನು ತಿಳಿಸುತ್ತಿದೆ. ನಂತರ ಭರತನು ತನ್ನ ದೂತರಿಂದ ತನ್ನ ತಮ್ಮಂದಿರಿಗೆ ಸಂದೇಶವನ್ನು ಕಳುಹಿಸಿದಾಗ ನೂರು ಜನ ತಮ್ಮಂದಿರು ಅಣ್ಣನ ನಡವಳಿಗೆ ಮನ ನೊಂದು, ತಂದೆಯ ಬಳಿ ದೀಕ್ಷೆ ಪಡೆಯುತ್ತಾರೆ. ಆದರೆ ಕವಿಯ ಬಾಹುಬಲಿಯನ್ನು ಭರತನಿಗೆ ಎರಗುವುದು ಸಾಧ್ಯವಿಲ್ಲ ಎನ್ನುವ ರೀತಿಯ ನೂರು ಜನ ತಮ್ಮಂದಿರ ಛಲವನ್ನು ತೋರಿಸಿದ್ದಾನೆ.

ಬಾಹುಬಲಿಯ ಬಳಿಗೆ ಹೋದ ದೂತರ ಬಗ್ಗೆ ಪಂಪನು ವಿಶೇಷ ವಿವರವನ್ನು ನೀಡಿದ್ದಾನೆ. ಬಾಹುಬಲಿ ಮತ್ತು ದೂತರ ನಡುವೆ ಸಂಭಾಷಣೆನ್ನು ನಡೆಸಿದ್ದಾನೆ. ಈತನ ಬಳಿ

ಬಂದ ದೂತನು ವಿಶೇಷ ಪ್ರತಿಭೆಯುಳ್ಳವನು ಕೊಂಕುನುಡಿಯಲ್ಲಿ ನುರಿತವನಾಗಿದ್ದ. ದೂತನ ಬಾಹುಬಲಿಯ ಬಳಿಗೆ ಬಂದಾಗ ಅಣ್ಣನ ಆಶಯವನ್ನು ಸುಲಭವಾಗಿ ಗ್ರಹಸಿದ್ದಾನೆ. ತನ್ನ ಬಳಿ ಬಂದಂತಹ ದೂತನಲ್ಲಿ ಬಾಹುಬಲಿಯು ಭರತನ ಬಗ್ಗೆ ಕುಶಲ ಪ್ರಶ್ನೆಯನ್ನು ಕೇಳುವ ರೀತಿ ವಿನಯವನ್ನು ತೋರಿಸಿದ್ದಾನೆ. ನಂತರ ಭರತನ ಬಗೆಗಿನ ಪ್ರತಿಭಟನೆಯ ಮಾತುಗಳನ್ನು ಬಾಹುಬಲಿಯಿಂದ ಕವಿ ಈ ರೀತಿಯಾಗಿ ಆಡಿಸಿದ್ದಾನೆ. ಭರತನನ್ನು ವ್ಯಂಗ್ಯವಾಗಿ ಕಾಣುವುದರ ಜೊತೆಗೆ ಅಣ್ಣನ ಕ್ಷೇಮವನ್ನು ವಿಚಾರಿಸುವಂತೆ ಚಿತ್ರಿಸಿದ್ದಾನೆ. ಅಪದ್ಯ ಹೀಗಿದೆ

ಎಂತಾನುಂ ನೆನೆದಂ ಬಹು
ಚಿಂತಂ ಚಕ್ರೇರೆಮ್ಮ ದಿಗ್ವಿಜಯ ಮುಮಣ
ದಂತೆಡರದೆಯ್ದೆ ನಡೆದುದೆ
ಸಂತಮ ದಕ್ಷಿಣ ಭುಜಕ್ಕೆ ಭೂವಲ್ಲಭನಾ[4]

ದೂತನು ತಂದಿರುವ ಪತ್ರದಲ್ಲಿರುವಂತೆ ಭರತನಿಗೆ ಬಾಹುಬಲಿಯು ಎರಗಬೇಕು ಎಂಬ ಮಾತನ್ನು ಕೇಳಿದಾಗ ಬಾಹುಬಲಿಯಲ್ಲಿ ಉಂಟಾದ ಕೋಪವನ್ನು ಕವಿ ಚಿತ್ರಿಸಿರುವ ರೀತಿಯಿದೆ ಕೋಪದಿಂದ ಬೆವರಿನ ಧಾರಾಪ್ರವಾಹದಿಂದ ಕಪೋಲತಲವು ಕೆಂಪಾಯಿತು. ಆಗ ಬಾಹುಬಲಿಯು ಉರಿಯುತ್ತಿದ್ದ ಬೆಂಕಿ ಉಂಡೆ ಎಂತೆ ದೀಪ್ತಿವಾದ ಕಪೋಲದಲ್ಲಿ ಉಕ್ಕಿ ಹರಿದ ಮದಜಲಾ ಟೋಪದಿಂದ ಭೀಕ್ಷಣವೂ ಆರುಣವೂ ಆದ ಗಂಡ ಪ್ರದೇಶವುಳ್ಳ ಮದ್ದಾನೆಯನ್ನು ಅನುಕರಿಸಿದನು. ಈ ವಿವರಣೆಯು ಬಾಹುಬಲಿಯು ಕೋಪದ ಪರಿಯನ್ನು ಚಿತ್ರಿಸಿದ್ದಾನೆ. ಮುಂದೆ ಬಾಹುಬಲಿಯು ಮಾತಿನಲ್ಲಿರುವ ಆತನ ಛಲವನ್ನು ಕವಿ ಚಿತ್ರಿಸಿದ್ದಾನೆ.

ಹಿರಿಯಣ್ಣಂಗೆರೆಗುವುದೇಂ
ಪರಿಭವವೇ ಕಿರೇ ನೆತ್ತಿಯೊಳ್ ಬಾಳಂ ನಿ
ರ್ನೆರಮೂರೆ ಚಲದಿನೆರಗಿಸ
ಲಿರೆ ಭರತಂಗೆರಗುವೆರಕಮಂಜಮೆಯಲ್ತೇ
ವಿನಯಮುಮೆರಕಮುಮಪ್ಪುದು
ಸನಾಭಿಗಳ್ ಸಂಗಂತಗಳಪ್ಪೊಡೆ ಪೆಸರ್ಗೊಂ
ಡನಿತರೊಳೆನ್ನಂ ಸೈರಿಸ
ನೆನೆ ಭರತಂಗೆರಗಿ ಲೋಕದಿಂ ನಗಿಸುವೆನೇ [4]

ಅಂದರೆ ಹಿರಿಯಣ್ಣನಿಗೆ ತಲೆಬಾಗುವುದು ಅವಮಾನವೆನಲ್ಲ. ಆದರೆ ಅವನು ನೆತ್ತಿಯ

ಮೇಲೆ ಕತ್ತಿಯನ್ನು ಗೀರಿ ಛಲದಿಂದ ತಲೆಬಾಗಿಸಲು ಹೊರಟಿರುವುದು ಇದರ ಕಾರಣ ಭರತನ ಹೆಸರನ್ನು ಕೇಳಿದರೆ ಬಾಹುಬಲಿ ಸಹಿಸುವುದಿಲ್ಲ. ನಾನು ಭರತನೆಂಬ ಭಂಡನಿಗೆ ತಲೆಬಾಗಿದರೆ ಜನರು ನಗುತ್ತಾರೆ. ಆದ್ದರಿಂದ ಆದಿದೇವನು ದಯಪಾಲಿಸಿರುವ ಈ ಭೂಮಿಗೆ ಯಾರು ಒಡೆಯ ಎಂಬ ಸ್ಪರ್ಧೆ ಬೇಕಿಲ್ಲ. ರಾಜನ ಪಟ್ಟವನ್ನು ಏರಿದ ಭರತ ಚಕ್ರರತ್ನದ ಸಹಾಯದಿಂದ ಚಕ್ರೇಶ್ವರ ನೆನಿಸಿಕೊಡಿದ್ದಾನೆ ವೃಥಾ ನನ್ನ ಮೇಲೆ ಸಾಮರ್ಥ್ಯವನ್ನು ತೋರುವುದೆ ಎಂದು

ದೊರಯಲ್ಲದಂಗೆ ನುಡಿವುದು!
ಪುರುಳಿಲ್ಲದ ಮಾತನೆಮ್ಮೊಳು ನುಡಿವುದೆ ಪೇಳ್
ಎರಲೆಗೆ ಪಾಡುವ ಗೋರಿಯ
ನರಣ್ಯದೊಳ್ ಮೃಗವಿರೋದೀಗಂ ಪಾಡುವುದೇ [4]

ಭರತನು ಬಾಹುಬಲಿಯೊಂದಿಗೆ ಇಂಥ ಮಾತನು ಆಡುವುದು ಸರಿಯಿಲ್ಲ. ಸಮರ್ಥವಿಲ್ಲದವರೊಂದಿಗೆ ಅರ್ಥವಿಲ್ಲದ ಮಾತುನ್ನು ಆಡಲಿ. ನಮ್ಮೊಡನೆಯೂ ಹಾಗೆ ಆತ ಮಾತನಾಡಬಹುದೆ? ಜಿಂಕೆಯನ್ನು ಹಿಡಿಯುವುದಕ್ಕಗಿ ಹಾಡುವ ಗಾನವನ್ನು ಸಿಂಹದ ಎದುರಿಗೆ ಹಾಡಬಹುದೆ? ಭುಜಬಲಿಯು ಭರತ ಪುರುವಿನ ಮಕ್ಕಳು ಹೀಗಿರುವಾಗ ಇಬ್ಬರ ನಡುವೆ ಹೋಲಿಕೆಗೆ ಬಂದರೆ ಯಾರ ಶಕ್ತಿಯು ಈ ಭೂಮಿಯ ಮೇಲೆ ಅಧಿಕವಾಗಿರುವುದು ಎಂಬುದನ್ನು ನಿಶ್ಚಿಯಿಸಲು ಭುಜಬಲಿಯ ಬಾಹು ದಂಡ 'ತುಲಾ ತಕ್ಕಡಿಯಾಗಲಿ' ಎಂದು ಕಡ್ಡಿ ಎರಡು ತುಂಡು ಮಾಡಿದಂತೆ ನಿರ್ಧಾಕ್ಷಿಣ್ಯವಾಗಿ ಭರತನನ್ನು ಬಾಹುಬಲಿ ಖಂಡಿಸುತ್ತಾನೆ.

ಬಾಹುಬಲಿ ಮತ್ತು ದೂತನ ಸಂಭಾಷಣೆಯ ಭಾಗದಲ್ಲಿ ಪಂಪನು ಹೆಜ್ಜೆ ಹೆಜ್ಜೆಗೂ ಪೂರ್ವ ಪುರಾಣವನ್ನು ಅನುಸರಿಸಿದ್ದಾನೆ. ದೂತನಿಗೆ ಭರತನನ್ನು ಯುದ್ದಕ್ಕೆ ಸನ್ನದನಾಗುವಂತೆ ಹೇಳಿಕಳಿಸುತ್ತಾನೆ. ಎರಡು ಕಡೆಯಲ್ಲಿ ಸಮರ ಸನ್ನಾಹವನ್ನು ರಣೋತ್ಸಾಹವನ್ನು ಪಂಪನು ವಿರೋಚಿತವಾಗಿ ವರ್ಣಿಸಿದ್ದಾನೆ.

ವೃಷಭನಾಥನ ಇಬ್ಬರು ಚರಮದೇಹಿ ಪುತ್ರರ ನಡುವೆನಡೆಯುವ ಯುದ್ಧದ ಭೀಕರತೆಯನ್ನು ಅರಿತ ಉಭಯ ಪಕ್ಷದ ಮಂತ್ರಿಗಳು ಧರ್ಮಯುದ್ಧವನ್ನು ಮಾಡಲು ಒಪ್ಪಿಸಲು ಭರತ ಬಾಹುಬಲಿಗಳ ಬಳಿಗೆ ಹೋಗಿ ಧರ್ಮಯುದ್ಧಕ್ಕೆ ಇವರಿಬ್ಬರನ್ನು ಒಪ್ಪಿಸಿದ ರೀತಿಯನ್ನು ಪಂಪಕವಿಯು ಯುದ್ಧದಿಂದಾಗುವ ವಿಪತ್ತನ್ನು ಎತ್ತಿ ಆರವುದನ್ನು ಗಮನಿಸುವಂತದು. ಕವಿಯು ಮಂತ್ರಿಗಳಿಂದ ಭರತನನ್ನು ಹೋಗಳುವಿಕೆಯ ಮಾತುಗಳನ್ನಾಡಿಸಿ ಧರ್ಮಯುದ್ಧಕ್ಕೆ

ಒಪ್ಪಿಸುತ್ತಾರೆ.. ಇಂತಹ ಕಡೆಯಲ್ಲೆಲ್ಲಾ ಪಂಪ ತತ್ಕಾಲೀನ ರಾಜಕೀಯ ಜ್ಞಾನದಲ್ಲಿ ತನಗಿರುವ ಪಟುತ್ವ ತೋರಿದ್ದಾನೆ. ಧರ್ಮಯುದ್ಧದ ವಿಚಾರದಲ್ಲಿ ಅಣ್ಣ ತಮ್ಮಂದಿರಿಬ್ಬರಿಗೂ ಅಸಮದಾನವಾದರೂ ಸಹ ಬಾಹುಬಲಿಯೊಂದಿಗೆ ಯುದ್ಧ ಸಂಘರ್ಷವೊದಗಲೆಂಬ ಭರತನ ಬಯಕೆಯನ್ನು ಕವಿ ಗರ್ಭಿಣಿಯಾದ ದರಿದ್ರ ಕುಟುಂಬಿನಿಯ ಬಯಕೆಯಂತೆ ಆಯಿತು ಎಂದು ನಿಮ್ಮರಸನ ಗರ್ವೋನ್ನತಿಯ ಕ್ಷಯವನ್ನು ಸ್ವಲ್ಪವಾದರೂ ನೋಡಿರಿ! ಬಳಿಕ ಧರ್ಮಯುದ್ಧವೆ ಜರುಗಲಿ ಎಂದು ಬಾಹುಬಲಿಯಿಂದ ಕವಿ ನುಡಿಸಿದ್ದಾನೆ. ಕೊನೆಗೆ ಜಲ, ದೃಷ್ಟಿ ಬಾಹುಯುದ್ಧವೆಂಬ ದ್ವಂದ್ವಯುದ್ಧ ನಡೆಯಲು ಇಬ್ಬರು ಅರಸರು ಒಪ್ಪಿದರು.

ಪಂಪನು ಈ ಧರ್ಮ ಯುದ್ಧದ ಪ್ರಸಂಗವನ್ನು ವಿವರಿಸುವಾಗ ಪೂರ್ವಪೂರಾಣದ ಪೀಠಿಕೆಯನ್ನು ಅನುಸರಿಸಿದ್ದರೂ ಅಲ್ಲಿಲ್ಲಿ ತನಗೆ ಅನುಕೂಲವಾಗುವಂತೆ ವ್ಯತ್ಯಾಸವನ್ನು ಮಾಡಿಕೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕೆಲವು ವ್ಯತ್ಯಾಸಗಳನ್ನು ಸ್ಪಷ್ಠವಾಗಿ ಗೋಚರಿಸುತ್ತದೆ. ಕವಿಯು ಪೂರ್ವ ಪುರಾಣದಲ್ಲಿ ಇಲ್ಲದ ಕೆಲವು ಭಾಗಗಳನ್ನು ತನ್ನ ನಾಟಕೀಯ ಗುಣದಿಂದ ಚಿತ್ರಿಸಿದ್ದಾನೆ.

ಭರತ - ಬಾಹುಬಲಿಗಳ ನಡುವೆ ಯುದ್ದವನು ಮಾಡಿಸುವೆ ಹಾಗೂ ತನ್ನ ಆದಿಪುರಾಣದ ಯುದ್ಧದ ಅಶ್ವಾಸದಲ್ಲಿ ಪಂಪನು ಬಾಹುಬಲಿಯನ್ನು ನಾಯಕನಾಗಿಸಿಕೊಂಡು ಕಥೆಯನ್ನು ವಿಸ್ತರಿಸುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ.

ದೃಷ್ಠಿ ಜಲಯುದ್ಧದಗಳಲ್ಲಿ ಬಾಹುಬಲಿ ಜಯವನ್ನು ಸಾಧಿಸಿ ಭರತನಿಗೆ ಸೋಲಾಗುತ್ತದೆ. ದೃಷ್ಠಿ ಜಲ ಯುದ್ಧಗಳ ಸಂದರ್ಭವನ್ನು ಅದ್ಭುತವಾಗಿ ಚಿತ್ರಿಸಿದ್ದಾನೆ. ಮಲ್ಲಯುದ್ಧದ ಸಂದರ್ಭದಲ್ಲಿ ಭರತನನ್ನು ಮೇಲೆತ್ತಿದ ಬಾಹುಬಲಿ ಭರತನ ಚಕ್ರವರ್ತಿ ಪದಕ್ಕೆ ಅಗೌರವವಾಗಬಾರದೆಂದು ಭಾವಿಸಿ ಆತನನ್ನು ನೆಲಕ್ಕೆ ಕುಕ್ಕಲಿಲ್ಲ ಎಂಬುದನ್ನು ಪಂಪ ಕವಿ ಆದಿಪುರಾಣದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿ ಹೀಗೆ ಚಿತ್ರಿಸಿದ್ದಾನೆ.

ಭರತಾವನೀಶ್ವರಂ ಗುರು
ಪಿರಿಯಣ್ಣ ಚಕ್ರವರ್ತಿ ಮಹೀಮಾಕರನೀ
ದೊರೆಯನು ಮಳವಳೆಯೆ ವಸುಂ
ಧರೆಯೊಳ್ ತಂದಿಕ್ಕಿ ಭಂಗಮಂ ಮಾಡುವೆನೇ[4]

ಭರತ ನನ್ನ ದೊಡ್ಡಣ್ಣ ಗುರು ಚಕ್ರವರ್ತಿ. ಮಹಿಮೆಗೆ ಆಗರ ಶಕ್ತಿಯಾಗಿದ್ದಾನೆ. ಈ

ರಾಜನನ್ನು ಭೂಮಿಯ ಮೇಲೆ ಏಸೆದು ಅದೇಕೆ ಅವಮಾನವನ್ನು ಮಾಡಲಿ? ಎನ್ನುವ ರೀತಿ ಎಂದು ಪಂಪನ ಈ ಪ್ರತಿಭಾ ತೀಕ್ಷ್ಣತೆಯುನ್ನು ನೋಡಿದರೆ ಜಿನ ಸೇನಾಚಾರ ಕಾವ್ಯದ ಮಾತುಗಳಲ್ಲಿ ಮತಷ್ಟ ಪ್ರಭಾವಶಾಲಿಯಾಗಿಸಿವೆ.

ಭರತನು ಯಾವ ಚಕ್ರರತ್ನದಿಂದ ಬೀಗಿ ಗರ್ವದ ಮಾತುಗಳನ್ನಾಡಿದ್ದನೋ ಅದೇ ಚಕ್ರರತ್ನ ಇಂದು ಬಾಹುಬಲಿಯ ಮುಂದೆ ಮಸುಳ ನಿಂತಿರುವಾಗ ಭರತನ ಆಹಂಕಾರವೂ ಮಾಯವಾಗಿ ಅಪಮಾನಗೊಂಡಿರುವಂತೆ ತಲೆ ತಗ್ಗಿಸಿ ನಿಂತಿದ್ದಾನೆ. ಇದು ಎಂಥಹ ವೈಚಿತ್ರ್ಯ. ಈ ಸ್ಥಿತಿಯನ್ನು ಕಂಡ ಬಾಹುಬಲಿಯ ಮನಸ್ಸು ವೈರಾಗ್ಯದತ್ತ ತಿರುಗುತ್ತದೆ ರಾಜ್ಯ ವಿಮೋಹ ಬಹಳ ಕಷ್ಟ.

ಸೋದರರರೊಳ್ ಸೋದರರಂ
ಕಾದಿಸುವುದು ಸುತನ ತಂದೆಯೆಡೆಯೊಳ ಬಿಡದು
ತ್ಪಾದಿಸುವುದು ಕೋಪಮನಳ
ವಿದೊರತನೆ ತೊಡರ್ವುದೆಂತು ರಾಜಶ್ರೀಯಾಳ

ಬಾಹುಬಲಿಯ ಮನಃ ಪರಿವರ್ತನೆಯ ಸಂದರ್ಭವು ಈ ಪದ್ಯದಲ್ಲಿ ವ್ಯಕ್ತವಾಗಿದ್ದು ಅಣ್ಣ ತಮ್ಮಂದಿರನ್ನು ಹೋರಾಡುವಂತೆ ಮಾಡುತ್ತದೆ. ತಂದೆ ಮಕ್ಕಳ ನಡುವೆ ಕೋಪವನ್ನು ಉಂಟುಮಾಡುವುದು ರಾಜ್ಯ ಮತ್ತು ನೆಲದ ಈ ವ್ಯಾಮೋಹದ ಶಕ್ತಿಯು ಈ ಪ್ರಮಾಣದ್ದು ಎಂದ ಮೇಲೆ ರಾಜ್ಯ ಸಿರಿಯಲ್ಲಿ ತೋಡಗಿಕೊಳ್ಳುವುದು ರಾಜ್ಯಲಕ್ಷ್ಮಿಯ ಸಂಬಂಧ ಮಾಡುವುದು ಹೇಗೊ ಎಂದು ಬೇಸರಗೊಂಡು ಈ ರಾಜಲಕ್ಷ್ಮಿಯನ್ನು ಚಂಚಲೆ ಎಂದು ಜಿನ ದೀಕ್ಷೆಯನ್ನು ಪಡೆಯಲು ಮನಸ್ಸು ಮಾಡುತ್ತಾನೆ.

"ನಿನ್ನ ಬೆಸಸಿದ ಚಕ್ರಮ
ದೆನ್ನೀ ದೇಹಾದ್ರಿಯಂ ಗೆಲಲ್ ನೆಳೆಯದು ನೀಂ!
ಬಿನ್ನನಿದೇ ಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ!![6]

ಎಂದು ಬಾಹುಬಲಿಯು ಅಣ್ಣ ಭರತನನು ಕುರಿತು ನಿನ್ನ ಅಜ್ಞಾಧೀನವಾದ ಚಕ್ರವು ನನ್ನ ದೇಹದೆಂಬ ಬೆಟ್ಟವನ್ನು ಗೆಲ್ಲಲು ಸಮರ್ಥವಾಗುವುದಿಲ್ಲ. ವಜ್ರಗಿರಿಯನ್ನು ವಜ್ರವು ನಾಶಪಡಿಸಲು ಸಾಧ್ಯವೇ? ಈ ಮಾತು ವಿರಾಗಿಯಾಗಿ ಹೊರಟಿರುವನಿಗೂ ಈ ಮಾನವ ಹಮ್ಮು

ಬಿಡದೆ ಸತಾಯಿಸುತ್ತದೆ. ನಿನ್ನಲ್ಲಿ ಹಿರಿದಾದ ಅವಿನಯದ ದೋಷವಿದೆ. ಅದನ್ನು ಅವಧರಿಸದಿರು, ನಾನು ಅದನ್ನು ತಪಸ್ಸಿನಿಂದ ನೀಗುವೆನು. ಆಗ್ರಹವಿನ್ನು ಸಾಕು ಬಿಡು. ನನ್ನ ದುರ್ವಿಳಸನವನ್ನು ಮರೆತು ಬಿಡು ಎಂದು ಅಣ್ಣನಿಗೆ ತಿಳಿಸಿದನು. ಬಾಹುಬಲಿ ಕುಮಾರನು ತಪಸ್ಸು ಆಚರಿಸುವ ನಿಶ್ಚಯ ಮನದವನಾದಾಗ ಭರತನಿಗೆ ಪೆಚ್ಚೆನಿಸಿತು. ಮನದಲ್ಲಿದ್ದ ತಮ್ಮನ ಮೇಲಿನ ಕೋಪವೆಲ್ಲವೂ ಕರಗಿ ಹೋಯಿತು. ಈ ಸಂದರ್ಭದಲ್ಲಿರುವಾಗಲೆ ಭರತನನ್ನು ಕುರಿತು "ನೆಲಸುಗೆ ನಿನ್ನ ವಕ್ಷದೊಳ್ ನಿಶ್ಚಲಮೀಭಟಖಡ್ಗ ಮಂಡಲೊ'' ಮಾತಿನೊಂದಿಗೆ ಈ ರಾಜ್ಯಲಕ್ಷ್ಮೀ ನಿನ್ನ ಎದೆಯ ಮೇಲೆ ನಿಶ್ಚಲವಾಗಿ ನೆಲೆಸಿರಲಿ ನನ್ನ ತಂದೆ ಇತ್ತ ರಾಜ್ಯವನ್ನು ನಿನಗೆ ಸಮರ್ಪಿಸುವೆನು. ನೀನು ಬಯಸಿರುವ ಹೆಣ್ಣನ್ನೂ, ಭೂಮಿಯನ್ನೂ, ನಾನು ಬಯಸಿದರೆ ನನ್ನ ಕೀರ್ತಿಯು ಮಾಸದೆ! ಎಂದು ಮುನಿದೀಕ್ಷೆಯನ್ನು ಪಡೆದು ತಪಸ್ಸನ್ನು ಆಚರಿಸುವಾಗ ಅಣ್ಣನ ರಾಜ್ಯದ ಮೇಲೆ ನಿಂತಿದ್ದಾನೆ ಎಂಬ ಭಾವನೆ ಮೂಡಿ ಬಾಹುಬಲಿಯಲ್ಲಿ ಮಾನಕಾಷಾಯ ಉಳಿದಿದ್ದರಿಂದ ಕೇವಲ ಜ್ಞಾನ ಲಭಿಸುವುದು ತಡವಾಗುತ್ತದೆ. ಇದನ್ನು ತಿಳಿದ ಭರತನು ಸಮಯದಲ್ಲಿ ಭರತನು ಬಾಹುಬಲಿಯಲ್ಲಿಗೆ ತೆರಳಿ ನಿನ್ನನ್ನು ನೀನು ಕುರಿತು ಚಿಂತಿಸು ಬೇರೆಯೇನನ್ನೂ ಚಿಂತಿಸಬೇಡ ಎಂದು ಬೇಡಿಕೊಂಡನು ಬಾಹುಬಲಿಯ ಅಂತಃಕರಣ ತಿಳಿಯಾಗಿ ಕೇವಲ ಜ್ಞಾನ ಲಭಿಸುತ್ತದೆ. ಬಳಿಕ ಬಾಹುಬಲಿ ಧರ್ಮವಿಹಾರ ಕೈಗೊಳ್ಳುತ್ತಾನೆ.

ಪಂಪನ ಆದಿಪುರಾಣದಲ್ಲಿನ ಬಾಹುಬಲಿಯ ಕಥಾವಸ್ತುವನ್ನು ವಿನ್ಯಾಸಗೊಳಿಸುವುದರ ಜೊತೆಗೆ ಭರತನನ್ನೂ ಅಂದರೆ ಅಣ್ಣ ತಮ್ಮರಿಬ್ಬರ ಪಾತ್ರಗಳನ್ನು ಮಿಗಿಲಾಗಿ ಬೆಳಗಲೂ ಹೂಡಿದ ವಸ್ತು ಸಂಯೋಜನೆ ಅದ್ಭುತವಾದದ್ದು. ಅಣ್ಣಾ - ತಮ್ಮಂದಿರಿಬ್ಬರೂ ರಾಜ್ಯ ಮೋಹ ಮೂಲವಾದ ಅಧಿಕಾರ ಮದದ ಅಸಧಾಗ್ರಹದಿಂದ ಮುಕ್ತರಾಗಿ ಒಬ್ಬರನೊಬ್ಬರೂ ಅರ್ಥ ಮಾಡಿಕೊಳ್ಳುವಂತಾದರೂ ಒಬ್ಬರ ಇನ್ನೊಬ್ಬರ ಲೇಸನ್ನು ಬಯಸುವಂತಾದದು ಹೃದಯಂಗಮ ಸಂಗತಿಗಳಾಗಿವೆ. 'ಹೇಯಂ ಸಾಮ್ರಾಜ್ಯಂ ಉಪದೇಯಂ ಪ್ರವ್ರಜ್ಯಂ' ಎಂದು ಇಬ್ಬರೂ ಮನ ಗೊಂಡಿರುವುದು ಪಂಪನ 'ಆದಿಪುರಾಣ'ದ ಕಥಾ ವಸ್ತುವಿನಲ್ಲಿ ಉತ್ತಮವಾಗಿ ವಿನ್ಯಾಸಗೊಂಡಿದೆ.

ಕಾವ್ಯ ಶೈಲಿ :

ಪಂಪನ ಆದಿಪುರಾಣ ಕಾವ್ಯದ ಶೈಲಿಯನ್ನು ನೋಡಿದರೆ ಕವಿಯು ಜಿನಸೇನಾಚಾರ್ಯರಿಗೆ ಋಣಿಯಾಗಿದ್ದರೂ ಅದನ್ನು ಕನ್ನಡದ ನಡೆಗೆ ಹೊಂದುವಂತೆ ಮಾಡುವಲ್ಲಿ ತನ್ನ ಕವಿತ್ವದ ಶಕ್ತಿಯನ್ನು ತೋರಿಸಿದ್ದಾನೆ. ಪಂಪನ ಜಿನಸೇನಾಚಾರ್ಯರ ಪೂರ್ವಪುರಾಣವನ್ನು ಓದಿ ಅವರ ಕಥೆಯನ್ನು ಕನ್ನಡದಲ್ಲಿ ಅಳವಡಿಸುವಾಗ ಅಲಂಕಾರ ಕಲ್ಪನೆ ಚಿತ್ರಶೈಲಿ ನಾಟಕೀಯತೆ ಮೊದಲದವುಗಳನ್ನು ಅರ್ಥ, ಭಾವ ಕೆಡದಂತೆ ಬಳಸಿಕೊಂಡಿದ್ದು ಕೇವಲ ಪೂರ್ವಪುರಾಣ ಕೃತಿಯಲ್ಲಿರುವ ಕಥೆಯ ಅನುವಾದಕವಾಗಿ ಮಾತ್ರ ಉಳಿದಿಲ್ಲ. ಕೆಲವು ಸಂದರ್ಭದಲ್ಲಿ ಮೂಲದ ಭಾವಕ್ಕೆ ಮತ್ತಷ್ಟು ಕುಸರಿ ಕೆಲಸವನ್ನು ಮಾಡಿ ಕಾವ್ಯದ ಸೊಬಗನ್ನು ಇಮ್ಮಡಿಗೊಳಿಸಿದ್ದಾನೆ.

ಜಿನಸೇನಾಚಾರ್ಯರ ವಿಸ್ತಾರವಾದ ಪೂರ್ವಪುರಾಣವನ್ನು ಸಂಗ್ರಹಿಸುವಲ್ಲಿ ಈ ಮೂಲಕ ಕಾವ್ಯದ ತಿರುಳನ್ನು ಕನ್ನಡಕ್ಕೆ ಅನುವಾದಿಸುವಲ್ಲಿ ಪಂಪ ಕವಿಯು ಔಚಿತ್ಯ ಪ್ರಜ್ಞೆ ಮತ್ತು ರಸಭಾವಗಳ ಗ್ರಹಿಸುವಿಕೆಯು ವಿವೇಕ ಅತ್ಯುತ್ತಮವಾದದ್ದು. ಕಾವ್ಯದಲ್ಲಿ ಕನ್ನಡ ತಿರುಳನ್ನು ಹಿಡಿದುಕೊಡುವಲ್ಲಿ ಆತನ ಲೋಕಾನುಭವ, ಉತ್ಪತ್ತಿ ಜ್ಞಾನ, ಜೈನಧರ್ಮದ ಧಾರ್ಮಿಕ ಮತ್ತು ಸೈದ್ಧಾಂತಿಕ ಆಚಾರ ವಿಚಾರಗಳನ್ನು ಕುರಿತ ಸೂಕ್ಷ್ಮವಾಗಿ ಜ್ಞಾನವನ್ನು ಪಂಪನ ಕಾವ್ಯದಲ್ಲಿ ಗುರುತಿಸಬಹುದು. ಪಂಪ ತನ್ನ ಕಾವ್ಯದ ವಸ್ತುವನ್ನು ತನ್ನ ಅಧಿಕಾರದಿಂದ ನಡೆಸಿಕೊಂಡು ಹೋಗುವುದನ್ನು ಕಾಣಬಹುದು. ಕೆಲವು ಸಂದರ್ಭದಲ್ಲಿ ಒಟ್ಟು ಕಾವ್ಯದ ಉದ್ದೇಶದ ಚೌಕಟ್ಟಿನಲ್ಲಿ ತೋರಬಹುದಾದ ಪ್ರತಿಭಾಸ್ವಾತಂತ್ರವನ್ನು ಪ್ರಕಟಿಸಿದ್ದಾನೆ. ಅಂಥ ಸಂದರ್ಭದಲ್ಲಿ ಕುಸುರಿ ಬಿಡಿಸುವ ಮಿಂಚು ಹಾಯಿಸುವ ಅನುಭವದ ವಿವರದಲ್ಲಿ ಸೂಕ್ಷ್ಮ ಸುಳಿ - ಸುಳಿವುಗಳನ್ನು ಗುರುತಿಸುವ ಉನ್ನತ ಮಟ್ಟದ ಲೋಕಾನುಭವ ವಿವೇಕವನ್ನು ಪಂಪನ ಕಾವ್ಯದಲ್ಲಿ ಕಾಣಬಹುದು.

ಪಂಪನ ಕಾವ್ಯ ಸ್ವರೂಪದ ರೀತಿಯ ಜಿನಸೇನರ ರೀತಿಯದೇ ಆಗಿದೆ. ಉತ್ತಮವಾದ ಪದ ರಚನೆ, ವಾಕ್ಯ ರಚನೆ ಆನಂದವನ್ನು ಉಂಟುಮಾಡುವಂತಹ ಅರ್ಥ ಅಲಂಕಾರ ಶೃಂಗಾರಾಧಿಗಳಿಂದ ಕೂಡಿದ ಕಾವ್ಯವು ಮಹಾಕಾವ್ಯವೆನಿಸುವುದೆಂಬ ಅಭಿಪ್ರಾಯವನ್ನು ಪಂಪನು ಅನೋಮೋದಿಸಿ ರುವುದನ್ನು ಕಾವ್ಯ ಉದ್ದಕ್ಕೂ ನೋಡುತ್ತೇವೆ. ಅಲ್ಲದೆ ಪಂಪನೇ ಹೇಳಿಕೊಂಡಿ ರುವಂತೆ ತನ್ನ ಕಾವ್ಯದಲ್ಲಿ 'ಹಿತ ಮಿತ ಮೃದು ವಚನ' ರಚನೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ.

ಪಂಪನ ಆದಿಪುರಾಣ ಕೃತಿಯ ಪದ್ಯ ಗದ್ಯಗಳಿಂದ ಕೂಡಿದ ಚಂಪೂ ಕಾವ್ಯವಾಗಿದೆ. ತನ್ನ ಕಾವ್ಯದಲ್ಲಿ ವರ್ಣನೆಯ ಸಂದರ್ಭಬಂದಾಗ ಪದ್ಯವನ್ನು ವಿವರಣೆಯ ಸಂದರ್ಭದಲ್ಲಿ ಗದ್ಯವನ್ನು ಸಂದರ್ಭೋಚಿತವಾಗಿ ಬಳಸಿದ್ದಾನೆ. ಅನೇಕ ಕವಿಗಳು ಪಂಪನ ಕವಿತಾ ಸಾಮರ್ಥ್ಯವನ್ನು ಅವನ ಹಲವಾರು ಗುಣಗಳನ್ನು ಪ್ರಕಟಿಸುವಾಗ ಆತನ ಕಾವ್ಯಗುಣವನ್ನು ಮತ್ತು ಕಾವ್ಯ ಶೈಲಿಯ ವೈವಿಧ್ಯಮಯವಾಗಿ ನಿರೂಪಿಸುತ್ತಾನೆ.

ಪಂಪನ ಕಾವ್ಯ ಶೈಲಿಯನ್ನು ನೋಡಿದಾಗ ತನಗೆ ಉಚಿತವಾದ ಸಂದರ್ಭದಲ್ಲಿ ತನಗೆ ಬೇಕಾದ ರೀತಿಯಲ್ಲಿ ವರ್ಣಿಸಿ ಬದಲಾಯಿಸಿಕೊಂಡಿದ್ದಾನೆ. ಅದರಂತೆ ಭರತನ ಸೈನ್ಯ ಆಯೋಧ್ಯ ನಗರದ ದ್ವಾರದ ಬಳಿ ನಿಂತಾಗ, ಇದಕ್ಕೆ ಕಾರಣವೇನೆಂದು ಭರತನು ಕೇಳಿದಾಗ ಬಾಹುಬಲಿಯ ಸಾಮರ್ಥ್ಯದ ಬಗೆ ಪುರೋಹಿತರು ಭರತನಿಗೆ ವಿವರಿಸುವುದರೊಂದಿಗೆ ಮುಂದೆ ಘಟಿಸಬಹುದಾದ ಸನ್ನಿವೇಶದ ಪೀಠಿಕೆಯ ರೂಪವಾಗಿ ಹೇಳಿಸಿದ್ದಾನೆ. ಇಲ್ಲಿ ಸಾಮಾನ್ಯವಾಗಿ ಪುರೋಹಿತನಿಂದ ಪಂಪ ಆಡಿಸಿದ ಮಾತು ಮುಂದೆ ನಿಜವಾಗಿಸಿದ್ದಾನೆ. ಮುಂದೆ ಧೂತರು ಭರತನ ನೂರು ಜನ ತಮ್ಮಂದಿರ ಬಳಿ ಹೋಗಿ ಸಂದೇಶವನ್ನು ತಿಳಿಸುತ್ತಾರೆ. ದೂತರು ಹೋದ ನಂತರ ಸೋದರರು ಆಡುವ ಮಾತಿನ ಶೈಲಿಯಲ್ಲಿ ಕವಿಯು ಮೂಲದಲಿಲ್ಲದ ಸೊಗಸು ಇಲ್ಲಿ ಮೈಣಳೆದಿದೆ. "ಅಕ್ಕಿಕೊಟ್ಟು ಮಡುಗೂಳುಣ್ಣಂದಮಂ ಪೋಲದೆ" ಎಂಬ ಮಾತುಗಳು ಪಂಪನ ದೇಸೀ ಸೌಂದರ್ಯದೊಂದಿಗೆ ಶಕ್ತಿಯುತವಾಗಿ ತಂದಿದ್ದಾನೆ. ಬಾಹುಬಲಿಯ ಪಾತ್ರ ಆತನ ಸಾಮರ್ಥ್ಯದ ಬಗೆಗೆ ವಿಶೇಷವಾಗಿ ಹೇಳಿದ್ದಾನೆ.

ಬಾಹುಬಲಿಯ ಪರಾಕ್ರಮವನ್ನು ಬಂಬಿಸುವಂತಹ ಕವಿಯ ಅದ್ಭುತವಾದ ಶಕ್ತಿಯಾಗಿದೆ. ಪಂಪನ ಕಾವ್ಯ ಶಕ್ತಿಯನ್ನು ನೋಡಿದಾಗ ಬಾಹುಬಲಿಯ ಬಳಿಗೆ ಬಂದಂತಹ ದೂತನೊಂದಿಗೆ ಕವಿಯು ಬಾಹುಬಲಿ ಮತ್ತು ದೂತರ ಸಂಭಾಷಣೆ ಶೈಲಿಯನ್ನು ಬಹಳ ನೈಜವಾಗಿ ಚಿತ್ರಿಸಿದ್ದಾನೆ. ಹಾಗೆ ನೋಡಿದರೆ ಬಾಹುಬಲಿಯ ಭರತನನ್ನು ಆತನ ದೂತನ ಎದುರು ಮೂದಲಿಸುವ ಪರಿಯನ್ನು ಸರಳವಾಗಿ ಹದಗೊಳಿಸಿದ್ದಾನೆ.

ಪಂಪನು ಒಂದೆಡೆ ಮಹಾಕಾವ್ಯದ ವರ್ಣನೆಯನ್ನು ತನ್ನ ಕಾವ್ಯದಲ್ಲಿ ಅಳವಡಿಸಿದರೆ ಮತ್ತೊಂದೆಡೆ ಸಾಂಪ್ರದಾಯಿಕವಾದ ಪುರಾಣ ಕಾವ್ಯಕ್ಕೆ ಯೋಗ್ಯವಾದ ಎಂಟು ಅಂಗಗಳನ್ನು ಇದರಲ್ಲಿ ಸಮಾವೇಶಗೊಳಿಸಿದ್ದಾನೆ. ಪಂಪನ ಆಡುಮಾತಿನ ದಾಟಿಯ ಮೋಹಕವಾಗಿದ್ದು ಇಡೀ ಸನ್ನಿವೇಷದ ಸೃಷ್ಟಿ ಉತ್ಕಟ ಪ್ರಭಾವವನ್ನು ಪಂಪ ಆಡುಮಾತಿನ ದಾಟಿಯಲ್ಲಿ ನಿರ್ವಹಿಸುವಲ್ಲಿ ವ್ಯಕ್ತಿಗಳ ಮನೋಭಾವವನ್ನು ಅಲ್ಲದೆ ಸನ್ನಿವೇಶದ ವಿಶಿಷ್ಟ ಸೂತ್ರವನ್ನೇ ಎತ್ತಿಹಿಡಿಯುವ

ಮಾತುಗಳಾಗಿ ಅವು ಕಂಡುಬರುತ್ತದೆ. ಉದಾ. : ಬಾಹುಬಲಿ ಭರತನಿಗೆ ರಾಜ್ಯ ಒಪ್ಪಿಸದ ಸಂದರ್ಭದಲ್ಲಿ ಹೇಳುವ ಮಾತುಗಳಲ್ಲಿ ವ್ಯಕ್ತವಾಗುತ್ತದೆ. [2]

ಬಾಹುಬಲಿಯ ಧೃಡ ನಿರ್ಧಾರ ತಾನು ಮಾಡಿದ ತಪ್ಪಿನ ಅರಿವಿನಿಂದ ಮೂಡಿ ಬರುವಂತೆ ಮಾಡಿ ಅಣ್ಣನ ಆಸೆ ಆಕಾಂಕ್ಷೆಗಳನ್ನು ಈಡೇರಿಸುವ ಕರ್ತವ್ಯ ಕವಿತ್ವದ ಅರಿವು ಒಂದೇ ಅಲ್ಲದೆ ಎಲ್ಲವನ್ನು ಸಮ ದೃಷ್ಟಿಯಲ್ಲಿ ಮಾಡುವಂತೆ ಮಾಡಿದ್ದಾನೆ.

ಭರತನು ಆಶಿಸಿದ ರಾಜ್ಯವನ್ನು ಎಂತಹ ಉದಾತ್ತ ರೀತಿಯಲ್ಲಿ ನೀಡುತ್ತಿದ್ದಾನೆ. ಇದು ಮಣ್ಣಿಗೆ ಸಮಾನ ತನಗೆ ಇದು ಬೇಡವೆಂಬ ತಾತ್ಸರ ಮನೋಭಾವ ಹಾಗೂ ರಾಜ್ಯಲಕ್ಷ್ಮಿ ಆತನಿಗೆ ಬೇಡವೆಂದಿದ್ದರೂ ಅದರ ಗೌರವ ಭಾವವನ್ನೇ ಸೂಸುವಂತಹ ಮಾತುಗಳನ್ನಾಡುತ್ತಾನೆ. ಮನೋಹರ ರಾಜಲಕ್ಷ್ಮೀ ಎಂದು ಕರೆಯುತ್ತಾನೆ "ನೆಲಸುಗೆ ನಿನ್ನ ವಕ್ಷದೂಳೆ" ಎಂಬಲ್ಲಿ ಕ್ರಿಯಾಪದ ಮೊದಲು ಬಂದು ಮೊದಲು ಅಣ್ಣ ಬಯಸಿದ ರಾಜ್ಯಲಕ್ಷ್ಮಿ ಆತನದಾಗಬೇಕೆಂಬ ಉತ್ಕಟಭಿಲಾಷೆಯ ಮೊರೆತ ಆತುರ ಕೇಳಿ ಬರುತ್ತದೆ. ಆಡು ಮಾತಿನ ಭಾವುಕ ಶೈಲಿಯಲ್ಲಿಯಾಗಿದ್ದ ಮುಂದುವರಿದಂತೆ ಬಾಹುಬಲಿಯು ಭರತನಿಗೆ ಹೇಳುವ ಮಾತು. ಇದೇವುದರ ನೀನೊಲಿದ ಲತಾಂಗಿಗಂ ಧರೆಗಮಾಟಿಸದಂದು ನೆಗಳ್ತೆ ಮಾಸದೇ? ಎಂಬುದು ಮತ್ತೂ ಆಡುಮಾತಿನ ಬಳುಕನ್ನು ಹಿಡಿಯುತ್ತದೆ. ಇಲ್ಲಿ ಲೋಕ ರೂಢಿ ಸಂಸ್ಕೃತಿ ಮೌಲ್ಯಗಳು ಧ್ವನಿತವಾಗುತ್ತದೆ. ಪಂಪನ ಆಡು ಮಾತಿನ ವಿನ್ಯಾಸ ಏನೆಲ್ಲಾ ಕಾವ್ಯ ಕ್ರಿಯೆಯನ್ನು ನಡೆಸುತ್ತಿದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಪಂಪನ ಕಾವ್ಯ ಶೈಲಿಯಲ್ಲಿ ಸರಳಮಾತುಗಳು ಮೇಲ ಪಂಕ್ತಿಯ ಮಾತುಗಳಿಂದ ಕಾವ್ಯದುದ್ದಕ್ಕೂ ಅನೇಕ ಉಪಮೇಗಳನ್ನು ನೀಡುತ್ತಾ ಬಂದಿದ್ದಾನೆ. ಅನೇಕ ಸಂದರ್ಭದಲ್ಲಿ ಅವರು ಪುರಾಣ ಕಾವ್ಯದ ರಚನೆಯಲ್ಲಿ ರಸದ್ರಾಹವನ್ನು ತರುವಲ್ಲಿ ಶಾಂತ ರಸವನ್ನು ಅತ್ಯಧಿಕವಾಗಿ ತಂದಿದ್ದಾರೆ. ಪಂಪನು ತನ್ನ ಕಾವ್ಯದ ಉನ್ನತಿಯನ್ನು ಮೇರೆಯುವಲ್ಲಿ ಕನ್ನಡ ಛಂದೋ ರೂಪಗಳನ್ನು ಅನುಗುಣವಾಗಿ ಪಾತ್ರಕ್ಕೆ ತಕ್ಕಂತಹ ವರ್ಣನೆಯನ್ನು ಅದ್ಭುತವಾಗಿ ತಂದಿದ್ದಾನೆ. ಈ ಗುಣ ಅವನ ಕವಿತ್ವಕ್ಕೆ ಹಾಗೂ ಕಾವ್ಯ ಶೈಲಿಗೆ ನಿದರ್ಶನದಂತಿದೆ.

ಪಂಪನ ಆದಿಪುರಾಣ ಕವಿತ್ವ ಗುಣ ಜೈನಧಾರ್ಮಿಕ ಸಂಗತಿ ಆಚರಣೆಗಳು ಹೃದಯಸ್ಪರ್ಶಿಯಾದ ನಿರೂಪಣಾ ಶೈಲಿ ಪಂಪನ ಜೈನ ಶ್ರದ್ಧೆ ರಸಾನುಭವ, ರಸಿಕತೆಯಗುಣ, ಯಶಸ್ಸು, ಪಂಪನ ನಾಟಕೀಯಗುಣ ಪಾತ್ರ ಮತ್ತು ಸನ್ನಿವೇಶ ರಚನೆಯ ಕೌಶಲ್ಯ ವಸ್ತು ಸಂವಿಧಾನದ ನೈಪುಣ್ಯ. ಮಾತುಗಾರಿಕೆ ಇವುಗಳೆಲ್ಲವೂ ಪಂಪನ ಕಾವ್ಯದಲ್ಲಿ ಅಡಕವಾಗಿರುವುದನ್ನು ನೋಡಿದರೆ ಪಂಪನ ಕಾವ್ಯ ಶೈಲಿಯ ಅಚ್ಚುಕಟ್ಟು ಅರ್ಥವಾಗುತ್ತದೆ.

ತಾತ್ವಿಕ ದೃಷ್ಠಿ :

ಕನ್ನಡ ಸಾಹಿತ್ಯದ ಆದಿಕವಿ ಅಗ್ರಮಾನ್ಯ ಕವಿ ಎಂದು ಕೀರ್ತಿತನಾಗಿರುವ ಪಂಪ ಕವಿಯು ಎರಡು ಪ್ರಸಿದ್ಧ ಕಾವ್ಯವನ್ನು ರಚಿಸಿದ್ದು. ಮೊದಲನೆಯ ಕಾವ್ಯ ಆದಿಪುರಾಣಂ, ಕಾವ್ಯವೂ ಪಂಪನು ವಿಕ್ರಮಾರ್ಜುನ ವಿಜಯ ಕಾವ್ಯ ರಚಿಸುವಾಗ ಹೇಳಿಕೊಂಡಿರುವಂತೆ "ಬೆಳಗುವೆನಿಲ್ಲಿ ಲೌಕಿಕವ ಅಲ್ಲಿ ಜೀನಾಗಮಂ'' ಎಂಬ ಮಾತು. ಆದಿಪುರಾಣ ಕಾವ್ಯವು ಜೈನ ಧರ್ಮದ ತತ್ವದ ಹಿನ್ನೆಲೆಯಲ್ಲಿ ರಚಿತವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಪಂಪನು ಆದಿಪುರಾಣ ಕಾವ್ಯದಲ್ಲಿ ಜಿನ ಧರ್ಮದ ಪ್ರಥಮ ತೀರ್ಥಂಕರನ ಜನ್ಮ ಜನ್ಮಾಂತರದ ಭವಾವಳಿಗಳ ಕಥೆಯನ್ನು ಹೇಳುವುದರ ಜೊತೆಗೆ ಆತನ ಮಕ್ಕಳಾದ ಭರತ ಮತ್ತು ಬಾಹುಬಲಿಯರ ಕಥೆಯನ್ನು ತನ್ನ ಕಾವ್ಯದಲ್ಲಿ ಹೇಳುತ್ತಾನೆ. ಕಾರಣವೆಂದರೆ ಜೈನಧರ್ಮದಲ್ಲಿ ತೀರ್ಥಂಕರನ ಕಥೆಯೊಂದಿಗೆ ಚಕ್ರವರ್ತಿಯೊಬ್ಬನ ಕಥೆ ಹೇಳುವುದು ಸಾಮಾನ್ಯ. ಆದ್ದರಿಂದ ಜಿನಸೇನಾಚಾರ್ಯರ ಪೂರ್ವ ಪುರಾಣದಲ್ಲಿ ಇರುವ ಕಥೆಯನ್ನು ಆಧರಿಸಿ ಪಂಪನು ಕಾವ್ಯವನ್ನು ರಚನೆ ಮಾಡಿದ್ದರೂ ತನ್ನ ಹಿರಿಮೆಯನ್ನು ತಾತ್ವಿಕತೆಯನ್ನು ಕವಿ ಮೆರೆದಿದ್ದಾನೆ. ಅಂದರೆ ಪಂಪನ ಮೂಲ ಆಶಯ 'ಕಾವ್ಯ ಧರ್ಮ, ಧರ್ಮ'' ಎರಡನ್ನು ಉಳಿಸುವ ಪ್ರಯತ್ನ ಪಂಪನದಾಗಿದೆ.

ಪಂಪನ ಆದಿಪುರಾಣ ಕಥೆಯ ನಾಯಕ ವೃಷಭನಾತ. ಆದರೂ ಪಂಪನು ಕಾವ್ಯದಲ್ಲಿ ಬಾಹುಬಲಿಯನ್ನು ಉನ್ನತ ಸ್ಥಾನಕ್ಕೆ ಏರಿಸುವ ಪ್ರಯತ್ನವನ್ನು ಕವಿ ಮಾಡಿದ್ದಾನೆ. ಇವನ ದೃಷ್ಠಿಯಲ್ಲಿ ಬಾಹುಬಲಿಯ ಪಾತ್ರವನ್ನು ಮೇಲ್ಪಂಕ್ತಿಯಲ್ಲಿ ನೋಡುವ ಕೆಲಸವನ್ನು ಪಂಪ ಕವಿ ಮಾಡಿದ್ದಾನೆ. ಪಂಪ ಕವಿಯು ಮೂಲತಃ ಕಲಿಯಾಗಿದ್ದೂ, ಉತ್ತಮ ರಾಜ ಪಾಂಡಿತ್ಯವುಳ್ಳ ವ್ಯಕ್ತಿಯಾಗಿದ್ದು ಜೈನ ಧರ್ಮದ ಕಾವ್ಯದ ಉದ್ದಕ್ಕೂ ತನ್ನ ಧರ್ಮದ ಮಹೋನ್ನತಿಯನ್ನು ಸಾಧಿಸುವದರೊಂದಿಗೆ ಕಾವ್ಯದ ಶ್ರೇಷ್ಠತೆಯನ್ನು ಮೆರಿದಿದ್ದಾನೆ. ಅದಕ್ಕೆ ಕಾರಣವಾಗಿ ನೀಲಾಂಜನಿಯ ನೃತ್ಯದ ಸಂದರ್ಭದಲ್ಲಿ "ಆ ಸುರಗಣಿಕಾ ನಾಟ್ಯರಸಂ ಪರಮನೆ ಚಿತ್ತಮುಮನೆದ್ದು ರಂಜಿಸಿದುದು'' ಕವಿಯೂ ತನ್ನ ಕಾವ್ಯದಲ್ಲಿ ಕಾವ್ಯ ವಾಚಕರು ತನ್ಮಯವಾಗುಂತಹ ರಸ ಸ್ಥಾನವನ್ನು ಕವಿ ನಿರ್ಮಿಸಿದ್ದಾನೆ.

ಆದಿಪುರಾಣ ಕಾವ್ಯದಲ್ಲಿ ಕವಿಯು ಕಾವ್ಯದುದ್ದಕ್ಕೂ ತನ್ನದೇ ಶೈಲಿ, ವರ್ಣನೆ, ವಿವಿಧ ರಸಗಳನ್ನು ತಂದಿದ್ದು, ದ್ರಾಹವನು ತಂದಿದ್ದೂ ಭರತ - ಬಾಹುಬಲಿಯರ ಯುದ್ಧದ

ಸಂದರ್ಭವನ್ನು ಅದ್ಭುತವಾಗಿ ಚಿತ್ರಿಸಿದ್ದಾನೆ. ತನ್ನ ಕಾವ್ಯದ ಉದ್ದಕ್ಕೂ ಭೋಗ - ಯೋಗಗಳ ಸಮನ್ವಯವನ್ನು ತಂದಿದ್ದಾನೆ.

ಕವಿಯ ಆದಿಪುರಾಣ ಕಾವ್ಯದ ಜಿನಾಗಮದೊಂದಿಗೆ ಬೆಳಗಿದ್ದಾನೆ. ಅಂತೆಯೇ ಜಿನನು ಅನುಸಿರಿಸದ ಧರ್ಮದ ಸ್ವರೂಪದ ಪರಿಚಯವನ್ನು ಕವಿ ಇದರಲ್ಲಿ ವ್ಯಕ್ತಪಡಿಸಿದ್ದಾನೆ. ಡಾ. ರಂ. ಶ್ರೀ ಮುಗಳಿಯವರು ಇದರ ಬಗ್ಗೆ ಹೀಗೆ ಅಭಿಪ್ರಾಯವನ್ನು ವ್ಯಕ್ತಿಪಡಿಸಿದ್ದಾರೆ. "ಮತನಿಷ್ಠೆಯಿಂದ ತನ್ನ ಕೈಗಳನ್ನು ತಾನೇ ಕಟ್ಟಿಕೊಂಡ ಪಂಪನು ಆಕರವನ್ನು ಯಥಾವತ್ತಾಗಿ ಅನುಕರಿಸಿದ್ದಾನೆ. ಕಥಾವಸ್ತು ಕಥನಕ್ರಮ ಭಾವಸಂಪತಿಯ ತತ್ವಬೋಧ ಈ ಎಲ್ಲದರಲ್ಲಯೂ ಆದಿಪುರಾಣವು ಪೂರ್ವ ಪುರಾಣಕ್ಕೆ ಋಣಿಯಾಗಿದೆ. ಇಷ್ಟು ಪರತಂತ್ರವಾದರೂ ಗ್ರಂಥದ ಕೌಶಲ್ಯದಿಂದ ಒಟ್ಟಿನಲ್ಲಿ ಅದು ಸ್ವತಂತ್ರ ಕಳೆಯನ್ನು ಪಡೆದಿರುತ್ತದೆ.[5]

ಪಂಪನು ಆರಿಕೇಸರಿಯ ಆಸ್ಥಾನದಲ್ಲಿ ಕವಿ ಮಾತ್ರವಲ್ಲದೇ ಕಲಿಯು ಉತ್ತಮ ಯುದ್ಧ ಪಾಂಡಿತ್ಯಉಳ್ಳವನಾದ್ದರಿಂದ ತನ್ನ ಆದಿಪುರಾಣ ಕಾವ್ಯದಲ್ಲಿ ಆದಿನಾಥನ ಮಕ್ಕಳಾದ ಭರತ - ಬಾಹುಬಲಿಯ ನಡುವೆ ಧರ್ಮದ ಹಿನ್ನೆಲೆಯಲ್ಲಿ ಧರ್ಮ ಯುದ್ಧವನ್ನು ನಿಶ್ಚಯಿಸುತ್ತಾನೆ. ಅದಕ್ಕೂ ಮೊದಲು ಪುರೋಹಿತರು ಭರತನಿಗೆ ಬಾಹುಬಲಿಯ ಬಗ್ಗೆ ತಿಳಿಸುವಾಗ ಮುಂದಿನ ಯುದ್ಧಕ್ಕೆ ನಾಂದಿಯಾಗುವಂತಹ ಮಾತುಗಳನ್ನು ಆಡಿಸುತ್ತಾನೆ. ಮುಂದೆ ಧೂತರು ಆಡುವ ಮಾತುಗಳು ಸಹ ಬಾಹುಬಲಿಯಲ್ಲಿ ಯುದ್ದಾಸಕ್ತನಾಗುವಂತೆ ಮಾಡುತ್ತದೆ.

ಕಾವ್ಯದಲ್ಲಿ ಬಾಹುಬಲಿಯ ಸಂದರ್ಭ ಪ್ರಾರಂಭವಾದ ಭಾಗವೆಲ್ಲ ಬಾಹುಬಲಿಯ ಬಲ ಸಾಮರ್ಥ್ಯವನ್ನು ಎಲ್ಲರಿಗೂ ತಿಳಿಸುವ ಪ್ರಯತ್ನ ಪಂಪನದಾಗಿದೆ. ಕಾವ್ಯದಲ್ಲಿ ಪಂಪನ ವರ್ಣನ ಕೌಶಲ್ಯದಿಂದ ಸುಂದರವಾಗಿ ಯುದ್ಧ ಸಂದರ್ಭವನ್ನು ಸೃಷ್ಟಿಸಿ ದೃಷ್ಟಿ, ಜಲ, ಮಲ್ಲ ಯುದ್ದಗಳನ್ನು ಏರ್ಪಡಿಸಿದ್ದಾನೆ. ಇಲ್ಲಿ ವಿಶೇಷವಾಗಿ ವರ್ಣಿಸುವುದರೊಂದಿಗೆ ಬಾಹುಬಲಿಯನ್ನು ಶ್ರೇಷ್ಠನಾಗಿಸುವ ಕಾರ್ಯವನ್ನು ತನ್ನ ಕಾವ್ಯದಲ್ಲಿ ಮಾಡಿದ್ದಾನೆ.

ಜೈನ ಧರ್ಮದ ಅಹಿಂಸಾ ತತ್ವಕ್ಕೆ ಪೂರಕವಾಗಿ ಯುದ್ಧ ನಿವಾರಿಸಿದ್ದರೂ ಸಹ ಬಾಹುಬಲಿಯ ಭುಜಬಲವನ್ನು ತಿಳಿಸುವ ದೃಷ್ಟಿಯಿಂದ ಧರ್ಮ ಯುದ್ಧವನ್ನು ಮಾಡಿಸಿದ್ದಾನೆ. ಇದು ಪಂಪನ ಕಲಿತ್ವಕ್ಕೆ ಸಾಕ್ಷಿಯಾದರೂ ಸಹ ಬಾಹುಬಲಿಯು ತನ್ನ ಜಯವನ್ನು ಅಣ್ಣನಿಗೆ ಒಪ್ಪಿಸಿ ಜಿನ ದೀಕ್ಷೆಯನ್ನು ಪಡೆಯುವಂತೆ ಮಾಡಿ ಈತನನ್ನು ಅಮರನಾಗಿ ಉಳಿಯುವಂತೆ ಚಿತ್ರಿಸಿದ್ದಾನೆ.

ಅಡಿ ಟಿಪ್ಪಣಿ

1. ಎಸ್. ಜಿ. ನರಸಿಂಹಾಚಾರ್ ಪಂಪಕವಿ ವಿರಚಿತ ಆದಿಪುರಾಣಂ ಪ್ರವೇಶ
ಪೀಠಿಕಾಭಾಗ ಪುಟ 34 - 130
- ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ - 1995

2. ಟಿ. ವಿ. ವೆಂಕಟಾಚಲಶಾಸ್ತ್ರಿ, 'ಪಂಪ ಸಂಪುಟ ಆದಿಪುರಾಣಾಂ' ಪ್ರವೇಶಿಕೆ
- ಪ್ರಸಾರಂಗ, ನಿರ್ದೇಶಕರು, ಮಲ್ಲೇಪುರಂ ಜಿ. ವೆಂಕಟೇಶ್
- ಕನ್ನಡ ವಿಶ್ವವಿದ್ಯಾಲಯ, ಹಂಪಿ - 2006

3. ಜಿ. ಎಸ್. ಶಿವರುದ್ರಪ್ಪ 'ಪಂಪ ಒಂದು ಅಧ್ಯಯನ' ಪುಟ 194
- ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ - 1973

4. ಪಂಪ ಸಂಪುಟ ಆದಿಪುರಾಣಂ (2)
ಪದ್ಯ XiV - 17, 18, 48, 80, 112, 122
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ - 2006

5. ರಂ. ಶ್ರೀ ಮುಗುಳಿ, ಕನ್ನಡ ಸಾಹಿತ್ಯ ಚರಿತ್ರೆ ಪುಟ 91 - 93
ಗೀತಾ ಬುಕ್ ಹೌಸ್, ಮೈಸೂರು - 2007

6. ವಶಿಷ್ಠ - ಪಂಪನ ಆದಿಪುರಾಣ ಪುಟ - 184
ಚೇತನ್ ಬುಕ್ ಹೌಸ್, ಮೈಸೂರು - 1997

ಅಧ್ಯಾಯ - ಐದು

ರತ್ನಾಕರ ವರ್ಣಿಯ ಭರತೇಶ ವೈಭವದಲ್ಲಿ ಬಾಹುಬಲಿ

ಕನ್ನಡ ಸಾಹಿತ್ಯಕ್ಕೆ ಜೈನ ಕವಿಗಳು ನೀಡಿರುವ ಕೊಡುಗೆ ಅಪಾರವಾದದು. ಜೈನ ಯುಗಕ್ಕೆ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ವಿಶಿಷ್ಟವಾದ ಸ್ಥಾನ ಇದೆ. ಹತ್ತನೆಯ ಶತಮಾನದಲ್ಲಿ ರಚಿತವಾಗಿರುವ ಪಂಪನ 'ಆದಿಪುರಾಣ' ಕಾವ್ಯ ವಸ್ತುಭಾಗವನ್ನು ಆಧರಿಸಿ ಸಾಂಗತ್ಯದ ಹಾಡುಗಬ್ಬದಿಂದಲೆ ಮಹಾ ಕಾವ್ಯಗಳನ್ನು ಕಟ್ಟಲು ಪ್ರಯತ್ನಿಸಿದ ಉತ್ಸಾಹಶೀಲ ಕವಿಗಳಲ್ಲಿ ರತ್ನಾಕರನು ಒಬ್ಬ.

ಕನ್ನಡ ನುಡಿಯ ಚೆಲುವಿನ ಉನ್ನತಿ ಬಯಸಿ ದುಡಿದ ಸಾಹಿತ್ಯ ಸಿದ್ದಿ ಪುರುಷರಲ್ಲಿ ರತ್ನಾಕರನಿಗೊಂದು ಉನ್ನತ ಸ್ಥಾನವಿದೆ. ಸಾಂಗತ್ಯದ ರಸಭಾವಗಳಿಂದ ಸಂಗೀತವಾಗಿ ರತ್ನಾಕರನ ಕಾವ್ಯ ವೀಣೆಯಲ್ಲಿ ಮಿಡಿದಿದೆ.

ರತ್ನಾಕರನ ಕಾವ್ಯದ ಹೆಸರೇ ಸೂಚಿಸುವಂತೆ ಇದು ಭರತನ ವೈಭವದ ಉತ್ತಂಗದ ಅದ್ಭುತ ವರ್ಣನೆ. ಕವಿಯ "ಭರತೇಶ ವೈಭವ" ಕಾವ್ಯದಲ್ಲಿ ಭರತನ ಪಾತ್ರವನ್ನು ಉನ್ನತಿಯಲ್ಲಿಡುವ ಉದ್ದೇಶದಿಂದ ಬಾಹುಬಲಿಯ ಪಾತ್ರಕ್ಕೆ ಸ್ವಲ್ಪ ಜೀವ ತುಂಬಿ ಬಿಂಬಿಸಿದ್ದಾನೆ. ಪಂಪನ "ಆದಿಪುರಾಣ" ದಲ್ಲಿ ಅಡಕವಾಗಿರುವ ಬಾಹುಬಲಿಯ ಚಿತ್ರಕ್ಕೆ ಭಿನ್ನವಾಗಿ ಈ ಕಾವ್ಯ ರಚಿತವಾಗಿದೆ.

ಭರತನ ತಮ್ಮನಾದ ಭುಜಬಲಿ ಕಲಿಯುಗ ಮದನ; ಪುರಾಣಪುರುಷನಾದ ಮದನಿಗಿರುವ ಶೃಂಗಾರ ಸಾಧನೆಗಳು, ಭೋಗ ಪರಿಕರಗಳು ಭುಜಬಲಿಯಲ್ಲಿ ಕರಗತವಾಗಿದೆ. ಇದಲ್ಲದೆ ಮನ್ಮಥನ ಪರ್ಯಾಯ ನಾಮಗಳು ಬಾಹುಬಲಿಗೆ ಅರ್ಪಿತವಾಗಿವೆ. ಸಮಸ್ತ ವಿಚಾರಗಳಲ್ಲಿಯೂ ಈತನು ಪುರಾಣೋತರ ಮಾರನೆ. ಆದರೆ ಒಂದು ವ್ಯತ್ಯಾಸವಿದೆ. ಪುರಾಣೋತರ ಮಾನವರು ಮೋಹ ಪಾಷದಲ್ಲಿ ಸಿಲುಕಿಸಿ ಗೋರಿಗೊಳಿಸುವುದು ಮಾತ್ರ ಪ್ರವೃತನಾಗಿದ್ದಾನೆ. ಅಭಿನವ ಮದನನಾದ ಭುಜಬಲಿ ತನ್ನ ಹೆಸರಿಗೆ ತಕ್ಕಂತೆ ಬಾಹುಬಲ ಸಮನ್ವಿತನಾಗಿದ್ದಾನೆ.

ರತ್ನಾಕರವರ್ಣಿಯು ಭರತನ ವೈಭವದ ಉತ್ತುಂಗದ ವಿವರವನ್ನು ವರ್ಣಿಸುವಾಗ ಬಾಹುಬಲಿಯ ಪಾತ್ರವನ್ನು ಪಂಪ ಜಿನಸೇನರಂತೆ ಮಹಾವ್ಯಕ್ತಿಯನ್ನಾಗಿ ಮಾಡಿಲ್ಲವೆಂಬುದು

ಅನೇಕರ ಅಭಿಮತ. ಈ ಅಭಿಪ್ರಾಯಕ್ಕೆ ಪೋಷಕವಾಗುವಂತೆ ಕವಿ ಬಾಹುಬಲಿಯ ಸುತ್ತ ಕಾಮ, ಶೃಂಗಾರ ವಿಲಾಸಿಗಳ ವಾತಾವರಣವನ್ನೇ ನೇಯುತ್ತಾನೆ. ಭರತನ ಆದರ್ಶದ ಪಕ್ಕದಲ್ಲಿ ಬಾಹುಬಲಿಯನ್ನು ಇಟ್ಟು ತುಲನಾತ್ಮಕವಾಗಿ ವಿಮರ್ಶೆಗೆ ತೊಡಗಿದಾಗ ಭರತನ ಕಲಾ ವೈಭವ, ಯೋಗ - ಭೋಗ ವೈಭವ, ವೀರ ವೈಭವಗಳೆದುರು ಬಾಹುಬಲಿಯು ತೀರಾ ಸಣ್ಣವನಾಗಿ ಕಾಣುತ್ತಾನೆ. ಏನೋ ಮಂಕು ಬಡಿದವನಂತೆ ಮನದನೆಯರ ಮಡಿಲಲ್ಲಿ ಮಲಗಿ ರಸದ ಮಡುವನ್ನು ಸವಿಯುತ್ತಿರುವಂತೆ ಕಾಣುತ್ತಾನೆ.

[1] ಬಾಹುಬಲಿಯನ್ನು ಕುರಿತಾದ ವಾಸ್ತವ ಸತ್ಯ ರತ್ನಾಕರನ ಹೇಳಿಕೆಯಂತಿಲ್ಲ. ಹೊರ ತೋರಿಕೆಯ ವಿಲಾಸವೇ ಈತನ ವ್ಯಕ್ತಿತ್ವವಾಗದಿದ್ದರೆ ಲೋಕ ಬಾಹುಬಲಿಯನ್ನು ಸ್ಮರಿಸುತ್ತಿರಲಿಲ್ಲ. ಬಿಡುತ್ತಿತ್ತು. ಆ ಧರ್ಮ ವೀರನ ಚಿರಂತರ ಆಶೀರ್ವಾದ ಮಾನವ ಕೋಟಿಗೆ ದೊರಕುತ್ತಿರಲಿಲ್ಲ. ಪ್ರಾಯಶಃ ರತ್ನಾಕರನ ಅಶಯವೂ ಅದಲ್ಲ. 'ರತ್ನಾಕರನ ಬಾಹುಬಲಿ ಬೂದಿ ಮುಚ್ಚಿದ ಕೆಂಡ; ಮುಗಿಲ ಮರೆಯ ಹುಣ್ಣಿಮೆಯ ಚಂದ್ರ, ವಿಲಾಸ ಬೋಗಗಳ ಮುಸುಕು ಹೊದ್ದ ಸಾತ್ವಿಕ ಶಕ್ತಿ', ಭರತನದು ನೇರವಾದ ಪಾತ್ರ, ಬಾಹುಬಲಿಯದು ಸಮಸ್ಯಾ ಪೂರ್ಣ ಚಿತ್ರ. ಆ ಜೀವರತ್ನದ ಮೇಲೆ ತೆಳುಪರದೆಯೊಂದು ಇಳಿ ಬಿದ್ದಿದೆ. ಅದನ್ನು ಎತ್ತಿದರೆ ಅದೆಂತಹ ಶುಭ್ರ ದವಳ ಕಾಂತಿಯಿಂದ ಪಾತ್ರ ಉಜ್ವಲವಾಗಿ ಮಿನುಗುತ್ತದೆ ಎಂಬುದು ಗೊತ್ತಾಗುತ್ತದೆ. ಅರಲ ಸಿಂಹಾಸನ, ವಾರನಾರಿಯರ ತಂಡ ವಲಯ ಮಾರುತ ಮಂದಾನಿಲ ಮಾಕಂದ ಇರುವ ಸೆರೆಯಿಂದ ಉಜ್ವಲ ತಪೋ ನಿಷ್ಠನಾದ ಬಾಹುಬಲಿಯನ್ನು ಬಿಡಿಸಿಕೊಳ್ಳಬೇಕು. ಹೆಣೆದ ಬಳ್ಳಿಗಳಿಂದಲೂ, ಸುತ್ತಿದ ಹಾವುಗಳಿಂದಲೂ, ಹುಬ್ಬಿದ ಹುತ್ತಗಳಿಂದಲೂ, ಆತನನ್ನು ಬೇರ್ಪಡಿಸಿ ಗಂಧಕುಟಿಗೆ ಸೇರಿಸಬೇಕಾಗಿದೆ.

ಮಹತ್ವ:

ಭರತೇಶ ವೈಭವ ಕಾವ್ಯವು ಹದಿನಾರನೇ ಶತಮಾನದಲ್ಲಿ ರಚಿತವಾದ ಜೈನ ಸಂಪ್ರದಾಯಕ್ಕೆ ಹನಿಗೊಳ್ಳುವ ಒಂದು ರತ್ನಾಕರನ ಕಥೆಯಾಗಿದೆ. ಇದು ಕವಿಯ ಸಾಂಗತ್ಯ ರೂಪವಾಗಿದ್ದು ಒಬ್ಬ ರಾಜನ ಕಥೆಯನ್ನು ಹೇಳುವಂತಹ ಮಹಾ ಕೃತಿಯಾಗಿದೆ.

ಕನ್ನಡ ಕಾವ್ಯ ಪರಂಪರೆಯಲ್ಲಿ ಒಬ್ಬ ಚಕ್ರವರ್ತಿಯ ಕಥೆಯನ್ನು ಕುರಿತು ಕಾವ್ಯ ರಚಿಸುವುದು ಹೊಸತೇನಲ್ಲ. ಈ ಹಿಂದೆ ರಚಿಸಿದ ಪಂಪನ ಆದಿಪುರಾಣದಲ್ಲಿ ವ್ಯಕ್ತವಾಗಿರುವಂತೆ

ಜಿನಸೇನರ ಪೂರ್ವಪುರಾಣದ ಭರತನ ಚಿತ್ರಣವನ್ನೇ ಈ ಕಾವ್ಯದಲ್ಲಿ ಚಿತ್ರಿಸಿರುವುದು ಸಾಮಾನ್ಯವಾಗಿದ್ದರೂ ಭರತನ ಚಕ್ರಾಧಿಪತ್ಯದ ವೈಭೋಗದ ಜೀವನವನ್ನು ವಿಶಿಷ್ಟವಾದ ತನ್ನ ಕಾವ್ಯದಲ್ಲಿ ಚಿತ್ರಿಸಿದ್ದಾನೆ.

ಸುಮಾರು 10ನೇ ಶತಮಾನದಲ್ಲಿ ಪಂಪ ಮತ್ತು ಜಿನಸೇನಾಚಾರ್ಯರು ತಮ್ಮ ಕಾವ್ಯದಲ್ಲಿ ತೀರ್ಥಂಕರರು ಕಥೆಯನ್ನು ಹೇಳುವಾಗ ಭರತ ಚಕ್ರವರ್ತಿಯ ಕಥೆಯನ್ನು ಹೇಳಿದ್ದಾರೆ. ಇದು ಜೈನ ಧರ್ಮದ ಸಂಪ್ರದಾಯ. ಜೈನ ಸಂಪ್ರದಾಯಕ್ಕೆ ಅನುಗುಣವಾಗಿ ಭರತನ ಪಾತ್ರವನ್ನು ತಮ್ಮ ಕಾವ್ಯದಲ್ಲಿ ಚಿತ್ರಿಸಿದ್ದಾನೆ. ಆದರೆ 16ನೇ ಶತಮಾನದಲ್ಲಿ ಒಂದು ಹೊಸ ಕಾವ್ಯ ಪರಂಪರೆಯಾದ ಸಾಂಗತ್ಯ ರೂಪದಲ್ಲಿ ಕಾವ್ಯವನ್ನು ಸೃಷ್ಟಿಸಲು ಕವಿ ತನ್ನ ಮೂಲ ಧ್ಯೇಯವನ್ನು ಈಡೇರಿಸಿಕೊಳ್ಳಲು ತನ್ನದೇ ಆದ ಹೊಸ ಹೊಸ ಮಾರ್ಪಾಡುಗಳನ್ನು ಮಾಡಿಕೊಂಡು ಭರತನನ್ನು ಎತ್ತರಕ್ಕೆ ಏರಿಸಿದ್ದಾನೆ.[2]

ಈ ಪದ್ಧತಿಯು ಕವಿಯು ಒಬ್ಬ ಚಕ್ರವರ್ತಿಯನ್ನು ಮೇಲಾಗಿ ನೋಡುವುದಾಗಿದೆ. ರಾಜನನ್ನು ಶ್ರೇಷ್ಠಗೊಳಿಸುವುದು ರತ್ನಾಕರವರ್ಣಿಯ ಹೊಸ ಮಾರ್ಪಾಡಾಗಿ ಕಾಣುತ್ತದೆ.

ಭರತೇಶ ವೈಭವದ ಮಹತ್ವವನ್ನು ತಿಳಿಯುವುದಾದರೆ ಇದೊಂದು ಸಾಂಗತ್ಯ ಕೃತಿಯಾಗಿದ್ದು, ಕಾವ್ಯದಲ್ಲಿ ಭರತನು ಚಕ್ರವಾರ್ತಿಯು ಸಕಲ ಭೋಗಗಳನ್ನು ಅನುಭವಿಸುವ ರಸವತ್ತಾದ ಕಥಾಭಾಗದಲ್ಲಿ ತಿಳಿಸಿದ್ದಾನೆ. ಇದೇ ಅವನ ಕಾವ್ಯದ ಅತ್ಯುತ್ತಮವಾದ ಭಾಗ. ಈ ಕಾವ್ಯದಲ್ಲಿ ಐದು* ವಿಜಯಗಳಾಗಿ ಮಾಡಿಕೊಂಡು ಮೊದಲನೆಯಾದ ಭೋಗ ವಿಜಯವನ್ನು ಸ್ವತಂತ್ರವಾಗಿ ರಚಿಸಿ ಹೊರಟಿರುವ ಕವಿಯು ತನ್ನ ಕಾವ್ಯದಲ್ಲಿ ಯಶಸ್ವಿಯಾಗಿದ್ದಾನೆ.

ಭರತನ ಕಥೆಯನ್ನು ಹಿಂದಿನ ಯಾವ ಕವಿಯು ಸಹ ಐದು ಭಾಗಗಳನ್ನಾಗಿ ಮಾಡಿಕೊಂಡಿಲ್ಲ. ಸಂಪೂರ್ಣ ಜೈನ ಧರ್ಮದ ಹಿನ್ನೆಲೆಯಾಗಿ ಈ ಕಾವ್ಯ ಸೃಷ್ಟಿಯಾಗಿರುವುದು. ಈ ಕಾವ್ಯದಲ್ಲಿ ಜೈನ ಕವಿಗಳು ಜೈನ ಪುರಾಣ ಬರೆಯುವುದಕ್ಕೆ ಮೊದಲು ಪಂಚ ಕಲ್ಯಾಣಗಳನ್ನು ಬರೆಯುವುದು ಸಂಪ್ರದಾಯ. ಆದರೆ ಭರತ ತೀರ್ಥಂಕರನಲ್ಲಿ ಜಿನಸೇನ ಪಂಪಾದಿ ಪ್ರಾಚೀನ ಕವಿಗಳಿಂದ ರಚಿತವಾದ ಪುರುಪರಮೇಶನ ಚರಿತ್ರ ಜೈನ ಪುರಾಣ ಸಮ್ಮತವಾದುದು. ಪುರಾಣೋತ್ತರ ಮಾರ್ಗದ ವಿರುದ್ಧವಾಗಿ ಕೃತಿ ರಚಿಸುವ ಎದೆಗಾರಿಕೆ, ಸ್ವಾತಂತ್ರ್ಯಗಳು

---

* ಭೋಗ ವಿಜಯ, ದಿಗ್ವಿಜಯ, ಯೋಗ ವಿಜಯ, ಅಪಕೀರ್ತಿ ವಿಜಯ, ಮೋಕ್ಷ ವಿಜಯ

ಇವರಿಗಿಲ್ಲ. ತೀರ್ಥಂಕರರ ಪಂಚಕಲ್ಯಾಣ ಸಹಿತವಾದ ಜೀವನ ಚರಿತ್ರೆಯಲ್ಲಿ ಬದಲಾವಣೆ ಮಾಡುವ ಸಾಹಸ ವಂತೂ ಅಸಾಧ್ಯ. ಅದು ಧರ್ಮ ವಿರುದ್ಧವಾದ ಕೆಲಸ ಆದರೆ ಆ ಪುರಾಣಗಳೇ ಬರುವ ಗೌಣ ಪಾತ್ರಗಳಾದ ಭರತ ಬಾಹುಬಲಿಗಳ ವಿಷಯದಲ್ಲಿ ಕಥೆಯನ್ನು ಸಾಕಷ್ಟು ಹಿಗ್ಗಿ ತಗ್ಗಿಸುವ ಕೆಲಸಕ್ಕೆ ಇತರರು ಕೈ ಹಾಕಿಲ್ಲ. ಭರತನನ್ನು ಪ್ರಧಾನ ನಾಯಕನನ್ನಾಗಿ ಮಾಡಿ ಹೆಚ್ಚು ಪ್ರಶಸ್ತಿ ಗೌರವಗಳನ್ನು ಅವನಿಗಿತ್ತು ಪ್ರತ್ಯೇಕ ಕಾವ್ಯ ರಚಿಸುವ ಕೈಹಾಕಿ ಯಶಸ್ವಿಯಾದ ಕವಿ ರತ್ನಾಕರ.

ಪಂಚ ಕಲ್ಯಾಣಗಳ ಸಂಪ್ರದಾಯವಿರುವ ಈ ಕೃತಿಯಲ್ಲಿ ತೀರ್ಥಂಕರನಲ್ಲದ ಭರತನು ಕೇವಲ ಸಿದ್ಧಿಜೀವಿ, ಮೋಕ್ಷವನ್ನು ಸಂಪಂದಾಸಿಕೊಂಡವನು. ಆದ್ದರಿಂದ 'ಪಂಚಕಲ್ಯಾಣ'ಕ್ಕೆ ಅರ್ಹನಾದವನು. ಇದರಿಂದಾಗಿ ತನ್ನ ಕಥಾ ನಾಯಕನಿಗೆ ಪ್ರತ್ಯೇಕವಾದ ಸಾಧನೆಯನ್ನು ಕವಿ ತೋರಿಸಿದ್ದಾನೆ.

ರತ್ನಾಕರನ ಕಾವ್ಯದಲ್ಲಿ ಭರತನ ರಾಜ್ಯ ವೈಭವದ ಪಾತ್ರವು ಮುಗಿಲು ಮುಟ್ಟಿರುತ್ತದೆ. ಲೌಕಿಕದಲ್ಲಿ ಅಂಗೀಕರಿಸಿದ ಪಾತ್ರ ಆಲೌಕಿಕ ಕತೆಯಲ್ಲಿ ಅರಳಿದೆ. ತ್ರಿಕಷ್ಠಿಶಲಾಕ ಪುರುಷರಲ್ಲಿ ಒಬ್ಬನಾದ ಚರತಮನಾದ ಭರತನ ಚರಿತೆಯನ್ನು ಒಳಗೊಂಡಿದೆ. ಆ ಕಾವ್ಯವು 'ಆದಿಪುರಾಣದ' ಕಥಾ ಭಾಗವನ್ನು ಅನುಸರಿಸಿದರೂ ತನ್ನದೇ ಆದ ಬದಲಾವಣೆಗಳಿಂದಾಗಿ ಹೊಸದೊಂದು ಮಾರ್ಗವನ್ನು ಈ ಕಾವ್ಯದಲ್ಲಿ ಕವಿ ತಂದಿದ್ದಾನೆ. ಅದರಂತೆಯೇ ಕಾವ್ಯ ಎಂಬುದು ಕೇವಲ ಭರತ ಚಕ್ರವರ್ತಿಯು ವೈಭವವನ್ನು ಮಾತ್ರ ತಿಳಿಸಿದೆ. ಕವಿಯಲ್ಲಿ ಅಡಗಿರುವ ಧರ್ಮದ ಹಿರಿಮೆಯನ್ನು ಈ ಕಾವ್ಯದಲ್ಲಿ ಕಾಣಬಹುದು.

'ಭರತೇಶ ವೈಭವದಲ್ಲಿ' ಕವಿಯು ಕೇವಲ ಭರತನ ದಿಗ್ವಿಜಯ ಭೋಗವಿಲಾಸ ಜೀವನ ಹಾಗೂ 96,000 ಸ್ತ್ರೀಯರೊಂದಿಗಿನ ಸಂಸಾರದ ಚಿತ್ರಣದೊಂದಿಗೆ ತನ್ನ ಧರ್ಮಕ್ಕೂ ಅಭಿಮಾನಿಯಾಗಿದ್ದಾನೆ.

ರತ್ನಾಕರವರ್ಣಿಯಿಂದ ರಚಿತವಾಗಿರುವ ಈ ಕಾವ್ಯ ಸಾಂಗತ್ಯ ಶೈಲಿಯಿಂದ ಕೂಡಿದ್ದು ಸುಮಾರು ಹತ್ತುಸಾವಿರ ಪದ್ಯಗಳಷ್ಟು ದೀರ್ಘವಾಗಿದೆ. ಈ ಕೃತಿಯನ್ನು ಕವಿಯು ಕೇವಲ 9 ತಿಂಗಳನಲ್ಲಿಯೇ ಪೂರ್ಣಗೊಳಿಸಿದ್ದಾನೆ. ಈ ಮಾತನ್ನು ನೋಡಿದರೆ ಪಂಪನ ಕೇವಲ ಆರು

ತಿಂಗಳಲ್ಲಿ ಆದಿಪುರಾಣ ಕೃತಿಯನ್ನು ರಚಿಸಿರುವುದು ಹಿರಿಮೆಯಾಗುತ್ತದೆ. ರತ್ನಾಕರನು ತನ್ನ ಕಾವ್ಯದಲ್ಲಿ ತನ್ನ ಅನುಕೂಲಕ್ಕೆ ತಕ್ಕಂತೆ ಹಲವು ಪಾತ್ರಗಳನ್ನು ಸೃಷ್ಟಿಸಿಕೊಂಡು ಕೆಲವೊಂದು ಕಾರ್ಯಗಳನ್ನು ಹಿಂದಿನ ಕಾವ್ಯಗಳಲ್ಲಿ ಇಲ್ಲದ ರೀತಿಯಲ್ಲಿ ವಿಶೇಷವಾಗಿ ಭರತೇಶ್ವರನ ಕೈಯಿಂದಲೆ ನೆರವೇರಿಸುತ್ತಾನೆ. ಒಂದು ವಿಧದಲ್ಲಿ ನೋಡುವುದಾದರೆ ದಿಗ್ವಿಜಯ ಭಾಗದಲ್ಲಿ ಬರುವ ವಿಜಯಾದ್ರಿ ಪರ್ವತದ ವಜ್ರಕವಾಟದ ಸ್ಫೋಟನೆ ಭರತನಿಂದಲೆ ನೇರವೇರಿಸಲ್ಪಟ್ಟಿದೆ. ಇದು ರತ್ನಾಕರನ ಕಾವ್ಯದ ವ್ಯತ್ಯಾಸ ಇದಕ್ಕೆ ತಕ್ಕಂತೆ ಕವಿಯು ಕೆಲವು ಸ್ತ್ರೀ ಪಾತ್ರಗಳನ್ನು ತನ್ನ ಕಾವ್ಯದಲ್ಲಿ ಅವಶ್ಯಕತೆಗೆ ಅನುಕೂಲವಾಗಿ ಸೃಷ್ಟಿಸಿದ್ದಾನೆ. ಕವಿಯು ಭರತೇಶ ವೈಭವದಲ್ಲಿ ಸಿಂಧೂ, ಗಂಗೆಯ ಪಾತ್ರಗಳಿಗೆ ಭರತನ ತಂಗಿಯರಾದ ಬ್ರಾಹ್ಮಿ ಸುಂದರಿ ಪಾತ್ರಗಳೆಂಬಂತೆ ಜೀವ ತುಂಬಿದ್ದಾನೆ. [2]

ಕವಿ ಮಾಡಿಕೊಂಡಿರುವ ಮಾರ್ಪಾಡುಗಳಲ್ಲಿ ಕಾವ್ಯದ ಮೂಲ ಉದ್ದೇಶ ಚಕ್ರವರ್ತಿಯಾದ ಭರತನನ್ನು ಉನ್ನತ ಸ್ಥಾನಕ್ಕೇರಿಸಿದ್ದಾನೆ. ಕವಿಯು ಚಕ್ರರತ್ನದ ಹಾಗೂ ಸೈನ್ಯದ ಸಹಾಯದಿಂದ ಭರತನ ಭೂಮಂಡಲವನೆಲ್ಲಾ ಜಯಸುವಂತೆ ನಿರೂಪಿಸಿದ್ದಾನೆ. ಕವಿಯು ಭರತನ ಸಮರ್ಥ್ಯವನ್ನು ತಳಿಸುವ ದೃಷ್ಟಿಯಿಂದ ಸೈನಿಕರಬ್ಬರಿಂದ ಮೂದಲಿಕೆಯ ಮಾತುಗಳನ್ನು ಆಡಿಸಿ ಅವು ಭರತನಿಗೆ ತಿಳಿಯುವಂತೆ ಮಾಡಿ ಭರತನು ತನ್ನ ಸಾಮರ್ಥ್ಯವನ್ನು ತಿಳಿಸಲು ತನ್ನ ಕಿರುಬೆರಳನ್ನು ಸ್ವಲ್ಪ ಬಾಗಿಸಿಕೊಂಡು ಅಖಂಡ ಸೇನೆ ಎಲ್ಲಾ ಸೇರಿ ಚಿನ್ನದ ಸರಪಳಿಯನ್ನು ಎಳೆಯುವಂತೆ ಹೇಳುತ್ತಾನೆ. ಬೆರಳು ನೇರವಾಗದಿರುವಾಗ ಭರತನ ಸಾಮರ್ಥ್ಯದ ಅರಿವು ಸೈನಿಕರಿಗಾಗುತ್ತದೆ.

ಕಿರುವೆರಳಿಗೆ ಸರಪಣಿಯ ಸಂದಿಸಿ ರಾಯ
ಬಿರಿಸಾಗಿ ತೂಗಿರೈಯಂದ
ಇರುಹೆಗಳೆಣ್ಣೆ ಸೊಂಕಿದ ನೇಣ ಮುತ್ತಾವಂ
ತೆರಗಿ ಪಿಡಿದಾಗ ಕಟಕ.
ಕಾಲ ಪೈಸರಗೊಟ್ಟು ಸರಪಣಿವಿಡಿದು ಹಿ
ಮ್ಮೂಲಾಗಿ ಪಡೆ ತೆಗೆವಾಗ
ತೋಳಸಿಕ್ಕಿಗೆ ರಾಯ ನೀಡಿದ ನುರೆ ಹೊಟ್ಟೆ
ಮೇಲಾಗಿ ಕೆಡೆದರುರ್ವಿಯೊಳ್

ಈ ರೀತಿಯಾಗಿ ಕವಿ ತನ್ನದೇ ಶೈಲಿಯಲ್ಲಿ ಕಾವ್ಯವನ್ನು ಮಾರ್ಪಡಿಸಿಕೊಂಡು ಭರತೇಶ

ವೈಭವವನ್ನು ಸಮರ್ಪಕವಾಗಿ ನಿರೂಪಿಸಿದ್ದಾನೆ.

ಸಣ್ಣ ಬೆರಳ ಶಕ್ತಿಯಿಂತು ಪೆಬ್ಬೆಟ್ಟಿನ
ಬಿಣ್ಣೆ ತೆಂತುಬೊ ಮುಷ್ಠಿಯಂತೊ
ಬಣ್ಣದ ನುಡಿಯಲ್ಲ ಚಕ್ರಿಗುಂಟದ್ರಿಯ
ನಣ್ಣೆಕಲ್ಲಾಡುವ ಶಕ್ತಿ

ಭರತನ ಈ ಕಿರು ಬೆರಳಿನ ಸಾಮರ್ಥ್ಯವನ್ನು ಅರಿತ ಸೈನಿಕರು ಆತನ ಹೆಬ್ಬೆರಳು ಹಾಗೂ ಮುಷ್ಠಿಯ ಶಕ್ತಿ ಎಷ್ಟಿರಬಹುದೆಂದು ಊಹಿಸಲು ಅಸಾಧ್ಯವಾಗಿ ತಮ್ಮ ಸಾಮರ್ಥ್ಯವನ್ನು ಅಣ್ಣೆ ಕಲ್ಲಾನ್ನಾಡುವ ಶಕ್ತಿಯಾಗಿದೆ ಎಂದು ನಾಚಿದರು. ಇದು ಕವಿರತ್ನಾಕರನು ಭರತನ ಸಾಮರ್ಥ್ಯವನ್ನು ತಿಳಿಸಲು ಮಾಡಿಕೊಂಡಿರುವ ಮಾರ್ಪಾಡಾಗಿದೆ. ಮೂಲ ಭರತನ ಕಥೆಗಳಲ್ಲಿ ಈ ಸಂದರ್ಭವು ಬರುವುದಿಲ್ಲ. ಇದು ರತ್ನಾಕರ ವಿಶೇಷತೆ.

ಕವಿಯು ಪಂಚಕಲ್ಯಾಣ*ಗಳ ಮೂಲಕ ಒಂದೊಂದು ವಿಜಯವನ್ನು ಒಂದೊಂದು ಭಾಗದಲ್ಲಿ ವಿವರಿಸುವುದರ ಮೂಲಕ ಶ್ರೇಷ್ಠನಾಗಿದ್ದಾನೆ. ಯುದ್ಧ ನಿವಾರಣೆಯನ್ನು ಮಾಡಲು ತನ್ನದೇ ರೀತಿಯಲ್ಲಿ ಭರತ ಚಕ್ರಿಯನ್ನು ಸೃಷ್ಟಿಸುತ್ತಾ ಅನುಕೂಲವಾದ ಮಾತುಗಳನ್ನು ಭರತ - ಬಾಹುಬಲಿಯರ ಇಬ್ಬರ ಮನದಿಂದ ಆಡಿಸಿದ್ದಾನೆ. ಈ ಕವಿ ಸೃಷ್ಠಿಯ ನುಡಿಗಳು ಕಾವ್ಯದಲ್ಲಿ ಭರತನನ್ನು ಮೇಲಸ್ಥರಕ್ಕೂ ಬಾಹುಬಲಿಯನ್ನು ಕೆಳಸ್ಥರಕ್ಕೂ ಇಳಿಯುವಂತೆ ಮಾಡಿದ್ದಾನೆ.

ಮೂಲ ಕಥೆಯನ್ನು ಕವಿಯು ತನ್ನ ಅನುಕೂಲಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡಿದ್ದಾನೆ. ತನ್ನ ಧರ್ಮದ ಶ್ರೇಯಸ್ಸಿಗೆ ಹಾಗೂ ನಾಯಕನ ಉನ್ನತಿಗೆ ಪೂರಕವಾಗುವ ರೀತಿಯಲ್ಲಿ ಭರತೇಶ ವೈಭವ ಕಾವ್ಯವನ್ನು ರಚಿಸಿದ್ದಾನೆ.

---

* ಗರ್ಭಾವತರಣ ಕಲ್ಯಾಣ, ಜನ್ಮಾಭಿಷೇಕ ಕಲ್ಯಾಣ, ಪರಿನಿಶ್ಕ್ರಮಣ ಕಲ್ಯಾಣ, ಕೇವಲ ಜ್ಞಾನ ಕಲ್ಯಾಣ, ಪರಿನಿರ್ವಾಣ ಕಲ್ಯಾಣ

ವಸ್ತು ವಿನ್ಯಾಸ :

ರತ್ನಾಕರ ವರ್ಣಿಯ 'ಭರತೇಶ ವೈಭವ' ಕಾವ್ಯದಲ್ಲಿ ಜೈನರ ಮೊದಲ ತೀರ್ಥಂಕರನಾದ ಆದಿದೇವನ ಮಗ ಹಾಗೂ ಪ್ರಥಮ ಚಕ್ರವರ್ತಿಯಾದ ಭರತನನ್ನು ನಾಯಕನನ್ನಾಗಿ ಮಾಡಿಕೊಂಡು ಭರತನಿಗೆ ಸಕಲ ಜಯ ಕೀರ್ತಿ ಸಂಪತ್ತನ್ನು ಒದಗಿಸಿದ್ದಾನೆ ಹಾಗೂ ದ್ವಾಪುರ ಯುಗದಲ್ಲಿ ಶ್ರೀ ಕೃಷ್ಣನ ಕಥೆಯ ಪಾತ್ರದಂತೆ ಹದಿನಾರನೇಯ ಶತಮಾನದಲ್ಲಿ ಭರತನ ಪಾತ್ರವನ್ನು ಈ ಕಾವ್ಯದಲ್ಲಿ ಚಿತ್ರಿತವಾಗಿದ್ದಾನೆ. ಕೃಷ್ಣ ಮತ್ತು ಭರತರ ನಡುವೆ ಹೋಲಿಕೆಗಳನ್ನು ತಂದು ಶ್ರೀ ಕೃಷ್ಣನಿಗಿಂತ ಹೆಚ್ಚು ಸ್ತ್ರೀಯರನ್ನು ವಿವಾಹ ಮಾಡಿಸುವ ಕೆಲಸವನ್ನು ಕವಿ ವಿಶೇಷವಾಗಿ ಮಾಡಿದ್ದಾನೆ. ಕವಿಯು ತನ್ನ ಕಾವ್ಯದಲ್ಲಿ ಸಂದರ್ಭೋಚಿತವಾದ ರೀತಿಯಲ್ಲಿ ವರ್ಣನೆಯನ್ನು ಮಾಡಿದ್ದು ತನಗೆ ಅನುಕೂಲವಾದ ಪಾತ್ರಗಳನ್ನು ನಿರ್ಮಿಸಿದ್ದಾನೆ. ಮೂಲ ಕಥೆಯಾದ ಆದಿಪುರಾಣ ಕಾವ್ಯದಲ್ಲಿ ಇಲ್ಲದಂತಹ ಸನ್ನಿವೇಶಗಳನ್ನು ಸಂದರ್ಭಗಳನ್ನು ನಿರ್ಮಿಸುವುದರಲ್ಲಿ ತುಂಬಾ ಜಾಣನಾಗಿದ್ದಾನೆ. [4]

ರತ್ನಾಕರನ ಭರತೇಶ ವೈಭವ ಕಾವ್ಯದಲ್ಲಿ ಇರುವ ಸನ್ನಿವೇಶಗಳು ಮತ್ತು ಪಾತ್ರ ಸೃಷ್ಟಿಗಳು ಪ್ರಾಚೀನವಾಗಿದ್ದರೂ ಆ ಪ್ರಾಚೀನ ಪಾತ್ರಗಳಲ್ಲಿ ಕುಂಚಿನ್ನಾಡಿಸಿ ಸೂಕ್ತ ಕಂಡಂತೆ ರಸ ವರ್ಣ ದೀಪ್ತಿಗಳಿಂದ ಅದನ್ನು ಬದಲಾಯಿಸಿ ಆದರ್ಶಪಾತ್ರವೊಂದನ್ನು ರೂಪುಗೊಳಿಸಿದ ಯಶಸ್ಸಿಗೆ ನಿರ್ವಿವಾದವಾಗಿ ರತ್ನಾಕರ ಭಾಗಿಯಾಗಿದ್ದಾನೆ. ತನ್ನ ಕಾವ್ಯದ ಉದ್ದೇಶವನ್ನು ಸಾಧಿಸುವ ದೃಷ್ಟಿಯಿಂದ ಪುರಾಣ ಕಥೆಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಕೆಚ್ಚೆದೆಯಿಂದ ಮಾರ್ಪಡಿಸಿದ್ದಾನೆ.

ರತ್ನಾಕರವರ್ಣಿಯು ತನ್ನ ಕಾವ್ಯದಲ್ಲಿ ಭರತನನ್ನು ಶ್ರೇಷ್ಠನಾಗಿಸುವ ದೃಷ್ಟಿಯಿಂದ ಬಾಹುಬಲಿಯ ಪಾತ್ರವನ್ನು ವಿಭಿನ್ನ ರೀತಿಯಲ್ಲಿ ಚಿತ್ರಿಸಿದ್ದಾನೆ. ಕಾವ್ಯ ಭರತೇಶ ವೈಭವವಾದ್ದರಿಂದ ಭರತನಿಗೆ ಹೆಚ್ಚಿನ ಮನ್ನಣೆ. ಆ ಕಾವ್ಯದಲ್ಲಿ ಭರತ ಬಾಹುಬಲಿಯರ ಯುದ್ಧ ಸಂದರ್ಭದಲ್ಲಿ ಕವಿಯ ಪಾತ್ರ ಚಿತ್ರಣದ ವಸ್ತುವಿನ್ಯಾಸವನ್ನು ಶ್ವೇತಾಂಬರರ ಸಂಪ್ರದಾಯದಲ್ಲಿ ಬರುವ ಭರತ - ಬಾಹುಬಲಿಯರ ಪ್ರಸಂಗದ ರೀತಿಯಲ್ಲಿ ತನ್ನ ಕಾವ್ಯದಲ್ಲಿ ಕಂಡುಬರುತ್ತಿದೆ.

ಚಕ್ರರತ್ನವನ್ನು ಪಡೆದ ಭರತನು ದಿಗ್ವಿಜಯವನ್ನು ಸಾಧಿಸಿ ಮರಳಿ ಬರುತ್ತಿರುವಾಗ ಪೌದನಪುರದ ಬಳಿ ಚಕ್ರರತ್ನ ತಡೆದು ನಿಲ್ಲುತ್ತದೆ. ಸೋದರರು ಬಂದು ತನಗೆ ಎರಗಬೇಕು ಎಂಬುದು ಪಂಪನ ಕಾವ್ಯದಲ್ಲಿಯೂ ಇದೆ. ಅದೇ ರೀತಿಯಾಗಿ ರತ್ನಾಕರನಲ್ಲಿ ಚಿತ್ರಿತವಾದಂತೆ

ಇದೇಯಾದರೂ ಬಾಹುಬಲಿಯನ್ನು ಚಿತ್ರಿಸುವಲ್ಲಿ ಕವಿಯು ಆಗಿನ ಕಾಲದಲ್ಲಿ ಕಾಮ ದೇವವಾಗಿದ್ದನ್ನು ಎಂಬ ಅಂಶವನ್ನೇ ವಿಶೇಷವಾಗಿ ಪರಿಗಣಿಸಲಾಗಿದೆ.

ಭರತನು ತನ್ನ ತಮ್ಮಂದಿರಿಗೆ ತಂದೆಯು ಒಲ್ಯೆಸಿದ ರಾಜ್ಯವನ್ನು ನನಗೆ ವಂದಿಸಿ ಎಂದು ಹೇಳಿದ್ದಾನೆ, ಕಾರಣ ಚಕ್ರರತ್ನ ಪುರಪ್ರವೇಶಿದ ಹೋದರೆ ತನ್ನ ದಿಗ್ವಿಜಯ ಪರಿಪೂರ್ಣ ವಾಗುವುದಿಲ್ಲ. ಆದರೆ ಆ ಅಣ್ಣನ ಮಾತು ಕೇಳದ ತಮ್ಮಂದಿರು ಬಾಹುಬಲಿಯನ್ನು ಹೋರತು ಪಡಿಸಿ ಉಳಿದವರೆಲ್ಲಾ ಕೈಲಾಸಗಿರಿಯಲ್ಲಿ ಇದ್ದ ತಂದೆಯ ಬಳಿ ದೀಕ್ಷೆಯನ್ನು ಪಡೆದರು. ಇದನ್ನು ಕೇಳಿದ ಭರತ ಸಂತೋಷಗೊಂಡು ಆದರೆ ಒಲಿಯದ ಬಾಹುಬಲಿಯ ಬಳಿಗೆ ತನ್ನ ಮಂತ್ರಿಯಾದ ದಕ್ಷಣಾಂಕನನ್ನು ಕಳುಹಿಸುತ್ತಾನೆ. ಭರತನ ಸಂದೇಶವನ್ನು ತಂದ ಮಂತ್ರಿಯಾದ ದಕ್ಷಣಾಂಕನಲ್ಲಿ ಕಣ್ಣ ನೋಟದಲ್ಲಿ ಬಾಹುಬಲಿಯ ದರ್ಶನ ಮಾಡಿಸುತ್ತಾನೆ.

ಅರಲ ಸಿಂಹಾಸನದಗ್ರದೊಳಂಚೆಯ
ಕೊರಳತುಪ್ಪಳೆ ಗೆದ್ದುಗೆಯೊಳು
ನರಸುರ ನಾಗಲೋಕದ ಮೋಹನಾಂಗದೆ
ಪುರುಷ ರೂಪಾಂತವೊಲಿರ್ದ'

ಈ ಕವಿತೆಯಲ್ಲಿ ಕವಿಯು ಬಾಹುಬಲಿಯ ರೂಪ ದರ್ಶನವನ್ನು ದಕ್ಷಣಾಂಕನ ನೋಟದಲ್ಲಿ ನಿರೂಪಿಸಿದ್ದಾನೆ. ಭರತನ ಸಂದೇಶವನ್ನು ತಂದ ಮಂತ್ರಿ ದಕ್ಷಣಾಂಕನನ್ನು ಕುರಿತು ಬಾಹುಬಲಿ "ಎತ್ತಣಿಂ ಬಂದೆ ನಿನ್ನೊಡೆಯ ನನೆಲ್ಲಿ ಸುತ್ತಿಸಿ ತಂದೆಯ್ಯ" ಎಂದು ವ್ಯಂಗ್ಯವಾಗಿ ಮೂದಲಿಸುವ ಮಾತುಗಳು ಬಾಹುಬಲಿಯ ದರ್ಪವನ್ನು ತಿಳಿಸುತ್ತದೆ. [3]

ರತ್ನಾಕರನು ಚಿತ್ರಿಸಿರುವಂತೆ ಬಾಹುಬಲಿ ವಿಲಾಸಿಯು, ವೀರನೂ ಅಹುದು. ಮೇಲು ತೋರಿಕೆಗೆ ಧರ್ಮನಿಷ್ಠೆ ಕಾಣದ್ದಿದರೂ ಕ್ಷತ್ರಿಯೋಚಿತ ವ್ಯವಹಾರದಲ್ಲಿನ ಅವನ ನಿಷ್ಠೆಯ ನಿರ್ಧಾರದ ನಿಶ್ಚಿತ ಮನೋಧರ್ಮದ ಸುಳುಹು ಕಾಣುತ್ತದೆ.

ಅಣ್ಣನೊಡನೆ ಬಾಹುಬಲಿ ಯುದ್ಧಕ್ಕೆ ನಿಲ್ಲುವನೆಂಬ ಮಾತನ್ನು ಕೇಳಿದ ಆತನ ತಾಯಿ ಸುನಂದಾದೇವಿ ಹಾಗೂ ಆತನ ಪತ್ನಿಯರು ಪರಿತಪಿಸಿದರು. ಹಾಗೆ ಮಾಡಬಾರದೆಂದು ಬುದ್ಧಿ ಹೇಳಿದರು. ಅವರನ್ನು ಸಮಾಧಾನ ಪಡಿಸಲೆಂದೇ 'ಕೋಪವಿರ್ದುದು ಮೊದಲೆನಗೆ ನಿಮ್ಮೆಲ್ಲರಾಲಾಪವೆ ಕೇಳ್ದು ತಂಪಾಯ್ತು' ಅಣ್ಣಂಗೆರಗಿ ಬಂದಪೆನ್! ಎಂದು ಸುಳ್ಳು ನುಡಿಯುತ್ತಾನೆ. ಈ ಸಂದರ್ಭದಲ್ಲಿ ಬಾಹುಬಲಿಯ ವ್ಯಕ್ತಿತ್ವವನ್ನು ತೀರಾ ಕೆಟ್ಟದ್ದಾಗಿ

ನಿರ್ಮಿಸಿದ್ದಾನೆ. 'ಮದನಗೆ ವಂಚನೆ ಸಹಜ' ಎಂದು ಕವಿ ನುಡಿದಿದ್ದಾನೆ. ಇದು ಕವಿಯ ಸ್ವಸೃಷ್ಟಿಯಾಗಿದ್ದು ಹಿಂದಿನ ಪುರಾಣ ಕಾವ್ಯಗಳಲ್ಲಿ ದೂತ ಪ್ರಸಂಗದಲ್ಲಿ ಬರುವ ಬಾಹುಬಲಿ ಮುಚ್ಚುಮರೆ ಅರಿಯದವನು ತನಗನ್ನಿಸಿದುದುನು ನೇರವಾಗಿ ನುಡಿಯುವ ನಿಷ್ಠುರವಾದಿಯಾಗಿ ಚಿತ್ರಿತವಾಗಿದ್ದಾನೆ.

ಮುಂದೆ ರತ್ನಾಕರನ ವಿನ್ಯಾಸದಲ್ಲಿ ಬಾಹುಬಲಿಯ ಬಳಿಗೆ ಭರತನು ಮಕ್ಕಳಾದ ಅರ್ಕಕೀರ್ತಿ ಮೊದಲಾದವರು ಚಿಕ್ಕಪ್ಪನನ್ನು ಕಾಣಲು ಕಾಣಿಕೆಯೊಂದಿಗೆ ಬಂದಾಗ ಬಾಹುಬಲಿ ಅವರನ್ನು ತಿರಸ್ಕರಿಸಿ "ಬರಬೇಡಿ ಹೋಗ ಹೇಳೊ, ಅವರ ಪಿತ ನನಗರಸು" ಎಂದು ತಿರುಗಿ ಕಳುಹಿಸಿದನು. ಬಾಗಿಲಿಗೆ ಬಂದ ಮಕ್ಕಳು ಕಳವಳದಿಂದ ಹಿಂದಿರುಗಿದರು. ಬಾಹುಬಲಿಯ ಈ ಹೃದಯ ಹೀನ ವರ್ತನೆ ಎಂತಹವರಿಗೂ ಸರಿಬಾರದು. ಬಾಹುಬಲಿಯ ಬಗೆಗೆ ಈ ಭಾವನೆಗಳನ್ನು ಉಂಟುಮಾಡಲೆಂದು ಕವಿ ಇಂತಹ ಪ್ರಸಂಗಗಳನ್ನು ವಿನ್ಯಾಸಗೊಳಿಸಿದ್ದಾನೆ.

ಚಕ್ರದ ನಿಮಿತ್ತದಿಂದ ಇಬ್ಬರೂ ಶ್ರೇಷ್ಠ ವ್ಯಕ್ತಿಗಳು ಒಂದೆಡೆ ಸೇರಿದ್ದಾರೆ. ಇಬ್ಬರಿಗೂ ಪರಸ್ಪರ ರಕ್ತಸಂಬಂಧವಿದೆ. ಅದರೆ ವ್ಯಕ್ತಿತ್ವದ ಪರಿಚಯವಾಗಿಲ್ಲ. ಅಂತಹ ಆಘಾತಕ ಪರಿಸ್ಥಿತಿಯಲ್ಲಿ ಇಬ್ಬರೂ ಬೇಟಿಯಾಗುತ್ತಾರೆ. ರತ್ನಾಕರನ ಧರ್ಮ ಸೂಕ್ಷ್ಮ ದೃಷ್ಟಿ ಬಹು ಉನ್ನತವಾಗಿದೆ. ಪಂಪನ ಭರತ ಬಾಹುಬಲಿಗಳ ಸಮಾಗಮ ರುದ್ರರಮಣಿಯವಾದ ನಾಟಕೀಯತೆಯಿಂದ ಕೂಡಿದೆ. ರತ್ನಾಕರನ ನಾಯಕರ ಸಮಾಗಮ ತಪೋನಿಷ್ಠರಾದ ವ್ಯಕ್ತಿಗಳ ಧರ್ಮ ಸೂಕ್ಷ್ಮತೆ ಸಣ್ಣ ತಂತುವಿನ ಮೇಲೆ ನಿಲ್ಲುವಂತೆ ಮಾಡಿದ್ದಾನೆ. 'ಒಂದೆಡೆ ವೀರ ವೈರಾಗ್ಯ! ಮತ್ತೊಂದೆಡೆ ಧರ್ಮ ವೈರಾಗ್ಯ'.

ದೃಷ್ಟಿಯುದ್ಧ ಜಲಯುದ್ಧ ಮಲ್ಲಯುದ್ಧಗಳು ಅನುಗುಣವಾಗಿ ಬರುತ್ತದೆ. ಯುದ್ಧಕ್ಕೆ ಬಂದು ಎದುರು ನಿಂತು ಪ್ರತಿಭಟಿಸುವ ವೀರನೊಬ್ಬನ ಸ್ವಾಗತಕ್ಕೆ ಸಿದ್ದನಾಗಿ ನಿಂತಿರುವ ಪರಾಕ್ರಮಯಾದ ಬಾಹುಬಲಿಗೆ ಅನೀರೀಕ್ಷಿತ ಸನ್ನಿವೇಶ ನಿರ್ಮಾಣವಾಗಿರುತ್ತದೆ. ಯುದ್ಧ ಭೂಮಿಗೆ ಭರತನು ಬಾಹುಬಲಿಗೆ ತತ್ವೋಪದೇಶ ಮಾಡುತ್ತಾನೆ. ಇದು ರತ್ನಾಕರನ ಕಾವ್ಯದ ಹೊಸಮಾರ್ಪಾಡು. ಕವಿ ಕಾವ್ಯದ ಉದ್ದೇಶ ಸಾಧನೆಗಾಗಿ ಪುರಾಣ ಕಥೆಯನ್ನು ಅನುಕೂಲಕ್ಕೆ ತಕ್ಕಂತೆ ಕೆಚ್ಚೆದೆಯಿಂದ ಮಾರ್ಪಡಿಸಿದ್ದಾನೆ.

ಈ ರೀತಿಯ ಕದನವೇಕೆ? ಒಡಹುಟ್ಟಿದವನೆಂಬ ಕಾರಣಕ್ಕಾಗಿ ನೋಡುವ ಅಪೇಕ್ಷೆಯಿಂದ ಬರಹೇಳಿ ಕಳುಹಿಸಿದರೆ ಈ ರೀತಿ ಕಾಳಗಕ್ಕೆ ಬರಬೇಕೆ ನಾನು ನಿನಗಿಂತ

ಹಿರಿಯನಾದ್ದರಿಂದ ಇಲ್ಲಿಗೆ ಬರಹೇಳಿದೆನಲ್ಲದೆ ನೀನೆ ಹಿರಿಯಯವನಾಗಿದ್ದಾರೆ ನೀನಿದ್ದಲಿಗೆ ಬಂದು ಕಾಣುತ್ತಿದ್ದೆನು ಎಂದು ಹೇಳಿಸುತ್ತಾನೆ. ಕವಿಯು ಭರತನಿಂದ ಬಾಹುಬಲಿ ಕುರಿತು ಈ ಮಾತುಗಳನ್ನು ಆಡಿಸುತ್ತಾನೆ.

ನಿನಗಾನುಪಗೆಯೆ ನೀನೆನೆಗೆ ಪಗೆಯೆ ಹೇಳು
ಜಿನಪುತ್ರರಿದನು ನಾವಿಂದು!!
ನೆನೆದಾಗ ಮುಂದೆ ಸಮಸ್ತರ್ಗೆದ್ರೋಹಶಾ
ಸನವ ಬರೆದು ಕೊಟ್ಟವಲ್ತೆ.[1]

ನಾವಿಬ್ಬರೂ ಹಗೆಯಿಂದ ನೋಡಿದರೆ ಜಿನಪುತ್ರರಾದ ನಾವು ಹಗೆಯಾದರೆ ಸಮಸ್ತ ಜನರಿಗೆ ದ್ರೋಹ ಶಾಸನವನ್ನು ಬರೆದುಕೊಟ್ಟಂತೆ "ನನ್ನನ್ನು ಗೆದ್ದರೆ ನಿನಗೆ ಕೀರ್ತಿಯೆ ಹೇಳು ಎಂದು ನಿನ್ನ ಗೆದ್ದ ನನಗೊಂದು ಜಯವೆ" ತಮ್ಮನನ್ನು ವಿನಯದಿಂದ ಕೇಳುವಂತೆ ಮಾರ್ಪಡಿಸಿದ್ದು ಇನ್ನೂ ಮುಂದುವರೆದಂತೆ ಈ ಕದನ ಬೇಡ ಇಗೋ ನಿನಗೆ ಗೆಲುವಾಗಿದೆ ನಾನು ಸೋತಿರುವೆ ಸ್ಮರನಿಗೆ ಸೋಲದವರಾರು? ಎಂದು ಹೇಳುತ್ತಾನೆ. ಹಾಗೆ ಕವಿಯು ಭರತನಿಂದ ಬಾಹುಬಲಿಯನ್ನು ಒಲೈಸುವ

ನಿನಗೆ ನಾನಣ್ಣನೆಂಬ ಅಕ್ಕರವಿಲ್ಲ ನೀ
ನನುಜನೆಂಬದಕ್ಕರುಂಟಪ್ಪಾ
ನನವಿಲ್ಲ ನಿನ್ನ ಭಾಗ್ಯವ ಕಣ್ಣು ತುಂಬ ನೋ
ಳ್ಪೆನುರಾಜ ಪದವಿಗಿಂತೊಪ್ಪ[3]

ಎಂದು ಮುಂತಾದ ಮಾತುಗಳಿಂದ ಹೇಳಿ ತನ್ನ ಅಖಂಡ ಐಶ್ವರ್ಯ ವಿಜಯ ಸಿಂಹಾಸನವನ್ನು ತಮ್ಮನಿಗಾಗಿ ಅರ್ಪಿಸುತ್ತಾ

ಹೋಗು ಚಕ್ರವೇ, ಭುಜಬಲಿಯನೋತೈಸೆನೆ
ಹೋಗದೀತಗೆ ಪುಣ್ಯವುಂಟು
ಪೊಗಣೆಯಗೆ ಚಕ್ರ ಬೆಸಗೈಯ್ಸು ಪುಣ್ಯವಿ
ಲ್ಲಾಗಿ ನಿಂದಿತು ಮುಂದೆ ಬಂದು[3]

ಬಾಹುಬಲಿಯ ಸೇವೆಗೆ ಹೋಗಲು ಚಕ್ರರತ್ನಕ್ಕೆ ಅಜ್ಞಾಪಿಸಿದನು. ಆದರೆ ಚಕ್ರರತ್ನ ಬಾಹುಬಲಿಗೆ ಸೇವೆ ಸಲ್ಲಿಸದೆ ನಿಂತಾಗ ...

ಎಲೆಲೆ ಪಿಶಾಚಿ ಹೋಗೆಂದರೇತಕೆ ಹೋಗೆ
ಕಲಹ ನಿನ್ನಿಂದಾದುದೆನೆಗೆ
ಜಲ ಜಾಸ್ತ್ರನತ್ತ ಸಾರೆಂದು ನುಕಿದರದು
ಬಳೆ ಜಾರುವಂತೆ ಜಾರಿದುದು[3]

ಭರತನು ಮತ್ತೆ ಅದನ್ನು ಬಲತ್ಕಾರದಿಂದ ಅಟ್ಟುತ್ತಾ ನಿನ್ನಿಂದಲೇ ಈ ಅವಗಡಗಳಲ್ಲೇ ಸಂಭವಿಸಿದವೆಂದು ಚಕ್ರ ರತ್ನದ ಬಗ್ಗೆ ಬೇಸರಗೊಳ್ಳುತ್ತಾನೆ. ಹಿಂದೆ ಚಕ್ರರತ್ನವನ್ನು ಮೊದಲ ದೇವರು ಎಂದು ಪೂಜಿಸಿದ ಭರತ ಇಂದು ಅದನ್ನು ಮೂದಲಿಸುತ್ತಾನೆ. ಇದು ರತ್ನಾಕರನ ಮಾಡಿಕೊಂಡಿರುವಂತಹ ಬದಲಾವಣೆಯಾಗಿದೆ. ಈ ಸಂದರ್ಭದಲ್ಲಿ ಚಕ್ರರತ್ನದಿಂದಾಗಿ ಧೂಮಕೇತುಗಳೆದ್ದವು. ಈ ಅಘಟಿತ ಘಟನೆಗಳನ್ನು ನೋಡಿದ ಬಾಹುಬಲಿಯ ಮನಸ್ಸು ಪರಿವರ್ತನೆಗೊಂಡಿತು. ಪಶ್ಚಾತಾಪದ ಬಿಳಿಯಲಿ ಬೆಂದು ನಾಚಿ ನೀರಾದನು.

ಪಾಪಿನಾನ್ನೆಣ್ಣಗೆದಿರಾಗಿ ಕುಲಕೆಲೋ
ಕಾಪವಾದವ ತಂದೆನಕಟ
ಕೋಪ ಗರ್ವಗಳಾಂ ಕೆಡಿಸವೆಂದು ಪುಷ್ಪ
ಪಾಪ ತನೊಳು ಮರುಗಿದನು [3]

ಬಾಹುಬಲಿಯು ತನ್ನ ಅಣ್ಣನಾದ ಒಡಹುಟ್ಟಿದವನೊಡನೆ ಎದುರಾಗಿ ತನ್ನ ಇಕ್ವಾಂಕು ಕುಲಕ್ಕೆ ಲೋಕಕೆಲ್ಲಾ ತಿಳಿಯುವಂತಹ ಅಪವಾದವನ್ನು ತಂದುಕೊಂಡೆ ಕೋಪ ಮತ್ತು ಗರ್ವಗಳು ನಮ್ಮನ್ನು ಕೆಡಿಸುತ್ತವೆ ಎಂದು ತಮ್ಮಲ್ಲಿ ತಾನು ಮರುಗುತ್ತಾನೆ.

"ಏರಿದ ಹೆಡೆಯಳಿದಂತೆ ಮುನ್ನಿನ ಗರ್ವ ಜಾರಿತು ಮೃದುವಾಯ್ತು ಚಿತ್ತ" ನಂತರ "ಅಣ್ಣಗಿದಿರೊಡ್ಡಿ ನಿಂದ ದೇಹ ಮನೆ ಮಣ್ಣು ಮಾಲ್ಪನು ತಪಗೊಡ್ಡಿ" ಎಂದು ದೀಕ್ಷೆವಹಿಸಿ ತಪಸ್ಸಿಗೆ ಹೋದನು.

ಮುಂದೆ ಪ್ರತಿಮಾ ಯೋಗದಲ್ಲಿ ನಿಂತ ಬಾಹುಬಲಿ ಹೃದಯದಲ್ಲಿ ಮನಃ ಕಷಾಯ ಪೂರ್ತಿ ಅಳಿಯುವುದಿಲ್ಲ. ಅದನ್ನು ಭರತನೇ ನಿವಾರಿಸಬೇಕಾಗುತ್ತದೆ. ಆದರೆ ಗಂಧಕುಟೀರ ಸೇರಿದ ಬಾಹುಬಲಿ ವೃಷಭ ತೀರ್ಥಂಕರನಿಗಿಂತ ಅಥವಾ ಭರತನಿಗೆ ಮೊದಲು ನಿರ್ವಾಣಕ್ಕೇರುವ ಅವಕಾಶವನ್ನು ಮಾತ್ರ ರತ್ನಾಕರ ಸಂಪೂರ್ಣವಾಗಿಯೂ ನಿರಾಕರಿಸಿದ್ದಾನೆ. ಅವನ ಆದರ್ಶನಾಯಕ ಭರತನ ವ್ಯಕ್ತಿತ್ವಕ್ಕೆ ಯಾವ ರೀತಿಯ ಕುಂದೂ ಸೋಂಕಕೂಡದೆಂಬ

ನಿರ್ಧಾರದಿಂದಲೇ ಬಾಹುಬಲಿಯ ಪಾತ್ರದಲ್ಲಿ ಕೆಲವು ಮಾರ್ಪಾಡುಗಳನ್ನು ಕೈಗೊಂಡಿದ್ದಾನೆ. ಪುರಪರಮೇಶನೊಂದಿಗೆ ತೂಗಿ ತನ್ನ ನಾಯಕ ಭರತನ ಹಿರಿಮೆ ಸ್ಥಾಪಿಸಲೆಳಸುವ ಕವಿಯ ಅಭಿಮಾನ ಉತ್ಸಾಹದಲ್ಲಿ ಬಾಹುಬಲಿಯ ಚಿತ್ರ ಸಾಧಾರಣವಾಗಿ ಕಾಣದೆ ಗತ್ಯಂತರವಿಲ್ಲ. ಆದರೂ ಕವಿಗೆ ಅರಿತೋ ಅರಿಯದೆಯೋ ಬಾಹುಬಲಿ ಹೇಗೂ ಪೂಜನೀಯ ವ್ಯಕ್ತಿಯಾಗಿಯೆ ಉಳಿಯುತ್ತಾನೆ. ಕವಿಗೂ ಆತನಲ್ಲಿ ಭಕ್ತಿಯಿಲ್ಲವೆಂದಲ್ಲ. ಈ ಸಾತ್ವಿಕ ಶಕ್ತಿ ದರ್ಶನ ಕವಿಗೆ ಗೋಚರಿಸದಿದ್ದರೆ ಅಂತಹ ವಿಶಿಷ್ಟ ಆದರ್ಶವನ್ನು ಆ ಬಾಳು ಒಳಗೊಂಡಿಲ್ಲದಿದ್ದರೆ ಭರತನಂತು ತನ್ನ ಕಾವ್ಯ ಸೌಧದಲ್ಲಿ ಓದುಗರ ಸಾಹಸ್ರಾರು ಹೃದಯಗಳಲ್ಲಿ ಧರ್ಮವೀರನಾಗಿ ಮೂಡಿನಿಲ್ಲಬೇಕೆಂದು ಬಯಸುತ್ತಾನೋ ಅಷ್ಟೇ ಪ್ರಜ್ವಲವಾದ ಓಜಸ್ಸು ತೇಜಸ್ಸುಗಳಿಂದ ಆ ಪುಣ್ಯ ಪುರುಷ ಬಾಹುಬಲಿ ಮನುಷ್ಯ ಹೃದಯದ ಧರ್ಮ ಭೂಮಿಕೆಯ ಉತ್ತುಂಗ ಶಿಖರದಲ್ಲಿ ಅನೇಕ ಶತಮಾನಗಳಿಂದ ವಿರಾಜಮಾನವಾಗಿ ನಿಂತು ಲೋಕಕ್ಕೆ ಶಾಂತಿ ಧರ್ಮಗಳ ಬೀರಲೆಂದೂ ಬಯಸುತ್ತಿರಲಿಲ್ಲ.

ಭರತೇಶ ವೈಭವ ಕಾವ್ಯದಲ್ಲಿ ಕವಿ ರತ್ನಾಕರನ ವಸ್ತು ವಿನ್ಯಾವನ್ನು ನೋಡಿದರೆ ತನ್ನ ಕಾವ್ಯದ ಕಥಾನಾಯಕನನ್ನು ಮೇಲೇರಿಸುವ ದೃಷ್ಟಿಯಿಂದ ಉಳಿದ ಪಾತ್ರಗಳನ್ನು ಕೇವಲ ಪೋಷಕ ಪಾತ್ರಗಳಾಗಿ ನೋಡುತ್ತಾ ಕೆಲವನ್ನು ಗೌಣವಾಗಿಸಿದ್ದಾನೆ. ಭರತ ಬಾಹುಬಲಿಯ ಕಥೆಯನ್ನು ಒಳಗೊಂಡ ಆದಿಪುರಾಣ ಕಾವ್ಯದಲ್ಲಿ ಬರುವ ಪಾತ್ರಗಳಿದ್ದರೂ ತನ್ನದೇ ಮಾರ್ಪಾಡಿನಿಂದ ತನಗೆ ಬೇಕಾದ ವಸ್ತುವಿಗೆ ಪೂರಕವಾಗಿ ಕಾವ್ಯವನ್ನು ಮುಂದುವರಿಸಿದ್ದಾನೆ. ತನ್ನ ಕಾವ್ಯದ ಕಥಾ ನಾಯಕನಾದ ಭರತನನ್ನು ಕವಿ ರತ್ನಾಕರನು "ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ" ಎಂಬಂತೆ ಸ್ಪಷ್ಟವಾಗಿ ಚಿತ್ರಿಸಿದ್ದಾನೆ. ಜೈನ ಧರ್ಮದ ಪುರಾಣದಲ್ಲಿ ಶ್ರೇಷ್ಠನಾದ ಬಾಹುಬಲಿಯನ್ನು ಕೇವಲ ಸಂದರ್ಭೋಚಿತವಾಗಿಕವಿ ಚಿತ್ರಿಸಿದ್ದಾನೆ. ತನಗೆ ಬೇಕಾದ ಸಂದರ್ಭದಲ್ಲಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ವರ್ಣಿಸುವ ಕೆಲಸವನ್ನು ಜಾಣತನದಿಂದ ಮಾಡಿ ಮುಗಿಸಿದ್ದಾನೆ.

ಕಾವ್ಯ ಶೈಲಿ :

ಹದಿನಾರನೆಯ ಶತಮಾನದಲ್ಲಿ ರಚಿತವಾಗಿರುವ 'ಭರತೇಶ ವೈಭವ' ಕಾವ್ಯವು ರತ್ನಾಕರವರ್ಣಿಯ ಶ್ರೇಷ್ಠತೆಯನ್ನು ತೋರಿಸುತ್ತದೆ. ಕವಿಯು ತನ್ನ ಕಾವ್ಯವನ್ನು ಪಂಡಿತರಿಗೆ ಯೋಗ್ಯವಾಗುವಂತೆ ಅವರ ರಚನೆಗೆ ಅನುಕೂಲವಾಗಿ ಬರೆದಿಲ್ಲ. ಆದರೆ ಇದೂ ಸ್ತ್ರೀ ಸಾಮಾನ್ಯರೂ ಮನೆಯಲ್ಲಿ ಹಾಡಿಕೊಳ್ಳಲು ಅನುಕೂಲವಾಗುವಂತಹ ಸಾಂಗತ್ಯ ರೂಪದಲ್ಲಿ ಬರೆದಿದ್ದಾನೆ.

"ವ್ಯಕ್ತಿಯ ಅನುಭವವನ್ನು ಅವನ ಶೈಲಿ ನಿರ್ಧರಿಸುತ್ತದೆ" ಎಂಬುಂವಂತೆ ರತ್ನಾಕರನ ಕಾವ್ಯ ಶೈಲಿಯಿಂದ ಅವನ ಮನೋಧರ್ಮವನ್ನು ನಾವು ಸುಲಭವಾಗಿ ಗ್ರಹಿಸಬಹುದು. ರತ್ನಾಕರನ ಶೈಲಿಯಿಂದ ಅವನ ಮನೋಭಾವ ಏನೆಂಬುದನ್ನು ನಾವು ಕಂಡುಕೊಳ್ಳಬಹುದು. ಕಣ್ಣಿಗೆ ಕಾಣುವ ವಸ್ತುಗಳನ್ನು ವರ್ಣಿಸಲು ಹೆಚ್ಚು ಜಾಣತನ ಬೇಕಿಲ್ಲ. ಅದರ ಅನುಭವ ವೇದ್ಯವಾಗಲು ಹೆಚ್ಚು ಕಷ್ಟವಾಗುವುದಿಲ್ಲ. ರತ್ನಾಕರನ ಶೈಲಿಯು ಸಲಭವಾಗಿದೆ, ಸ್ವಾಭಾವಿಕವಾಗಿದೆ. ಇರುವ ವಸ್ತುವನ್ನು ಅದು ಇರುವ ಹಾಗೆ ವರ್ಣಿಸುವ ಚಾತುರ್ಯ ಕವಿಗೆ ಉಂಟು. ಕಾವ್ಯವನ್ನು ವರ್ಣಿಸುವಾಗ ಜನ ಸಾಮಾನ್ಯರಿಗೆ ಅನುಭವದಲ್ಲಿ ಇರುವ ಹೋಲಿಕೆಗಳನ್ನು ತರುವುದರಲ್ಲಿ ಬಹುಜಾಣತನವನ್ನು ತೋರಿದ್ದಾನೆ. ಉದಾಹರಣೆಗೆ ಮಳೆಯ ವರ್ಣನೆನ್ನು ನೋಡಿ "ಕಿರುದಾರೆಯಲ್ಲಿ ತೆಂಗಿನ ಮರಗಳ ತೋಂದಿರುವ ಧಾರೆಯೊಳೆಡಬಿಡದೆ ಬರುತ್ತಿದ್ದ ಮಳೆ ಅಗಣಿತ".

ಕವಿ ರತ್ನಾಕರನ ಶೈಲಿ ಲಲಿತವಾದುದು. ಬಾಲರಸಾಲನವ ಪಲ್ಲದ್ದಂತಿ ಕೋಮಲ ಮತ್ತು ಸೌಕುಮಾರ್ಯ ಭಾವಗಳಿಗೆ ಸಜ್ಜಿತವಾದುದು. ಕವಿ ಮನಸ್ಸು ಮಾಡಿದರೆ ಧೀರಗಂಭೀರ ಶೈಲಿಯಲ್ಲೂ ಬರೆಯುಬಲ್ಲ. ರತ್ನಾಕರನು ಪ್ರಸನ್ನ ಮಧುರ ವಾಣಿಯಲ್ಲಿ ಶೃಂಗಾರ ಶಾಂತ ಸೌಹಾರ್ಧ ಪ್ರೀತಿ, ವಾತ್ಸಲ್ಯದಿ ಗುಣಗಳನ್ನು ಬಹು ಪ್ರಶಾಂತವಾಗಿ ಕವಿಲೇಖನಿಯಲ್ಲಿ ಹರಿದು ಬಂದಿದೆ. ವೀರ ಭಯಾನಕ ರೌದ್ರ ರಸೋತ್ಪಾದನೆಗೆ ಈ ಶೈಲಿ ಹೊಂದಿಕೊಳ್ಳಲಾರದು. ಸಾಂಗತ್ಯ ಕವಿ ಕೇಳುವ ಜನಗಳ ಎದೆಗೆ ವಿಷಯ ನೇರವಾಗಿ ನಾಟಬೇಕೆಂಬ ಗುರಿಯುಳ್ಳವನು. ಸಾಂಗತ್ಯ ರಸಭಾವಗಳಿಂದ ಸಂಗೀತವಾಗಿ ರತ್ನಾಕರನ ಕಾವ್ಯ ವೀಣೆಯಲ್ಲಿ ಮಿಡಿಯುವ ರಾಗದ ಸಂಚು ಸೊಬಗು ಸೊಗಸುಗಳನ್ನು ಕಾಣಿಸಿ ಸಾಂಗತ್ಯದಂತಹ ಹಾಡಗಬ್ಬದ ಜಾನಪದ ಛಂದಸ್ಸಿನಲ್ಲಿಯೂ

ಕಬ್ಬಿಗರೋದುಗಬ್ಬವ ಹಾಡುಗಬ್ಬವ!
ಕಬ್ಬದೊಳೊರೆವೆರಿವೆರಡು !! ಕಬ್ಬಿನಂ
ತಿರಬೇಕು ಬಿದಿರಂತೆ ರಚಿಸಲೇ!
ಕಬ್ಬ ಹೇಳಿವೆ ಸರಸ್ವತಿಯ!! [6]

ಎಂದು ಕಬ್ಬಿನಗನಲ್ಲಿ ಸರಸ್ವತಿಯ ಮುಂದೆ ಮುಂಡಿಗೆ ಹುಡಿರುವುದು ಸೂಕ್ತ ವಿಷಯ ನಿರೂಪಣೆಯಲ್ಲಿ ಭಾಷೆ ನೇರವಾದಷ್ಟು ಓದುಗರಿಗೆ ಗ್ರಹ್ಯ ಸೌಕರ್ಯ ಹೆಚ್ಚುತ್ತದೆ. ಕವಿ ಸರ ಪ್ರತಿಪಾದನೆಯ ಕೆಲಸವನ್ನು ಸಾರ್ಥಕವಾಗುವಂತೆ ಮಾಡಿದ್ದಾನೆ. ಸಾಂಗತ್ಯಕ್ಕೆ ಹೊಂದಿಕೊಂಡ ರತ್ನಾಕರನ ಶೈಲಿಯಲ್ಲಿ ಉತ್ಸಾಹ ಆವೇಶಗಳು ಮುನ್ನುಗ್ಗಿ ಹರಿಯುತ್ತಿದೆ. ಸಾಂಗತ್ಯವನ್ನು ನಿರಾಯಾಸವಾಗಿ ನೈಸರ್ಗಿಕವಾದ ಕಾವ್ಯಧಾರಿಯಿಂದ ತುಂಬಿ ಬಿಡುತ್ತಾನೆ. ಒಟ್ಟಿನಲ್ಲಿ ರತ್ನಾಕರನಿಗೆ ಸಾಂಗತ್ಯದ ಶೈಲಿ ಚೆನ್ನಾಗಿ ಓಲಿದು ಬಂದಿದೆ. ರತ್ನಾಕರನು ಸಂಸ್ಕೃತಿಯ ಅನುಗ್ರಹಕ್ಕೆ ಪಾತ್ರನಾಗಿ ಸಾಂಗತ್ಯದಲ್ಲಿ ಪ್ರಸಾಧಿತ ಶೈಲಿಯನ್ನು ಪಳಗಿಸಿಕೊಂಡಿದ್ದಾನೆ. ದೈವದತ್ತ ಪ್ರತಿಭೆಯೊಂದಿಗೆ ನೈಸರ್ಗಿಕವಾದ ಸರಳ ಶೈಲಿಯಲ್ಲಿ ಕಾವ್ಯ ರತ್ನವೊಂದನ್ನು ಕಂಡಿದ್ದಾನೆ. [4]

ರತ್ನಾಕರ ತನ್ನ ಅನುಭವವನ್ನು ಮಾತ್ರವೇ ಉಪಯೋಗಿಸಿಕೊಂಡು ಕಣ್ಣಿಗೆ ಕಟ್ಟುವಂತೆ ಮನಸ್ಸಿಗೆ ಮುಟ್ಟುವಂತೆ ಕಾವ್ಯವನ್ನು ಚಿತ್ರಿಸಬಲ್ಲ ಕೌಶಲ್ಯವಿದೆ. ಕಣ್ಣಿಗೆ ಕಾಣಿಸದಂತೆ ಹಾಗೂ ಶ್ರವ್ಯ-ಇಂದ್ರಿಯಕ್ಕೆ ಮಾತ್ರ ಗೋಚರವಾಗಬಲ್ಲ ವಿಷಯಗಳನ್ನು ವರ್ಣಿಸುವುದರಲ್ಲಿಯೂ ಕವಿಯು ಅಸಾಮಾನ್ಯವಾದ ಜಾಣ್ಮೆಯನ್ನು ತೋರಿಸಿದ್ದಾನೆ. ರತ್ನಾಕರನ ಸಂಗೀತ ವರ್ಣನೆಯು ಅಸಾಧ್ಯವಾದುದು. ಅಲ್ಲಿ ಪಾರಿಭಾಷಿಕ ಶಬ್ದಗಳ ಗೊಂದಲವಿಲ್ಲ. ಸಂಗೀತಶಾಸ್ತ್ರದ ಪರಿಚಯ ವಿಲ್ಲದವನಿಗೂ ಕಣ್ಣಿಗೆ ಕಟ್ಟುತ್ತದೆ. ಈ ಸಂದರ್ಭವನ್ನು ಕವಿ ಅನುಭವಿಸಿ ಆನಂದ ಪಡುತ್ತಾನೆ. ಅಲ್ಲಿಯು ಉಪಮಾನಗಳಂತೂ ಜೀವನದಿಂದ ತಾವಾಗಿಯ ಎದ್ದು ಬಂದಂತೆ ಕಾಣುತ್ತಿದೆ.

ರತ್ನಾಕರನ ಕಾವ್ಯದಲ್ಲಿ ಕಲ್ಪನಾ ಚಾತುರ್ಯಕ್ಕಿಂತಲೂ ಕವಿಯ ರಸಾನುಭಾವವು ಹೆಚ್ಚು ಬೆಲೆಯುಳ್ಳಂತದ್ದು. ಅತ್ಯಂತ ಗಹನವಾದ ವೇದಾಂತ ವಿಚಾರಗಳೂ ರತ್ನಾಕರನ ಕೈಯಲ್ಲಿ 'ಸುಲಿದ ಬಾಳೆಯ ಹಣ್ಣಿನಂತಾಗುತ್ತದೆ'. ಕವಿಯು ಮನಸ್ಸಿನಲ್ಲಿ ಮಾತ್ರ ವೇದ್ಯವಾಗಬಲ್ಲ ವಿಷಯಗಳನ್ನು ಸಹ ಸುಂದರವಾಗಿ ಸಹಜವಾಗಿ ಚಿತ್ರಿಸಬಲ್ಲ ಕಲೆಗಾರನಾಗಿದ್ದಾನೆ.

ರತ್ನಾಕರನ ಶೈಲಿಯಲ್ಲಿ ಕುಸುರಿ ಕೆಲಸ ಹೆಚ್ಚು ಮಹತ್ವದ್ದು. ವಸ್ತುವನ್ನು ಪ್ರತಿಯೊಬ್ಬ ಕವಿಯು ವರ್ಣಿಸುವ ಪದರವನ್ನು ಜಕಣಾಚಾರಿಯಂತೆ ಬಿಚ್ಚಿ ತೋರಿಸುವ ಸ್ವಭಾವ. ಇವನು

ಒಂದು ಕಡೆ ಬಂದಂತಹ ಭಾವವನ್ನು ಇನ್ನೊಂದೆಡೆ ವಿಧವಾಗಿ ಹೇಳುತ್ತಾನೆ. ಕವಿ ತನ್ನ ಕಾವ್ಯವನ್ನು ಓದುಗರ ಊಹೆಗೆ ಹೆಚ್ಚು ಅವಕಾಶವನ್ನು ಕೊಡುವುದಿಲ್ಲ. ತಾನು ಹಿಡಿದ ಕೆಲಸವನ್ನು ಮತ್ತೊಬ್ಬರು ಕೈಹಾಕಬಾರದು ಎನ್ನುವ ಮನೋಭಾವವುಳ್ಳವನು. ಕವಿಯು ಕಾವ್ಯದ ಉದ್ದಕ್ಕೂ ತನ್ನ ಮನೋಭಾವವನ್ನು ಬಹು ಕೋಮಲವಾಗಿ ಚಿತ್ರಿಸಿದ್ದಾನೆ.

ರತ್ನಾಕರನ ಶೈಲಿಯಲ್ಲಿ ಆಡಂಬರವಿಲ್ಲ ಯಾವುದನ್ನು ಹೇಳಬೇಕಾದರೂ ಅದರ ಉದ್ದಿಷ್ಟ ಪರಿಣಾಮವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಹೇಳಲು ಪ್ರಯತ್ನಿಸುತ್ತಾನೆ. ಒಂದು ರೀತಿಯಿಂದ 'ಮಿತಿಯೆಂಬುದು ಇವನ ಮನೆದೇವತೆ' ಆಯಾ ಸಂದರ್ಭಗಳಿಗೆ ಎಷ್ಟು ಪ್ರಸ್ತುತವೋ ಅಷ್ಟೇ ಮಾತ್ರ ಹೇಳುತ್ತಾನೆ. 'ಉಚಿತಕ್ಕೆ ತಕ್ಕಷ್ಟು ಪೇಳ್ವೆನ್' ಎಂಬ ಈತನ ಸಂಕಲ್ಪವು ಈಡೇರಿದೆ.

ತಾತ್ವಿಕ ದೃಷ್ಟಿ :

ರತ್ನಾಕರ ವರ್ಣಿಯ 'ಭರತೇಶ ವೈಭವ' ಕಾವ್ಯವನ್ನು ಬರೆಯುವ ವೇಳೆಗೆ ಜೈನ ಧರ್ಮವನ್ನು ಸಂಪೂರ್ಣ ಅರಿತವನಾಗಿದ್ದು 'ಆದಿಪುರಾಣ'ದಲ್ಲಿ ಬರುವ ಭರತ - ಬಾಹುಬಲಿಯನ್ನು ಆಧರಿಸಿ ತನ್ನ ಕಾವ್ಯವನ್ನು ರಚಿಸಿದ್ದರೂ ಕಾವ್ಯದ ಹೆಸರು ಸೂಚಿಸಿರುವಂತೆ ತನ್ನ ಕಾವ್ಯದ ನಾಯಕನಾದ ಭರತನನ್ನು ವೈಭವದ ಉತ್ತುಂಗಕ್ಕೆ ಏರಿಸಿದ್ದಾನೆ. ಕವಿ ಭರತೇಶನ ವಿಚಾರದಲ್ಲಿ ಸಾಕಷ್ಟು ಹಿರಿದಾದ ವರ್ಣನೆಯನ್ನು ಮಾಡಿದ್ದಾರೆ. ಇದು 'ಆದಿಪುರಾಣ' ಕಾವ್ಯದಲ್ಲೂ ಬರುವಂತಹ ಸಂಗತಿ. ಆದರೆ ರತ್ನಾಕರನು ಭರತ ಚಕ್ರವರ್ತಿಯ ವಿಚಾರದಲ್ಲಿ ಸುಖ - ಭೋಗಗಳ ವರ್ಣನೆಯನ್ನು ಹೆಚ್ಚು ವಿಸ್ತಾರವಾಗಿ ರಸವತ್ತಾಗಿ ಪ್ರತಿಭಾಯುತವಾಗಿ ಪ್ರತಿಪಾದಿಸಿದ್ದಾನೆ. ಮೂಲ ಕವಿತೆಯಂತೆ ಧಾರ್ಮಿಕ ದೃಷ್ಟಿಯಿಂದಲೇ ಕವಿ ಪ್ರಚೋದಿತನಾಗಿದ್ದಾನೆ. ಧರ್ಮದ ಆವರಣಕ್ಕೆ ಭರತ ಚಕ್ರವರ್ತಿಯನ್ನು ಆಧಾರಭೂತನಾಗಿ ಮಾಡಿಕೊಂಡು ತತ್ವ ಬೋಧನೆಯನ್ನು ಕಾವ್ಯ ರೂಪದಲ್ಲಿ ಮೂಡಿಸಿದ್ದಾನೆ. ಕವಿಯು 'ಕೀರ್ತಿಯ ಬಯಸಿ' ಕಾವ್ಯವನ್ನು ರಚಿಸಿದವನಲ್ಲ 'ದ್ಯಾನಕೆ ಬೇಸರಾದಾಗ ನನ್ನಾತ್ಮ ಲೀಲಾನು ವೃದ್ಧಿಗೆ ಪೇಳ್ದೆನ್ನೈಸೆ' ಎಂದು ತನ್ನ ಕೃತಿ ನಿರ್ಮಾಣಕ್ಕೆ ಕಾರಣವನ್ನು ಹೇಳಿಕೊಂಡಿದ್ದಾನೆ. ತನ್ನ ಕಾವ್ಯವನ್ನು ಎಲ್ಲರೂ ಓದಬೇಕು ಎಂಬ ಆಗ್ರಹವು ಸಹ ಕವಿಗಿಲ್ಲ. [4]

'ಬೇಕಾದರಾಲಿಸುವುದು ಬೇಡವಾಗೆ ಪರಾಕು ಮಾಡುವುದೆ ನಗಲ್ಲಿ ವ್ಯಾಕುಲವಿಲ್ಲ ಸಂತಸವಿಲ್ಲ ನಾನು ನಿರಾಕಾಂಕ್ಷಿ' ಎಂದು ಹೇಳಿದ್ದನೆ.

ಕವಿಯು ತನ್ನ ಕಾವ್ಯದಲ್ಲಿ ಭರತನ ಆತ್ಮ ಹೇಗೆ ವೃದ್ಧಿಹೊಂದಿ ವಿಕಸಿತ ವಾಯಿತೆಂಬುದನ್ನು ಹೇಳುವಾಗ ಅದು ತನ್ನ ಆತ್ಮದಲ್ಲಿಯೂ ತಕ್ಕ ಮಟ್ಟಿಗೆ ಪ್ರತಿಬಿಂಬಿತವಾದರೆ ಸಾಕು ಎಂಬುದೆ ಕವಿಯ ಆಶಯವಾಗಿದೆ.

ಭರತನು ಜೈನ ಧರ್ಮದಲ್ಲಿ ಮಹಾಪುರುಷ ಅಥವಾ ಚಕ್ರವರ್ತಿಯಾದ್ದರಿಂದ ಭರತನ ಆದರ್ಶ ಪ್ರಾಯನು ಎನ್ನುವುದು ಆತನ ಭಾವನೆ ಜೈನ ಧರ್ಮಿಯರೆಲ್ಲಾ ಭರತನನ್ನು ಭಕ್ತಿಯಿಂದ ಕಾಣಬೇಕೆಂಬುದು ಕವಿಯ ಆಶಯ. ಅದಕ್ಕಾಗಿಯೇ ಭರತ ಚರಿತ್ರೆಯನ್ನು, ಜೈನ ಪುರಾಣವನ್ನು ಅನುಸರಿಸಿ ಬರೆದಿದ್ದಾನೆ.

'ಶೃಂಗಾರಕ್ಕಾಗಿ ಕಷ್ಟದ ಕಥೆಗೇಳ್ದು ಜನಂಗಳು'' ಕೆಟ್ಟುಹೊಗುತ್ತಾರೆ.

ಹಾಗಾಗಬಾರದೆಂದು ಕವಿ ತನ್ನ ಕಾವ್ಯದಲ್ಲಿ 'ಅಂಗಸುಖಿಯ, ಮೋಕ್ಷಸುಖಿಯ' ಕಾವ್ಯವನಿಷ್ಟು ಶೃಂಗಾರ ಕಟ್ಟಿ ಹೇಳುತ್ತಿದ್ದಾನೆ.

ರತ್ನಾಕರನು ಇಹಲೋಕದ ಭೋಗೋಪ ಭೋಗಗಳ ಅಡಿಗಲ್ಲಿನ ಮೇಲೆ ತನ್ನ ಆಧ್ಯಾತ್ಮಿಕ ಕಟ್ಟಡವನ್ನು ಭವ್ಯವಾಗಿ ನಿರ್ಮಿಸಿದ್ದಾನೆ. ಕಾವ್ಯಧರ್ಮ ಧರ್ಮಗಳನ್ನು ಸಮನ್ವಯಗೊಳಿಸಿದ್ದಾನೆ. ಕವಿಯು ತನ್ನ ಕಾವ್ಯದಲ್ಲಿ ಶೃಂಗಾರ ಪೂರಿತವಾದ ಸನ್ನಿವೇಶಗಳಿಂದ ಕಾವ್ಯವೂ ರಸಮಯವಾಗಿದ್ದರೂ ಔಚಿತ್ಯವನ್ನು ಮಿರಿದುದಲ್ಲ.

ಕವಿಯ ಮತದಲ್ಲಿ ವೈರಾಗ್ಯವೆಂದು ಹಂಬಲಿಸಿ ಇಹ ಸೌಖ್ಯವನ್ನು ತ್ಯಜಿಸುವುದು ಮೂಢತನ ಹೇಡಿತನ. 'ಈಸಬೇಕು ಇದ್ದು ಜೈಸಬೇಕು' ತನಗೆ ದೊರೆತದ್ದನ್ನು ಅನುಭವಿಸಬೇಕು, ಅನುಭವಿಸುವಾಗ ಉದಾತ್ತ ದೃಷ್ಟಿ ಕಣ್ಮರೆಯಾಗಬಾರದು ಲೌಕಿಕ ಸುಖವನ್ನು ಸಂಪೂರ್ಣವಾಗಿ ತ್ಯಾಗ ಮಾಡುವುದು ಅನುಚಿತ ಅನಾವಶ್ಯಕ ಇದನ್ನು ಅನುಭವಿಸದ್ದಿದರೆ ಮನಸ್ಸು ಅವುಗಳ ಪ್ರಲೋಭತಿಗೆ ಒಳಗಾಗಬಹುದು. ಕವಿಯು ಕೇವಲ ಜ್ಞಾನದಿಂದ ಮಾತ್ರ ವೈರಾಗ್ಯವನ್ನು ಗಳಿಸುವುದು ಕೇವಲ ಕೃತಕವಾದದ್ದು ಆದ್ದರಿಂದ "ಜ್ಞಾನವಿಡಿದ ಬೋಗಿ ಯೋಗಿ" ಇಹದ ಅದ್ರುವವೂ ಅಪ್ರಯೋಜಕವಲ್ಲ ಮಿತಿಯಾದ ಈ ಸುಖವನ್ನು ಗಳಿಸಬೇಕು ಜೀವನಕ್ಕೆ ಭೋಗ ಯೋಗಗಳೇರಡು ಅವಶ್ಯಕ.

"ಯೋಗವಿಲ್ಲದ ಭೋಗವು, ಭೋಗವಿಲ್ಲದ ಯೋಗವೂ ಅಪ್ರಯೋಜಕ ಇವುಗಳ ಸಾಮರಸ್ಯವೇ ಹೆಚ್ಚು ಆಕರ್ಷಕವೂ, ರಮಣಿಯವೂ ಆದ ಪ್ರಯೋಜನವನ್ನು ಕೊಡುತ್ತದೆ. ಇದು ರತ್ನಾಕರನ ತಾತ್ವಿಕ ದೃಷ್ಟಿ.

ಭೋಗಮೂಲವಾದ ಶೃಂಗಾರವನ್ನೂ, ಯೋಗ ಮೂಲವಾದ ತ್ಯಾಗವನ್ನೂ ಪರಸ್ಪರ ವಿರುದ್ಧವಾಗದಂತೆ ಪ್ರದರ್ಶಿಸುವುದೇ ರತ್ನಾಕರನೆ ಉದ್ದೇಶವಾಗಿದೆ. ರತ್ನಾಕರನ ದೃಷ್ಟಿಯಲ್ಲಿ ಭೋಗವು ಯೋಗದ ಮೊದಲ ಮೆಟ್ಟಿಲು ಭೋಗದ ಅರಿವಿಲ್ಲದೆ ಯೋಗಕ್ಕೆ ಕೈಯಿಕ್ಕಿದರೆ 'ಅರಿಯುದ ಬ್ರಾಹ್ಮಣ ಯಜ್ಞಮಾಡಿ ಗಡ್ಡಿ ಸುಟ್ಟುಕೊಂಡಂತಾಗುತ್ತದೆ'.

ರತ್ನಾಕರನು ತನ್ನ ಕಾವ್ಯವನ್ನು ಇಹಲೋಕದ ಭೋಗಗಳ ಅನುಭವದಿಂದ ಪ್ರಾರಂಭಿಸುತ್ತಾನೆ. ಭೋಗದ ಪ್ರಥಮ ಸೋಪಾನ ಐಶ್ವರ್ಯ. ಶ್ರೀಮಂತನಾದ ಭರತನಿಗೆ ಅದು ಬೇಕಾದಷ್ಟಿದೆ. ಷಟ್ಖಂಡಗಳ ಭಂಡಾರಕ್ಕೂ ಆತನು ಒಡೆಯ, ನಿಧಿಗಳೂ, ನವರತ್ನಗಳೂ

ಆತನಲ್ಲಿ ಅಡಕವಾಗಿದೆ. ಎರಡನೆಯ ಭೋಗಸಾಧನೆ ಕಾಮ, ಅದಕ್ಕೇನು ಕೊರತೆಯಿಲ್ಲ ಆದರೆ ಕವಿಯು ತನ್ನ ಕಾವ್ಯದಲ್ಲಿ ಧರ್ಮಕ್ಕೆ ಮೊದಲ ಸ್ಥಾನವನ್ನು ಕೊಟ್ಟಿದ್ದಾನೆ. ಅರ್ಥ ಕಾಮಗಳು ಭರತನ ಅಡಿಯಾಳುಗಳಾಗಿದ್ದರೂ ಜೀವ ದಯೆಯ ಮಹಾಧರ್ಮವೂ *ಪಂಚಾಣವ್ರತಗಳೂ ನಡೆಸುತ್ತಿರುವ ಕಥಾನಾಯಕನು ಲೋಕದ ಕೋಲಾಹಲಕ್ಕೆ ಒಳಗಾಗಿಲ್ಲ. ಆತನ ಜೀವನದ ವಾತಾವರಣದಲ್ಲಿ ಧರ್ಮಕ್ಕೆ ಬೇಕಾದಷ್ಟು ಅವಕಾಶವಿದೆ. ಕವಿಯು ತನ್ನ ಕಾವ್ಯದಲ್ಲಿ ಭರತನಿಗೆ ಹಿಂಸಾಕರವಲ್ಲದ ಸಕಲ ಸುಖಗಳನ್ನು ಒದಗಿಸಿ ಕೊಟ್ಟಿದ್ದಾನೆ.

ರತ್ನಾಕರನು ತನ್ನ ಕಾವ್ಯದಲ್ಲಿ ಭರತೇಶನನ್ನು ಗೌರವಿಸಿರುವುದು ಆತನು ರಾಜರ್ಷಿ ಎಂಬ ಭಾವನೆಯಿಂದ. ತನ್ನ ಸಮಕಾಲಿನರಾದ ಹಲವು ರಾಜರ ಜೀವನವು ತನಗೆ ಸರಿಬೀಳದೆ ಭರತನಂತಹ ಆದರ್ಶ ರಾಜನೊಬ್ಬನ ಜೀವನ ಚರಿತೆಯನ್ನು ಜನರ ಕಣ್ಣಿಗೆ ಕಟ್ಟಬೇಕೆಂಬ ಉದ್ದೇಶದಿಂದ ಭರತನ ಪಾತ್ರ ಪ್ರತಿಪಾದನೆಗೆ ಕೈ ಹಾಕಿದ್ದನೆ.

ರತ್ನಾಕರನ ಕಾವ್ಯದಲ್ಲಿ ಭರತನು ಸಕಲ ಶೃಂಗಾರ ಭೋಗಗಳು ದೊರೆಯುವಂತೆ ಚಿತ್ರಿಸಿದ್ದಾನೆ. ಭರತ ಭೋಗದಲ್ಲಿ ತಲ್ಲಿನಾಗಿರುವಂತೆ ಮರುನಿಮಿಷಯದಲ್ಲಿ ಕಣ್ಮುಚ್ಚಿ ಚಿನ್ಮಯ ರೂಪವನ್ನು ಒಳಗಣ್ಣಿನಿಂದ ಕಾಣುತ್ತ ಯೋಗಿಯಾಗುತ್ತಾನೆ. ಭರತನ ಆಳವನ್ನು ಅರಿಯುವುದು ಯಾರಿಗೂ ಅಸಾಧ್ಯ. ಶ್ರೀ ಕೃಷ್ಣನಂತೆ ಭರತನಾ 'ಪದ್ಮಪತ್ರಮಿವಾಂಭಸ' ಕವಿಯು ಭರತನೆ ದಾಂಪತ್ಯ ಜೀವನದಲ್ಲಿ ಶ್ರೀ ಕೃಷ್ಣನಿಗೂ ಮೀರಿದ ಮಡದಿಯರನ್ನು ವಿವಾಹವಾಗಿದ್ದು, ಭರತನು ಹಲವು ಹೆಂಡಿರನ್ನು ಏಕಕಾಲದಲ್ಲಿ ಸಂತೋಷಗೊಳಿಸಿ 'ತವರೂರ ಮರೆಯಿಸಿ ನಿದ್ರೆಯ ತೊರೆಯಿಸಿ ಸವಿಗಳಿನರಿಯಿಸಿ ದಿವರಾತ್ರಿಯೆನ್ನದೆ ಸುಖದೊಳೋಲಾಡಿಸಿ' ಬಿಡತಕ್ಕ ಪ್ರಭಾವವುಳ್ಳವನು.

ಕವಿಯು ತನ್ನ ಮೂಲ ಉದ್ದೇಶವನ್ನು ಈಡೇರಿಸುವ ದೃಷ್ಟಿಯಿಂದ ಭರತ ಬಾಹುಬಲಿಯರ ಯುದ್ಧ ಸಂದರ್ಭದಲ್ಲಿ ಮೂಲದಲ್ಲಿ ಇಲ್ಲರ ರೀತಿಯಿಲ್ಲಿ ಹೊಸ ಬದಲಾವಣೆಗೆ ಮಾಡಿ ಕಾವ್ಯದಲ್ಲಿ ಸುಳಿದು ಹೋಗುವ ಇತರ ವ್ಯಕ್ತಿಗಳೆಲ್ಲರೂ ಬಾಹುಬಲಿ ಒಳಗೊಂಡಂತೆ ಭರತ ಚಕ್ರವರ್ತಿಯ ವಿರುದ್ಧ ಪ್ರತಿಭಟಿಸಿದರೂ ನಂತರ ಅವನ ಅಜ್ಞಾನುವರ್ತಿಗಳಾಗಿ ಅವನ ಸುಖವನ್ನು ಹೆಚ್ಚಿಸುವುದರಲ್ಲಿಯೇ ತಮ್ಮ ಜೀವನದ ಸಾರ್ಥಕ್ಯವನ್ನು ಪಡೆಯುತ್ತಿದ್ದರು.

ಕವಿಯೂ ತನ್ನ ಕಾವ್ಯದಲ್ಲಿ ಧರ್ಮ ಮತ್ತು ಕಾವ್ಯ ಧರ್ಮ ಎರಡನ್ನು ಮೇರೆಯುವ ಕೆಲಸವನ್ನು ಯಶಸ್ವಿಯಾಗಿ ನೆರವೇರಿಸಿದ್ದಾನೆ.

---

* ಅಹಿಂಸೆ, ಅಸ್ಥೇಯ, ಅಪರಿಗ್ರಹ, ಬ್ರಹ್ಮಚರ್ಯ, ಸತ್ಯ

ಅಡಿ ಟಿಪ್ಪಣಿ

1. ಟಿ. ಎಂ. ಮಹದೇವಯ್ಯ ಭರತೇಶ ವೈಭವ ಒಂದು ವಿಮರ್ಶೆ
ಪುಟ 60
- ಟಿ. ಎನ್. ಎಂ. ಸ್ಮಾರಕ ಗ್ರಂಥ ಮಾಲೆ, ತುಮಕೂರು - 1975

2. ತ. ಸು. ಶಾಮರಾಯ ಭರತೇಶ ವೈಭವ ಪುಟ 11, 16, 46
- ತಾ. ವೆಂ. ಸ್ಮಾರಕ ಗ್ರಂಥ ಮಾಲೆ, ಮೈಸೂರು - 1957

3. ಟಿ. ಎಸ್. ಶಾಮರಾವ್ ಭರತೇಶ ವೈಭವ ಸಂಗ್ರಹ ಪುಟ 59, 84, 400, 402,342 (ಪದ್ಯ) 34, 44
- ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ - 1979

4. ಟಿ. ಎನ್. ಎಸ್. ಭ.ವೈ.ಸಂಗ್ರಹ ಪುಟ 59, 84

5. ಟಿ. ಎಂ. ಮಹದೇವಯ್ಯ ಭ.ವೈ. ಒಂದು ವಿಮರ್ಶೆ ಪುಟ 67

6. ಟಿ. ಎಂ. ಮಹದೇವಯ್ಯ ಭ.ವೈ. ಒಂದು ವಿಮರ್ಶೆ ಪುಟ 81, 82

ಅಧ್ಯಾಯ - ಆರು

ಇತರ ಕಾವ್ಯಗಳಲ್ಲಿ ಬಾಹುಬಲಿ

ಹತ್ತನೇ ಶತಮಾನದ ಕನ್ನಡದ ಆದಿಕವಿಯಾದ ಪಂಪನ ಕಾವ್ಯದಲ್ಲಿ ರಚಿತವಾಗಿರುವ ಹಾಗೂ ಹದಿನಾರನೇಯ ಶತಮಾನದ ರತ್ನಾಕರವರ್ಣಿಯ 'ಭರತೇಶ ವೈಭವ' ಕಾವ್ಯದಲ್ಲಿ ರಚಿತವಾಗಿರುವ ಬಾಹುಬಲಿಯನ್ನು ಹೊರತು ಪಡಿಸಿ ನೋಡಿದ ಅನೇಕ ಕನ್ನಡ ಹಾಗೂ ಸಂಸ್ಕೃತ ಕಾವ್ಯಗಳು ಹಾಗೂ ಕಥೆಗಳಲ್ಲಿ ಬಾಹುಬಲಿಯ ಪ್ರಸಂಗವನ್ನು ತಮ್ಮದೇ ರೀತಿಯಲ್ಲಿ ತಮ್ಮದೇ ಶೈಲಿಯಲ್ಲಿ ಹಲವರು ತಮ್ಮ ಕಾವ್ಯಗಳಲ್ಲಿ ಚಿತ್ರಿಸಿದ್ದಾರೆ.

ಚಾವುಡರಾಯ ಪುರಾಣದ ಆದಿಪುರಾಣ ಭಾಗದಲ್ಲಿ ಬರುವ ಬಾಹುಬಲಿ :

ಚಾವುಂಡರಾಯ ಪುರಾಣದಲ್ಲಿ ಆದಿಪುರಾಣದ ಕಥಾವಿಸ್ತಾರವನ್ನು ಕವಿ ಸಂಕ್ಷಿಪ್ತರೂಪದಲ್ಲಿ ಸಂಗ್ರಹಿಸಿದ್ದಾನೆ. ಮೂಲತಃ ಬಾಹುಬಲಿಯ ಪಾತ್ರವನ್ನು ನೋಡುವಾಗ ಬಾಹುಬಲಿಯ ಪಾತ್ರಕ್ಕೆ ಪೂರಕವಾಗಿ ಭರತನ ಪಾತ್ರವನ್ನು ವಿವರಿಸುವುದು ಸಾಮಾನ್ಯ. ಚಾವುಂಡರಾಯ ಪುರಾಣದಲ್ಲಿ ಆದಿಪುರಾಣ ಭಾಗದಲ್ಲಿ ಭರತ ಬಾಹುಬಲಿ ಯುದ್ಧ ಸಂದರ್ಭದಲ್ಲಿ ಎಲ್ಲಾ ಕಾವ್ಯಗಳಲ್ಲಿ ಬರುವ ರೀತಿಯಂತೆ ಭರತನ ಚಕ್ರರತ್ನವು ಪುರ ಪ್ರವೇಶಿಸದೆ ನಿಲ್ಲುವುದು ಅದಕ್ಕೆ ಪುರೋಹಿತರು ಹೇಳುವ ನುಡಿ ಭರತನು ತನ್ನ ತಮ್ಮಂದಿರಿಗೆ ತನಗೆ ಬಂದು ಎರಗುವಂತೆ ಶಾಸನವನ್ನು ಕಳುಹಿಸಿದನು. ಅಣ್ಣನ ಮಾತಿಗೆ ನೊಂದ ನೂರು ಜನ ತಮ್ಮಂದಿರು ತಂದೆಯ ಬಳಿ ದೀಕ್ಷೆಯನ್ನು ಪಡೆಯುವುದು, ಈ ಸಂಗತಿಗಳು ಭರತ - ಬಾಹುಬಲಿಯ ಪ್ರಸಂಗ ಪ್ರಾರಂಭವಾಗುವವರೆಗೂ ಎಲ್ಲಾ ಕಾವ್ಯಗಳಲ್ಲಿಯೂ ಸಾಮಾನ್ಯವಾಗಿ ಮೂಡಿಬರುವುದು. ಆದರೆ ಬಾಹುಬಲಿಯ ಪಾತ್ರದ ಸಂದರ್ಭಕ್ಕೆ ಬಂದಾಗ ಬಾಹುಬಲಿಯ ಪಾತ್ರವನ್ನು ತಮ್ಮ ಕಾವ್ಯಗಳಲ್ಲಿ ಚಿತ್ರಿಸುವಾಗ ಮೂಲಕ್ಕಿಂತ ತಮ್ಮದೇ ಬದಲಾವಣೆಯನ್ನು ತಂದಿದ್ದಾರೆ. ಭರತನು ನೂರು ಜನ ತಮ್ಮಂದಿರಿಗೆ ಶಾಸನವನ್ನು ಕಳುಹಿಸಿದರೆ! ಬಾಹುಬಲಿಯ ಬಳಿಗೆ ತಮ್ಮ ಧೂತರನು ಕಳುಹಿಸುವುದರಿಂದ ಬಾಹುಬಲಿಯ ಸಾಮರ್ಥ್ಯದ ಅರಿವು ಕಾವ್ಯದಲ್ಲಿ ಎದ್ದು ಕಾಣುತ್ತದೆ. ಅಂತೆಯೆ ಚಾವುಂಡರಾಯ ಪುರಾಣದಲ್ಲಿ ದೂತರು ತಂದ ಪತ್ರದ ಒಕ್ಕಣೆಯನ್ನು ಕೇಳಿದಂತೆ ಬಾಹುಬಲಿಯ ಅತಿ ಕೋಪವನ್ನು ವ್ಯಕ್ತಪಡಿಸುತ್ತಾನೆ. ನಂತರ ಒಳಗೆ ಬಂದಂತಹ ದೂತನಿಗೆ ತಾನು ತನ್ನ ಅಣ್ಣನೊಂದಿಗೆ ಯುದ್ಧಕ್ಕೆ ಸನ್ನದ್ದವಾಗುತ್ತಿರುವುದಾಗಿ ತಿಳಿಸಿ ಯುದ್ಧಕ್ಕೆ ತನ್ನ

ಅಣ್ಣನಾದ ಭರತನಿಗೆ ಆಹ್ವಾನವನ್ನು ಕಳುಹಿಸುತ್ತಾನೆ. ಎರಡು ಕಡೆಯ ಸೈನ್ಯವು ಯುದ್ಧಕ್ಕೆ ಎದುರುಗೊಂಡಾಗ ಮಂತ್ರಿಗಳಿಂದ ದ್ವಂದ್ವ ಯುದ್ಧದ ಸಂದೇಶವನ್ನು ನಿಯಮಿಸಿದರು. ಮೂರು ವಿಧದ ದ್ವಂದ್ವ ಯುದ್ಧದಲ್ಲಿ ಭರತನಿಗೆ ಸೋಲಾಗುವುದು ಭರತನು ಕುಪಿತಗೊಂಡ ಬಾಹುಬಲಿಯ ಮೇಲೆ ಚಕ್ರರತ್ನವನ್ನು ಪ್ರಯೋಗಿಸಿದಾಗ ಬಾಹುಬಲಿಗೆ ಭೂಮಿಯ ಹಾಗೂ ಒಡೆತನದ ಮೇಲೆ ವೈರಾಗ್ಯ ಬಂದು ತಪಸ್ಸನ್ನು ಕೈಗೊಳ್ಳುವನು. ಈ ಪ್ರಸಂಗಗಳು ಸಾಮಾನ್ಯವಾಗಿ ಎಲ್ಲಾ ಕಾವ್ಯಗಳೆಲ್ಲವೂ (ಈ ಕತೆಯನ್ನು ಒಳಗೊಂಡು) ಬಂದ್ದಿದರೂ ಬಾಹುಬಲಿಯನ್ನು ಚಿತ್ರಿಸುವಾಗ ಯುದ್ದದಲ್ಲಿ ಕ್ರಮವಾಗಿ ಜಯಿಸುತ್ತಾ ಬಂದ ಬಾಹುಬಲಿ ಮಲ್ಲಯುದ್ದದಲ್ಲಿ ''ಫಲವಾಯಂಗಳೊಳ್ ಪೊಣರ್ದು'' ಶಾಂತವಾದಾಗ ''ಭರತನಂ ಪಿಡಿದೆತ್ತಿ ನೆಲಕ್ಕಿಕ್ಕುವುದುಂ'' ಎಂದು ಹೇಳಿ ಬಾಹುಬಲಿಯ ಪಾತ್ರದ ಔನ್ನತ್ಯವನ್ನು ದಿಢೀರೆಂದು ಇಳಿಸಿಬಿಟ್ಟಿದ್ದಾನೆ. ಭರತನು ನಾಚಿಕೆಯಿಂದ ನಿಂತಾಗ ಬಾಹುಬಲಿಯ ಮಾತಿನಲ್ಲಿ ಭರತನಿಗೆ ''ಅಣ್ಣಾ, ಸಿಗ್ಗನುಳಿವುದು ನೀನೀ ಸಾಮ್ರಾಜಂಮನಾವಗಂ ಕೈಕೊಳ್ಳದೆನಗಿದೇನಂ ಬಾರ್ತೆಯಲ್ಲಿ'' ಎಂಬ ಮಾತಿನ ರೂಪವು ಮೂಲದಲ್ಲಿ ಇರುವಂತಹ ಆಕರ್ಷಣೆಯನ್ನು 'ನೆಲಸುಗೆ ನಿನ್ನ ವಕ್ಷದೊಳೆ' ಎಂಬ ಮಾತಿನ ಹರಿತತೆಯನ್ನು ಉಳಿಸಿಲ್ಲ. ಬಾಹುಬಲಿಯಿಂದ ತೀರಾ ಸಾಮಾನ್ಯವಾಗಿ ಈ ಮಾತನ್ನು ನುಡಿಸಿದ್ದಾನೆ.

ಬಾಹುಬಲಿಯ ತಪಸ್ಸು ಆಚರಿಸುವ ಕಾಲದಲ್ಲಿ ಬಾಹುಬಲಿಯ ಮೈಯಲ್ಲಿ ಬಳ್ಳಿಗಳಿಂದ ತುಂಬಿ ಹೋಗಿದ್ದಾಗ ಬ್ರಾಹ್ಮೀ ಮತ್ತು ಸುಂದರಿಯರ ವೇಷ ಧರಿಸಿದ ಖೇಚರಿಯರು ಅವನ ಮಾನಕಷಾಯವನ್ನು ನಿವಾರಿಸುವ ಸನ್ನಿವೇಶಗಳು ಚಾವುಂಡ ಪುರಾಣ ಕಾವ್ಯದಲ್ಲಿನ ಬಾಹುಬಲಿಯ ಪಾತ್ರ ರಚನೆಯಲ್ಲಿ ಕಥಾ ಸನ್ನಿವೇಶದಲ್ಲಿ ಕವಿಯ ಸೋಬಗನ್ನು ಕಾಣಬಹುದು.

ಹಸ್ತಿ ಮಲ್ಲನ ಪೂರ್ವ ಪುರಾಣ :

ಬಾಹುಬಲಿಯನ್ನು ಹಸ್ತಿಮಲ್ಲನು ತನ್ನ ಪೂರ್ವ ಪುರಾಣ ಕೃತಿಯಲ್ಲಿ ನಿರೂಪಿಸುವಾಗ ಆದಿಪುರಾಣಕ್ಕೆ ನೇರವಾಗಿ ಋಣಿಯಾಗಿದ್ದಾನೆ. ಅಲ್ಲಿರುವ ವಿಸ್ತಾರವಾದ ಭರತ - ಬಾಹುಬಲಿಯರ ಕಥಾ ಚೌಕಟ್ಟನ್ನು ಸರಳ ಗದ್ಯದ ರೂಪದಲ್ಲಿ ಚಾವುಂಡರಾಯ ಪುರಾಣದಂತೆ ಸಂಕ್ಷಿಪ್ತಗೊಳಿಸಿದ್ದಾನೆ. ಚಾವುಂಡರಾಯ ಪುರಾಣದಲ್ಲಿಲ್ಲದ ಕೆಲವು ವಿವರಗಳನ್ನು ನೀಡಲಾಗಿದೆ. ಭರತನು ತನ್ನ ತಮ್ಮಂದಿರನ್ನು ತನಗೆ ಎರಗುವಂತೆ ಹೇಳಿ ದೂತರನ್ನು ಕಳುಹಿಸಿದಾಗ ತಮ್ಮಂದಿರ

ಬಳಿ ಬಂದ ದೂತರು "ನೀವಿನಿಬರುಂ ಪಿರಿಯಣ್ಣನಾದ ಚಕ್ರವರ್ತಿಗೆರಗಿ ಅವನೊಡಗೂಡಿ ರಾಜಲಕ್ಷ್ಮಿಯನನುಭವಿಸುವುದು" [1] ಎಂಬ ಮಾತಿನಿಂದ ಹಾಗೂ ಬಾಹುಬಲಿಯ ಮುಂದೆ ದೂತನು ಹೇಳುವ ರೀತಿ "ಸ್ವಾಮಿ ನಿನ್ನಣ್ಣನಪ್ಪ ಚಕ್ರೇಶ್ವರಂಗೆರಗಿಯನೊಳ್ಕೂಡಿ ಸಕಲ ಸಾಮ್ರಾಜ್ಯ ಸುಖಮನನುಭವಿಸು" ಎಂದು ಹೇಳುವ ಮಾತಿನಿಂದ ಸಾಮ್ಯತೆ ಬರುತ್ತದೆ. ಆದರೆ ಈ ಮಾತು ಆದಿಪುರಾಣದ ದೂತರು ಹೇಳುವ ಮಾತಿಗೆ ಹೊಲಿಸಿದರೆ ಇದು ಸಪ್ಪೆ ಎನಿಸುತ್ತದೆ.

ಬಾಹುಬಲಿಯಿಂದ ತನ್ನ ಅಣ್ಣನಾದ ಭರತನನ್ನು ವಿರೋಧಿಸುವ ಕುಂಬರ ಚಕ್ರದ ಗರ್ವದಿಂದೆನ್ನ ತನಗೆರಲವೆಳ್ದಟ್ಟಿದನೆ? ಎಂಬ ಬಾಹುಬಲಿಯ ಮಾತುಗಳಿಂದ ಸ್ವಷ್ಟವಾಗುತ್ತದೆ. ಹಸ್ತಿಮಲ್ಲನು ತನ್ನ ಕಾವ್ಯದಲ್ಲಿ ಬಾಹುಬಲಿಯನ್ನು ಉತ್ಕೃಷ್ಟಕೆ ಏರಿಸುವ ಪ್ರಯತ್ನವನ್ನು ಮಾಡಿದ್ದಾನೆ. ಬಾಹುಬಲಿಯ ವೈರಾಗ್ಯಪರನಾಗಿ ನಿಂತಾಗ ಭರತನು ಬಾಹುಬಲಿಗೆ "ತಪಂಗೊಳ್ಳಲಾಗದು ಎನ್ನೊಡನೆ ರಾಜ್ಯಸುಖಮನನುಭವಿಸೆಂದು" ಹೇಳಿ "ತಮ್ಮನ ಪಾದಮಂ ಕಟ್ಟಿಕೊಂಡು ಶೋಕಿಸಿ ತಾನಾಪ್ರಕಾರದಿಂದಣ್ಣ ನನೊಡಂಬಡಿಸಿ" ಈ ಮಾತಿನಿಂದಾಗಿ ಬಾಹುಬಲಿಯ ಸ್ಥಾನ" ಉಲ್ಬಣವಾಗುವುದು ಎದ್ದು ಕಾಣುತ್ತದೆ. ಬಾಹುಬಲಿಯ ಘೋರ ತಪಸ್ಸಿನ ವಿವರಣೆಯ ಸಂದರ್ಭವನ್ನು ಬೇರೆ ಕಾವ್ಯಗಳಲ್ಲಿರುವ ಖೇಚರಿಯರು ಬಳ್ಳಿಯನ್ನು ಬಿಡಿಸಿದ ಸಂದರ್ಭವಿಲ್ಲ. ತಪಸ್ಸಿನಲ್ಲಿ ನಿಂತಿದ್ದ ಬಾಹುಬಲಿಯ ಮಾನಃಕಷಾಯ ನಿವಾರಣಾ ಸಂದರ್ಭದಲ್ಲಿ ಚಿಕ್ಕ ಚಿಕ್ಕ ವಾಕ್ಯಗಳೊಂದಿಗೆ ನಾಟಕೀಯ ದಾಟಿಯಲ್ಲಿ ವಿವರಿಸಿದ್ದಾನೆ. ಬಾಹುಬಲಿಯು ಮನೀಶ್ವರರಿಗೆ ಮಿಗಿಲಾಗಿ ತಪಸ್ಸು ಮಾಡಿದರು. ಕೇವಲಜ್ಞಾನ ಲಭಿಸದಿರುವ ಸಂಗತಿಯನ್ನು ತಿಳಿದಂತಹ ಭರತನು ಬಾಹುಬಲಿಯ ಪಾದಗಳನ್ನು ಪೂಜಿಸಿ "ಎಲೆ ಸ್ವಾಮಿ ನೀಂ ಕೊಡೆ ನನಗೆ ಬಂದುದಲ್ಲದೆ ಬೇರೊಂದು ರಾಜ್ಯಮುಂಟೆ? ಅದು ಕಾರಣಂ ನಿನ್ನ ಗುಣವನೆ ಭಾವಿಸು ಬೇರೊಂದು ವಿಕಲ್ಪಮಂ ನೆನೆಯಲಾಗದು" ಎಂದು ಭರತನು ಬಾಹುಬಲಿಯನ್ನು ಬಿನ್ನಹಿಸುವಂತಹ ನಾಟಕೀಯತೆಯ ದಾಟಿ ಸರಳ ಸುಂದರವಾಗಿ ಮೈಗೂಡಿ ಬಂದಿದೆ.

ಪುರದೇವ ಚರಿತದಲ್ಲಿ ಬಾಹುಬಲಿ :

ಶಾಂತಿಕೀರ್ತಿಯ ರಚಿಸಿರುವ ಪುರದೇವ ಚರಿತೆಯಲ್ಲಿ ಕವಿಯು ಚಾವುಂಡರಾಯ ಪುರಾಣದಲ್ಲಿ ಬರುವಂತೆ ಬಾಹುಬಲಿಯ ಪಾತ್ರವನ್ನು ಯತಾವತ್ತಾಗಿ ಚಿತ್ರಸಿದ್ದಾನೆ. ಮೂರು ಯುದ್ಧಗಳಲ್ಲಿ ಭರತನಿಗೆ ಸೋಲಾಗಿ, ಬಾಹುಬಲಿಯು ಜಯವನ್ನು ಗಳಿಸುತ್ತಾನೆ.[2] ಆದರೆ

ಮಲ್ಲಯುದ್ಧದಲ್ಲಿ ಬಾಹುಬಲಿಯ ಭರತನನ್ನು ನೆಲಕ್ಕೆ ಇಕ್ಕಲು ಏತ್ತಿದಾಗ, ಸಿಟ್ಟಿನಿಂದ ಭರತ ಚಕ್ರರತ್ನ ಪ್ರಯಾಣಿಸುವ ಸಂದರ್ಭವನ್ನು ಸೋಗಸಾಗಿ ಚಿತ್ರಿಸಿದ್ದಾನೆ. ನಂತರ ಬಾಹುಬಲಿಯ ಪ್ರಸಂಗವನ್ನು ತನ್ನ ಕಥೆಯಲ್ಲಿ ಸೊಗಸಾಗಿ ರಸಮಯವಾಗಿ ಚಿತ್ರಿಸಿದ್ದಾನೆ.

ಬೊಮ್ಮಣ್ಣನ ಆದಿಪರಮೇಶ್ವರ ಯಕ್ಷಗಾನದಲ್ಲಿ ಬಾಹುಬಲಿ :

ಆದಿಪರಮೇಶ್ವರ ಯಕ್ಷಗಾನ ಒಂದು ಶುದ್ಧ ಧಾರ್ಮಿಕವಾಗಿದ್ದು, ಜಾನಪದ ಶೈಲಿಯನ್ನು ಒಳಗೊಂಡಂತಹ ಸುಂದರ ಕಥೆ. ಇಲ್ಲಿ ಭರತ ಬಾಹುಬಲಿಯರ ಯುದ್ಧ ಸಂದರ್ಭವನ್ನು ತನ್ನ ಕಾವ್ಯದಲ್ಲಿ ರಸಮಯವಾಗಿ ಚಿತ್ರಿಸುವ ಪ್ರಯತ್ನವನ್ನು ಮಾಡಿದ್ದಾನೆ. ಭರತನನ್ನು ಬಂದು ಕಾಣುವಂತೆ ಬಾಹುಬಲಿಯು ಬಳಿಗೆ ಧೂತರನ್ನು ಕಳುಹಿಸಿದಾಗ ಬಾಹುಬಲಿಯು ಅವರನ್ನು ತಿರಸ್ಕಿರಿಸು ವುದರಿಂದ ಮಂತ್ರಿಗಳೆ ಬಾಹುಬಲಿಯ ಬಳಿಗೆ ಹೋಗಿ ವಿನಂತಿಸುವುದರಿಂದಲೂ ಬಾಹುಬಲಿ ಅಚಲವಾಗಿ ನುಡಿಯುವ 'ಮಾತುಗಳು' ಬಾಹುಬಲಿಯ ವಿರೋದವು ವ್ಯಕ್ತವಾಗಿದೆ. ಇದರಿಂದ ಭರತನ ನನ್ನೊಡನೆ ಯುದ್ಧ ಸಲ್ಲದು ಎಂದು ತನ್ನ ನಾಲ್ಕು ಧೂತರನ್ನು ಮತ್ತೆ ಕಳುಹಿಸುತ್ತಾನೆ. ಇಷ್ಟು ಪರಿ ಬೇಡಿದರೂ ಬಾಹುಬಲಿಯಲ್ಲಿ ತನ್ನ ಪೌರುಷದ ಆತ್ಮಾಭಿಮಾನವಿದ್ದು ಯುದ್ಧಕ್ಕೆ ಸನ್ನದ್ದನಾಗಲು ಭರತನಿಗೆ ಆತನ ಧೂತರಿಂದಲೆ ತಿಳಿಸಿ ಕಳುಹಿಸುತ್ತಾನೆ. ಬಾಹುಬಲಿಯ ಪೌರಷಕ್ಕೆ ತಕ್ಕ ಮಾತುಗಳನ್ನು ಆಡಿದ್ದಾನೆ. ಯುದ್ಧದ ಸಂದರ್ಭದಲ್ಲಿ ಬಾಹುಬಲಿಯನ್ನು ಗೆಲ್ಲಲು ಅಸಾಧ್ಯವೆಂದು ತಿಳಿದು ಮರಳಿ ತಮ್ಮನಿಗೆ ತನ್ನ ದಯನೀಯ ಸ್ಥಿತಿಯನ್ನು ಬಣ್ಣಿಸಿದರೂ ಬಾಹುಬಲಿಯ ಯುದ್ಧದ ಉತ್ಸಾಹ ಕಥೆಯನ್ನು ವಿವರಿಸಿದ್ದಾನೆ. ಬಾಹುಬಲಿ ಮಂತ್ರಿಗೆ ಹೇಳಿದ ಮಾತಿನ ಪರಿ ಹೀಗಿದೆ.

ಚಕ್ರಿಯಾಗಲಿ ಚಕ್ರವಾಗಲಿ ಶಕ್ರನಾಗಲಿ ಬಂದುಯನ್ನಯ
ವಿಕ್ರಮವನು ವಿಚಾರಿಸಲಿ ಪರಾಕ್ರಮದೊಳು
ಎರಗಿದಲ್ಲದೆ ಬಿಡೆವುಮೆಂಬಿ ಬಿರಿಯ ಬಿಂಕವ ಮಾಣೆ ನಿಮ್ಮಂ
ಮಿರವು ದುರಮೊಳಕಾಣಬೊಪ್ಪುದು ತೆರಳಿಮನಲು [1]

ಈ ಮಾತಿನಲ್ಲಿ ಅಲ್ಲಿಯ ಸಂಭಾಷಣೆ ಸಹಜವಾಗಿ ಕಂಡುಬರುತ್ತದೆ. ಯುದ್ಧಾ ನಂತರದ ಸಂದರ್ಭದಲ್ಲಿ ಯುದ್ಧದಿಂದ ಈ ಭೂಮಿಯ ಆಸೆಯಿಂದ ಅಣ್ಣನೊಂದಿಗೆ ಯುದ್ಧ ಮಾಡುವಂತಾಯಿತಲ್ಲ ಎಂದು ಬೇಸರಗೊಂಡು ಪಶ್ಚಾತ್ತಾಪಪಟ್ಟು ಬಾಹುಬಲಿ ಅಣ್ಣನನ್ನು

ಕುರಿತು ಆಡುವ ಮಾತುಗಳನ್ನು ಹೀಗೆ ಚಿತ್ರಿಸಿದ್ದಾನೆ.

ಚಿಣ್ಣನವಗುಣವನು ನೋಡದೆ ತಣ್ಣಸೈ ಕೋಪಾಗ್ನಿಯ ಶಾಂತರಸದಿ
ತೋರಿದೆನು ಸಾಹಸವ ಕಲಿತುದು ತೋರುವೊಲು ಬಾಲಂಗುರು ಉಪಾಧ್ಯಾಯರಿಗೆ
ನಿನ್ನನುಜನೆಂದಿರಿದು ಚಕ್ರಪ್ರಸನ್ನಮಾದುದು ಮಿಕ್ಕಿನಾ
ಕಿನ್ನರಾಮರರಿದಿರೆ ಸದ್ಗುಣರನ್ನ ಶ್ರೀ ಜಿನ ದೀಕ್ಷೆಗೆ ಕಳುಹಿಸೆನ್ನ [3]

ಈ ಮೇಲಿನ ಮಾತುಗಳಲ್ಲಿ ಪಂಪನ ಪ್ರಭಾನ ಕಂಡು ಬಂದರೂ ಸಹ ಕವಿ ತನ್ನದೇ ಆದ ಉಪಮಾ ವಿಧಾನವನ್ನು ಅಳವಡಿಸಿದ್ದಾನೆ. ಜಾನಪದಿಯ ದಾಟಿಯ ಈ ವಿವರಣೆಯಲ್ಲಿ ಬಾಹುಬಲಿಯ ಆತ್ಮೀಯ ದಾಟಿಯನ್ನು ಗುರುತಿಸಬಹುದಾಗಿದೆ.

ಬೊಮ್ಮಣ್ಣ ಕವಿಯು ಅದಿ ತೀರ್ಥಂಕರ ಚರಿತ್ರೆಯಲ್ಲಿ ಇದುವರೆಗೂ ಕಂಡು ಬಾರದ ಒಂದು ಹೊಸ ಸಂಗತಿಯನ್ನು ಬಾಹುಬಲಿಯು - ಭರತನ ಯುದ್ಧ ಸಂದರ್ಭದಲ್ಲಿ ಅಳವಡಿಸಿ ಕೊಂಡಿದ್ದಾನೆ. ಈ ಅಣ್ಣ - ತಮ್ಮಂದಿರ ನಡುವೆ ಆದುದು ಶರಸಂಧಾನ ಯುದ್ಧವೆಂದು ಹೇಳಿದ್ದಾನೆ. ಈ ಸನ್ನಿವೇಶವನ್ನು ಸಾಕಷ್ಟು ದೀರ್ಘವಾಗಿ ವಿವರಸಿದ್ದಾನೆ.

ಒಟ್ಟಾರೆಯಾಗಿ ಹೇಳುವುದಾದರೆ ಭರತ ಬಾಹುಬಲಿಯ ಯುದ್ಧ ಸಂದರ್ಭ ಅನೇಕ ಕವಿ ಜನಮನವನ್ನು ಸೆಳೆಯುವ ಭಾಗವಾಗಿದೆ. ಭಾವ ಕಲಾ ಮೇಳವಾಗಿದೆ. ಅಣ್ಣನ ಅಹಂಕಾರವನ್ನು ತಮ್ಮನ್ನು ತೊಲಗಿಸುತ್ತಾನೆ. ಇಂತಹ ಸಂದರ್ಭವನ್ನು ಕುರಿತು ಅನೇಕ ಕವಿ ವಾಗ್ಮಯರು ತಮ್ಮದೇ ಶೈಲಿಯಿಲ್ಲಿ ವಿಶೇಷವಾಗಿ ತಮ್ಮ ಕಾವ್ಯದಲ್ಲಿ ತಂದಿದ್ದಾರೆ.

ಅಡಿ ಟಿಪ್ಪಣಿ

1. ಡಾ. ಸರಸ್ವತಿ ವಿಜಯ ಕುಮಾರ್ ಕನ್ನಡ ಆದಿತೀರ್ಥಂಕರರ ಚರಿತೆಗಳು

   ಪುಟ 351 - 355 - ಸವಿ ಪ್ರಕಾಶನ, ಮೈಸೂರು - 1994

2. ಹಂಪ ನಾಗರಾಜಯ್ಯ, "ಬಾಹುಬಲಿ" [ಪುಟ 44] ರಾಜ್ಯ ತ್ಯಾಗದ ವಿಸ್ತಾರವಾಗಿ
   (ಹೆಚ್ಚಿನ ವಿವರಕ್ಕೆ ನೋಡಿ)
   - ಸಿ.ವಿ.ಜಿ ಪಬ್ಲಿಕೇಷನ್ ಬೆಂಗಳೂರು - ೨೦೦೫

3. ಡಾ. ಸರಸ್ವತಿ ವಿಜಯ ಕುಮಾರ್, ಕ.ಆ.ಚ. ಪುಟ 353,

ಉಪಸಂಹಾರ :

ಕನ್ನಡ ಸಾಹಿತ್ಯ ಪರಂಪರೆಯನ್ನು ನೋಡಿದಾಗ ಅನೇಕ ಧರ್ಮಗಳು ಸಾಹಿತ್ಯ ರಚನಗೆ ಪ್ರೇರಣೆಯನ್ನು ನೀಡಿವೆ. ಹಾಗೆಯೇ ಈ ಧರ್ಮದ ಮಹಾನ್ ವ್ಯಕ್ತಿಗಳು ಕಥೆಗಳು ಕನ್ನಡ ಸಾಹಿತ್ಯದ ಕಥಾವಸ್ತುವಾಗಿ ಬೆಳೆದು ಬಂದಿವೆ. ಹತ್ತನೇಯ ಶತಮಾನದಲ್ಲಿ ಜೈನ ಧರ್ಮ ಪ್ರಚಲಿತವಾಗಿದ್ದು, ಈ ಸಂದರ್ಭದಲ್ಲಿ ಇದ್ದ ಕವಿಗಳೆಲ್ಲಾ ಜೈನರಾಗಿದ್ದರು. ಈ ಅವಧಿಯಲ್ಲಿಯೇ ಜೈನರ ಶ್ರೇಷ್ಠ ಮೂರ್ತಿ ಶಿಲ್ಪವಾದ ಬಾಹುಬಲಿಯ ವಿಗ್ರಹವನ್ನು ಚಾವುಂಡರಾಯನು ಶ್ರವಣಬೆಳಗೊಳದಲ್ಲಿ ನಿರ್ಮಿಸಿದ್ದನು.

ಚಾವುಂಡರಾಯನಿಂದ ನಿರ್ಮಾಣವಾದ ಈ ಬಾಹುಬಲಿಯ ಮೂರ್ತಿಯನ್ನು ಕುರಿತಂತಹ ಕಾವ್ಯಗಳು ಹಿಂದೆಯ ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿ ಹಾಗೂ ಕನ್ನಡ ಆದಿಕವಿ ಪಂಪನಿಂದ ರಚಿತವಾದ 'ಆದಿಪುರಾಣ' ಎಂಬ ಕಾವ್ಯದಲ್ಲಿ ನಿರೂಪಿತವಾಗಿದೆ. ಈ ಇಬ್ಬರೂ ತನ್ನ ಕಾವ್ಯದ ನಾಯಕನಾದ ಆದಿನಾಥನ ಜೊತೆಯಲ್ಲಿ ಆವನ ಮಗನಾದ ಬಾಹುಬಲಿಯನ್ನು ಪ್ರತಿನಾಯಕನಾಗಿ ಮಾಡಿಕೊಂಡು ಕಾವ್ಯ ರಚಿಸಿದ್ದಾನೆ.

ಪಂಪನಿಂದ 'ಆದಿಪುರಾಣ' ಕಾವ್ಯ ರಚಿತವಾದ ನಂತರ ಬಂದಂತಹ ಉತ್ತರಕಾಲಿನ ಕಾವ್ಯಗಳಲ್ಲಿ ಆದಿಪುರಾಣ, ಕಥೆಯನ್ನು ಒಳಗೊಂಡಿದ್ದು, ಅವರ ಕಾವ್ಯದಲ್ಲಿರುವ ಬಾಹುಬಲಿಯ ಪಾತ್ರವನ್ನು ಯಾವ ರೀತಿಯಲ್ಲಿ ಚಿತ್ರಿಸಿದ್ದಾರೆ ಎಂಬುದನ್ನು ನೋಡಿದಾಗ ಕೆಲವರು ಜಿನಸೇನ ಮತ್ತು ಪಂಪರ, ಪೂರ್ವಪುರಾಣ ಹಾಗೂ ಆದಿಪುರಾಣದ ಕಥೆಯಂತೆ ಚಿತ್ರಿಸಿದ್ದರೆ ಜೈನ ಧರ್ಮದಲ್ಲಿ ಬಿಂಬಿತವಾಗಿರುವ ಶ್ವೇತಾಂಬರ ಮತ್ತು ದಿಗಂಬರ ಎಂಬ ಎರಡು ಪಂಗಡಗಳಿವೆ. ಇವು ತಮ್ಮ ತಮ್ಮ ಪರಂಪರೆಯಲ್ಲಿ ಬಾಹುಬಲಿಯ ಕಥೆಯನ್ನು ತಿಳಿಸುತ್ತವೆ. ಅದರಲ್ಲೂ ಶ್ವೇತಾಂಬರರ ಸಂಪ್ರದಾಯ ವಿಶೇಷವಾಗಿದೆ. ಭರತ - ಬಾಹುಬಲಿಯರ ಯುದ್ಧ ಸಂದರ್ಭ ದಲ್ಲಿನ ಬಾಹುಬಲಿ ಪಾತ್ರವನ್ನು ಚಿತ್ರಿಸಿರುವ ಸಂದರ್ಭದ ಭಾಗವನ್ನು ವಿವರಿಸಲಾಗಿದೆ.

ಈ ಪ್ರಬಂಧದಲ್ಲಿ ಪ್ರಮುಖವಾಗಿ ಅಡಕವಾಗಿರುವ ಅಂಶಗಳೆಂದರೆ ಪಂಪ ಮತ್ತು ರತ್ನಾಕರ ವರ್ಣಿಯರ ಕಾವ್ಯದಲ್ಲಿ ಭರತ - ಬಾಹುಬಲಿಯರ ನಡುವಿನ ಯುದ್ಧ, ಸಂದರ್ಭದಲ್ಲಿ ಕವಿಗಳು ತಮ್ಮದೇ ಆದ ರೀತಿಯಲ್ಲಿ ಮಾಡಿಕೊಂಡಿರುವ ಬದಲಾವಣೆಯ ಸಾರವನ್ನು ತಿಳಿಸಲಾಗಿದೆ.

ಚಂಪೂ ಶೈಲಿಯಲ್ಲಿ ಆದಿಪುರಾಣ ಕಾವ್ಯಯವನ್ನು ರಚನೆ ಮಾಡಿರುವ ಪಂಪನು ಯುದ್ಧ ಸನ್ನಿವೇಶದಲ್ಲಿ ಇಬ್ಬರೂ ಮಹಾನ್ ವೀರರು ರಣಭೂಮಿಯಲ್ಲಿ ಎದುರು ನಿಲ್ಲುತ್ತಾರೆ. ಇವರ ನಡುವಿನ ಕಾಳಗದಲ್ಲಿ ಮಂತ್ರಿಗಳ ಸಲಹೆಯಂತೆ ರಾಜರಿಬ್ಬರ ಮನವೊಲಿಸಿ ಧರ್ಮಯುದ್ಧ ವಾಗುಂತೆ ಮಾಡಿದ್ದಾನೆ. ಪಂಪನು ತಾನೇ ಹೇಳಿಕೊಂಡಿರುವಂತೆ ಕವಿಯೂ ಹೌದು ಕಲಿಯೂ ಹೌದು ಆದ್ದರಿಂದ ಇವನು ಭರತ ಬಾಹುಬಲಿಯರ ನಡುವೆ ಸಂಪೂರ್ಣವಾಗಿ ಯುದ್ಧ ನಿವಾರಿಸುವ ಗೋಜಿಗೆ ಹೋಗುವುದಿಲ್ಲ.

ಪಂಪನು ಉತ್ತಮ ಕವಿಯಾಗಿದ್ದು ಉತ್ತಮ ದಂಡನಾಯಕನಾಗಿದ್ದರಿಂದ ಭರತ ಬಾಹುಬಲಿಯರ ನಡುವೆ ಮೂರು ಧರ್ಮಯುದ್ಧಗಳನ್ನು ಮಾಡಿಸಿ ಇವರ ಭುಜಬಲದ ಪರಾಕ್ರಮ ಎಲ್ಲರಿಗೂ ತಿಳಿಯುವಂತೆ ಮಾಡಿದ್ದಾನೆ. ಯಾವುದೇ ರಕ್ತಪಾತವಾಗದಂತೆ ದೃಷ್ಟಿ, ಜಲ ಯುದ್ಧ ಮಲ್ಲಯುದ್ದಗಳನ್ನು ಮಾಡಿಸುತ್ತಾನೆ.

ಪಂಪನ ಮೂಲ ಉದ್ದೇಶ ಪರಾಕ್ರಮಿಯಾದ ಬಾಹುಬಲಿಯನ್ನು ಭರತನಿಗಿಂತ ಶ್ರೇಷ್ಠ ವ್ಯಕ್ತಿಯಾಗಿಸಿ ಯುದ್ಧದಲ್ಲಿ ಜಯಶಾಲಿಯಾಗುವಂತೆ ಮಾಡಿ ನಂತರ ಈ ಸಂದರ್ಭದಿಂದ ಬೇಸತ್ತು ರಾಜ್ಯ ತ್ಯಾಗಮಾಡಿ ಜಿನ ದೀಕ್ಷೆ ಪಡೆದು ಯೋಗಭೋಗಳಲ್ಲಿ ಸಮನ್ವಯದಿಂದ ಉನ್ನತ ಸ್ಥಾನಕ್ಕೆ ಏರಿಸುವ ಪ್ರಸಂಗವನ್ನು ಒಳಗೊಂಡಿದೆ.

ಬಾಹುಬಲಿಯ ಬಗ್ಗೆ ಪಂಪನ ಅಭಿಮಾನವನ್ನು ನೋಡಿದರೆ ಮಲ್ಲಯುದ್ಧ ಸಂದರ್ಭದಲ್ಲಿ ಪೂರ್ವಪುರಾಣದಲ್ಲಿ ಬರುವ ಭಾಗಕ್ಕೆ ಭಿನ್ನವಾಗಿ ತನ್ನ ನಾಯಕನಾದ ಬಾಹುಬಲಿಯ ಔನ್ನತ್ಯವನ್ನು ಹೆಚ್ಚಿಸುವನಂತೆ ಚಕ್ರವು ಭರತೇಶನ ಮಾತನ್ನು ಕೇಳದೆ ಬಾಹುಬಲಿಯನ್ನು ಭೇಧಿಸಲಾರದೆ ಅವನ ಬಲಭಾಗದಲ್ಲಿ ಮಂಕಾಗಿ ನಿರ್ವೀರ್ಯವಾಗಿ ನಿಂತುಕೊಂಡಿತು ಎಂದು ವರ್ಣಿಸುತ್ತಾನೆ. ಬಾಹುಬಲಿಯು ರಾಜ್ಯ ವ್ಯಾಮೋಹದ ವೈರಾಗ್ಯ ತಾಳಿ ತಪಸ್ಸಿಗೆ ತೆರಳಿದಾಗ ಬಾಹುಬಲಿಯ 'ಮಾನಕಷಾಯ' ನಿವಾರಣಾ ಸನ್ನಿವೇಷದಲ್ಲಿ ಪಂಪನು ಚಿತ್ರಿಸಿರುವ ಬಾಹುಬಲಿಯನ್ನು ಹೊರತು 'ಸಿದ್ದ' ನಾನಲ್ಲ ಎಂಬುದು ಸಾರಿ ಹೇಳಿದ್ದಾನೆ.

[1] ಯುದ್ಧ ನಂತರದ ಸಂದರ್ಭದಲ್ಲಿ ಭರತ ಬಾಹಬಲಿರು ಪಶ್ಚಾತಾಪಗೊಂಡು ಆಡುವ ಮಾತುಗಳನ್ನು ನಾಟಕೀಯತೆಯಲ್ಲಿ ಕವಿಯು ವಿವರಿಸಿದ್ದಾನೆ. ಬಾಹುಬಲಿಯಿಂದ ಅಣ್ಣನಲ್ಲ ಕ್ಷಮೆ ಯಾಚಿಸುವ "ನಿನಲ್ಲಿ ನಾನು ಎಸಗಿದ ಅವಿನಯವನು, ಅವಧರಿಸಬೇಡ ಆಗ್ರಹವನ್ನು

ಬೀಡು ನನ್ನನು ಕ್ಷಮಿಸು'' ಎನ್ನುವ ಮಾತು ಹೃದಯ ಕಲಕುವ ವಾತಾವರಣವನ್ನು ಸೃಷ್ಟಿಸಿದೆ.

ಕವಿಯು ತನ್ನ ಕಾವ್ಯದಲ್ಲಿ ಒಂದೆಡೆ ಬಾಹುಬಲಿ ಮತ್ತೊಂದೆಡೆ ಭರತನನ್ನು ಉದಾತ್ತ ಚೇತನವಾಗಿ ಚಿತ್ರಿಸಿದ್ದಾನೆ. ''ಪುರಾಣ ಕಾರ ಉತ್ತಮ ಕವಿಯೂ ಆಗಿದ್ದರಿಂದ ಜೀವನವನ್ನು ಕುರಿತು ರಸಯುಕ್ತ ಚಿತ್ರಗಳು ರೂಪಗೊಳುತ್ತದೆ. ಪಂಪನು ಕಾವ್ಯದಲ್ಲಿ ಆತನ ಬಯಕೆಯಂತೆ ಧರ್ಮ, ಕಾವ್ಯ ಧರ್ಮ ಎರಡನ್ನು ಪ್ರತಿಪಾದಿಸಿದ್ದಾನೆ.

ರತ್ನಾಕರ ವರ್ಣಿಯು ರಚಿಸಿರುವ 'ಭರತೇಶ ವೈಭವ' ಕವಿ ತನ್ನ ನಾಯಕನಾದ ಭರತನ ಪಾತ್ರವನ್ನು ಹಿಂದಿನ ಕಾವ್ಯಗಳಲ್ಲಿ ಇಲ್ಲದ ರೀತಿಯಿಲ್ಲಿ ವೈಭವದ ಉತ್ತುಂಗಕ್ಕೆ ಏರಿಸಿದ್ದಾನೆ. ಈ ಪ್ರಯತ್ನದಲ್ಲಿ ಪಂಪ ಮತ್ತು ಜಿನಸೇನರ ಕಾವ್ಯಗಳಲ್ಲಿ ಪ್ರಸಿದ್ಧ ಪಾತ್ರವಾದ ಬಾಹುಬಲಿಯನ್ನು ಗೌಣವಾಗಿ ನೋಡಿದ್ದಾನೆ. ರತ್ನಾಕರನಿಗೆ ಭರತನ ಮೇಲಿನ ಅಭಿಮಾನದಿಂದ ಬಾಹುಬಲಿಯ ಬಗೆಗಿನ ನಿರುತ್ಸಾಹದಿಂದ ಬಾಹುಬಲಿಯ ಪಾತ್ರ ಕೇವಲ ಭರತನಿಗೆ ಪೋಷಕನಾಗಿ ಚಿತ್ರಿತವಾಗಿರುವುದು ಎದ್ದು ಕಾಣುತ್ತದೆ. ಕವಿಯು ತನ್ನ ಕಾವ್ಯದಲ್ಲಿ ಜೈನ ಧರ್ಮದ ಸಾರವನ್ನು ಸಂಪೂರ್ಣವಾಗಿ ತರುವ ಪ್ರಯತ್ನದಲ್ಲಿ ಪಂಪನ ಕಾವ್ಯದಲ್ಲಿ ಇಬ್ಬರು ನಾಯಕರ ನಡುವೆ ಧರ್ಮಯುದ್ಧವಾಗಿದ್ದರೆ, ರತ್ನಾಕರನು ತನ್ನ ಕಾವ್ಯದಲ್ಲಿ ಯುದ್ಧವನ್ನು ಸಂಪೂರ್ಣವಾಗಿ ನಿವಾರಿಸಲು ಭರತನಿಂದ ಹಿತವಚನದ ಮಾತುಗಳನ್ನು ಆಡಿಸಿ ಬಾಹುಬಲಿಯ ಮನಃ ಸುತ್ತ ಕಾಮ, ಶೃಂಗಾರ, ವಿಲಾಸಗಳ ವಾತಾವರಣವನ್ನು ಸೃಷ್ಟಿಸಿದ್ದಾರೆ.

ರತ್ನಾಕರನ ಕಾವ್ಯದಲ್ಲಿರುವ ''ಬಾಹುಬಲಿ ವಿಲಾಸಿಯೇದಿಟ ವಿರನೂ ಅಹುದು'' ಮೇಲು ತೋರಿಕೆಗೆ ಧರ್ಮ ನಿಷ್ಠೆ ಕಾಣದಿದ್ದರೂ ಕ್ಷತ್ರಿಯೋಚಿತ ವ್ಯವಹಾರದಲ್ಲಿನ ಅವನ ವಿವೇಚನೆಯಲ್ಲಿ ಅವನ ನಿಷ್ಠೆಯ ನಿದರ್ಶಕ ನಿಶ್ಚಿತ ಮನೋಧರ್ಮದ ಸುಳುವು ಕಾಣುತ್ತಿದೆ. ಪರಿಸ್ಥಿತಿಯ ಮಹತ್ವವನ್ನು ಅರಿಯದಷ್ಟು ಅವಿವೇಕಿಯಲ್ಲ. ಸಂದರ್ಭ ಬಂದರೆ ಸುಪ್ತ ಶಕ್ತಿ ಭರತನಿಗಿಂತ ಉದಾತ್ತವಾಗಿ ನಿಲ್ಲುತ್ತದೆ''. [2]ಭರತನ ಧರ್ಮಾನುರಾಗ ನಿತ್ಯ ಸಾಣೆ ಹಿಡಿದು ಹದಗೊಳಿಸಿದ ಅಲುಗಿನಂತೆ ಹರಿತವಾಗಿದೆ. ಬಾಹುಬಲಿಯ ಖಡ್ಗಕ್ಕೆ ತುಕ್ಕು ಹಿಡಿದಿರಬಹುದು ಅದರೂ ಬಹುಕಾಲ ಬಳಕೆಯಾಗದೆ ಒರೆಯಲ್ಲಿ ಮೂಡಿದೆ. ಖಡ್ಗ ಹಿರಿದು ಅಲುಗನ್ನು ಒಮ್ಮೆ ಪರೀಕ್ಷಿಸಲು ಯಾರೂ ಪ್ರಯತ್ನಿಸಿಲ್ಲ. ಉದತ್ತಾವಾದ ಸತ್ಯ ಧರ್ಮ ತ್ಯಾಗಗಳನ್ನು ಗುರುತಿಸಲಾರದಷ್ಟು ಸಾಧನೆಯ ಮೂಲಕ ಜಾಗೃತವಾಗುವ ವೈರಾಗ್ಯಕ್ಕೂ ಸಯಂ ಜಾಗೃತವಾಗುವ ವಿರಕ್ತಿಗೂ ವಿಶೇಷ ವ್ಯತ್ಯಾಸವಿದೆ. ವಿರಕ್ತಿ ಎಂಬುದು ಸಾಧಾರಣ ಮಟ್ಟದ

ಮನಷ್ಯನನ್ನು ಮೀರಿದ ಅದ್ಭುತ ಶಕ್ತಿ ಎಂಬುದು ಬಾಹುಬಲಿಯ ಬಗೆಗಿನ ಸಾಮರ್ಥ್ಯದ ಅರಿವು ರತ್ನಾಕರನ ಕಾವ್ಯದಲ್ಲಿ ಕಾಣುವುದಿಲ್ಲ ಎಂಬುದು ಟಿ. ಎನ್. ಮಹದೇವಯ್ಯನವರ ಅಭಿಪ್ರಾಯ..

ರತ್ನಾಕರನು ತನ್ನ ಕಾವ್ಯದಲ್ಲಿ ಬಾಹುಬಲಿಯ ಪಾತ್ರವನ್ನು ಅತ್ಯಂತ ಸರಳವಾಗಿ ಕುಬ್ಜವಾಗಿ ಮೂಲ ಕೃತಿಗೆ ವಿರುದ್ಧವಾಗಿ ಚಿತ್ರಿಸಿರುವುದು ಬಾಹುಬಲಿಯ ಪಾತ್ರಕ್ಕೆ ಪೂರಕವಲ್ಲದ ರೀತಿ ಕಾಣುತ್ತದೆ.

ಶ್ರೇಷ್ಠ ಜೈನ ಕೃತಿಗಳಲ್ಲಿ ಬಂದಂತಹ ಜೈನ ಧರ್ಮದ ಪುರಾಣ ಪುಣ್ಯ ಪುರುಷನಾದ ಬಾಹುಬಲಿಯನ್ನು ಆಧುನಿಕ ಕವಿಗಳು ತಮ್ಮ ಕವಿತೆಗಳಲ್ಲಿ ಶಾಸನ ಕಾವ್ಯಗಳಲ್ಲಿ ತಮ್ಮ ಕಲ್ಪನಾ ಶಕ್ತಿ ಬಾಹುಬಲಿಯ ಮೌನತ್ಯೆ, ಧ್ಯಾನ, ಪರಿಹಾಸ್ಯ ಹಾಗೂ ನಿರ್ವಾಣದ ಒಳಗುಟ್ಟನ್ನು ತಮ್ಮ ಕವಿತೆಗಳಲ್ಲಿ ತಿಳಿಸಿದ್ದಾರೆ.

ಒಟ್ಟಾರೆಯಾಗಿ ಬಾಹುಬಲಿ ಜೈನ ಧರ್ಮದ ಮಹಾ ಪುರುಷನಾಗಿದ್ದಾನೆ ಹಾಗೂ ವಿಶ್ವ ವಿಖ್ಯಾತ ಬಾಹುಬಲಿ ಶಿಲ್ಪ ಪ್ರಾಚೀನ ಪುರಾಣ ಕಾವ್ಯಗಳಿಂದ, ಪಂಪ ರತ್ನಾಕರ ಹಿಡಿದು ಸಂಪ್ರದಾಯಗಳ ಅನೇಕ ವಿಶೇಷತೆಗಳನ್ನು ಒಳಗೊಂಡಂತೆ ಕಾವ್ಯಗಳು ರಚಿತವಾಗಿದೆ. ಆಧುನಿಕ ಕನ್ನಡದ ಕವಿಗಳ ಕವಿತೆಗಳಲ್ಲಿಯೂ ಕಥಾವಸ್ತುವಾಗಿ ಮೇರೆದಿದ್ದಾನೆ ಹಾಗೂ ಮುಂದೆಯೂ ಮರೆಯುತ್ತಾನೆ.

ಅಡಿ ಟಿಪ್ಪಣಿ

1. ಎಲ್. ಗುಂಡಪ್ಪ ಆದಿಪುರಾಣ ಸಂಗ್ರಹ ಕೆ. ವಿ. ಪುಟ್ಟಪ್ಪ ಮುನ್ನುಡಿ

   ಪುಟ iv

   - ಪ್ರ. ಮೈಸೂರು ವಿಶ್ವವಿದ್ಯಾಲಯ ಕನ್ನಡ ಗ್ರಂಥ ಮಾಲೆ - 1956

2. ಟಿ. ಎನ್. ಮಹದೇವಯ್ಯ ‘ಭರತೇಶ ವೈಭವ ಒಂದು ವಿಮರ್ಶೆ’

   ಪುಟ 65-66

   - ಟಿ. ಎನ್. ಎಂ. ಸ್ಮಾರಕ, ಗ್ರಂಥಮಾಲೆ, ತುಮಕೂರು - 1975

ಅನುಬಂಧ :

1. ತೀರ್ಥಂಕರ :

ಕರ್ಮದ ಕಟ್ಟನ್ನು ಹರಿದು ಸಂಸಾರವನ್ನು ದಾಟಿ ಕೈವಲ್ಯ ಪಡೆದ ಮುಕ್ತ ಜೀವರಿಗೆ ಜಿನರು (ಗೆದ್ದವರು) ಎನ್ನುತ್ತಾರೆ. ತತ್ವಸ್ವರೂಪವನ್ನು ಅರಿತ ಜಿನರಲ್ಲಿ ಕೆಲವರು ತಾವು ಕಂಡ ತತ್ವವನ್ನು ಲೋಕಾನುಗ್ರಹ ಬುದ್ಧಿಯಿಂದ ಸಮಸ್ತ ಜೀವಿಗಳಿಗೂ ಉಪದೇಶಿಸಿ ತೀರ್ಥಂಕರಾದರು. ತೀರ್ಥಂಕರರು ಎಂದರೆ ಸಂಸಾರವನ್ನು ದಾಟಲು ಹಾಯ್ಗಡ ಮಾಡಿದವರು. ಈ ಜಿನರ ಮತವೇ ಜೈನ ಮತ. ಜಿನರು ಉಪದೇಶಿಸಿದ ಧರ್ಮವೇ ಜೈನಧರ್ಮ.

2. ಕೇವಲ ಜ್ಞಾನ :

ಪರಿಶುದ್ಧವಾದ ಪರಿಪೂರ್ಣವಾದ ಮತ್ತು ಸರ್ವವ್ಯಾಪಿಯಾದ ಅನಂತಜ್ಞಾನವೇ ಕೇವಲ ಜ್ಞಾನ. ಇದನ್ನು ಕೇವಲ ಬೋಧ ಎಂದೂ ಕರೆಯುತ್ತಾರೆ. ಇದಕ್ಕೆ ಹೊರತಾದ ವಿಷಯವಿಲ್ಲ. ಇದರಲ್ಲಿ ಸ್ವಲ್ಪವೂ ಕುಂದು ಕೊರತೆಯಿಲ್ಲ. ಕರ್ಮಬಂಧನವನ್ನು ಕಳಚಿ ಬಿಸುಟ ಮುಕ್ತ ಜೀವಕ್ಕೆ ಸಹಜವಾಗಿರುವುದು ಈ ಕೇವಲಜ್ಞಾನ.

3. ಚಕ್ರರತ್ನ :

ಚಕ್ರವರ್ತಿಯಾದ ಪುಣ್ಯವಂತನಾದ ರಾಜನ ಆಯುಧಾಗಾರದಲ್ಲಿ ಚಕ್ರರತ್ನ ಹುಟ್ಟುತ್ತದೆ. ಈ ಚಕ್ರರತ್ನಕ್ಕೆ ಪೂಜೆ ಮಾಡಿ ಚತ್ರವರ್ತಿ ಸಕಲ ಸೈನ್ಯದೊಂದಿಗೆ ದಿಗ್ವಿಜಯಕ್ಕೆ ಹೊರಡುತ್ತಾನೆ. ಚಕ್ರರತ್ನ ದಾರಿತೋರುತ್ತಾ ಮುಂದೆ ನಡೆಯುತ್ತದೆ.

4. ಪ್ರತಿಮಾಯೋಗ :

ಜಿನ ಮುನಿಗಳು ತಪಸ್ಸು ಮಾಡುವಾಗ ಕೈಗೊಳ್ಳುವ ಆಸನಭಂಗಿ. ಇದನ್ನು ಖಡ್ಗಾಸನವೆಂದೂ ಕಾರ್ಯೋತ್ಸರ್ಗವೆಂದೂ ಕರೆಯುತ್ತಾರೆ. ಬಾಹುಬಲಿಯು ತಪಸ್ಸಿಗೆ ನಿಂತಿದ್ದು ಈ ಭಂಗಿಯಲ್ಲೇ ಗೊಮ್ಮಟ ಶಿಲ್ಪಗಳನ್ನು ಶಿಲ್ಪಿಗಳು ಕೆತ್ತಿರುವುದೂ ಈ ಭಂಗಿಯಲ್ಲೇ.

5. ಕಷಾಯ :

ಜಿನಮುನಿಗಳಿಗೆ ಕೇವಲ ಜ್ಞಾನ ಉಂಟಾಗದಂತೆ ಮಾಡುವ ಮಾನಸಿಕ ಸ್ಥಿತಿ. ಕಷಾಯಗಳಲ್ಲಿ ನಾಲ್ಕು ಬಗೆ. ಕ್ರೋಧ ಕಷಾಯ, ಮಾನ ಕಷಾಯ, ಮಾಯಾ ಕಷಾಯ, ಲೋಭ ಕಷಾಯ.

ಬಾಹುಬಲಿಯು ತಪಸ್ಸು ಮಾಡುತ್ತಿರುವಾಗ ಮಾನ ಕಷಾಯದ ದೋಷ ಅವನನ್ನು ಕಾಡಿತು. (ಮಾನ ಎಂದರೆ ಇಲ್ಲಿ ನಾನು ನನ್ನದು ಎಂಬ ಅಭಿಮಾನ)

6. ಸಲ್ಲೇಖನ ವ್ರತ :

ಜೈನ ಧರ್ಮೀಯರು ಧಾರ್ಮಿಕ ಸಮ್ಮತಿಯೊಂದಿಗೆ, ಅನ್ನ ಪಾನಗಳನ್ನು ತ್ಯಜಿಸಿ ವ್ರತ ತೊಟ್ಟು ಜೀವತ್ಯಾಗ ಮಾಡುವುದು.

7. ಜಿನ :

ಕರ್ಮದ ಕಟ್ಟನ್ನು ಹರಿದು ಸಂಸಾರವನ್ನು ದಾಟಿ ಕೈವಲ್ಯ ಪಡೆದ ಮುಕ್ತ ಜೀವರಿಗೆ ಜಿನರು (ಗೆದ್ದವರು) ಎಂದು ಹೆಸರು.

8. ಕುಕ್ಕಟ ಸರ್ಪ :

ಪಕ್ಷಿಯ ದೇಹ ಮತ್ತು ಹಾವಿನ ತಲೆಯನ್ನು ಹೊಂದಿರುವ ಘಾಟಕ ಪ್ರಾಣಿಗಳು. ಗೊಮ್ಮಟಸ್ವಾಮಿಯ ಕಾಲಿನ ಬಳಿ ಸಾಮಾನ್ಯವಾಗಿ ಈ ಪ್ರಾಣಿಗಳನ್ನು ಕೆತ್ತಲಾಗುವುದು.

9. ಶಲಾಕಾ ಪುರುಷರು :

ಜೈನಧರ್ಮದ ಮಹಾಪುರುಷರಲ್ಲಿ ಪುರುಷರನ್ನು ಶಲಾಕಾ ಪುರುಷರು ಎನ್ನುತ್ತಾರೆ. ಇವರು ಅರವತ್ತೂರು ಮಂದಿ. ಇಪ್ಪತ್ತಾಲ್ಕು ಜನ ತೀರ್ಥಂಕರರು; ಹನ್ನೆರಡು ಜನ ಚಕ್ರವರ್ತಿಗಳು; ಒಂಭತ್ತು ಜನ ಬಲದೇವರು; ಒಂಭತ್ತು ಜನ ವಾಸುದೇವರು, ಒಂಭತ್ತು ಜನ ಪ್ರತಿವಾಸುದೇವರು.

10. ಕೇವಲಿ :

ತಪಸ್ಸಿನಿಂದ ಘಾತಿಕರ್ಮಗಳನ್ನೆಲ್ಲಾ ನಾಶಮಾಡಿ ಕೇವಲ ಜ್ಞಾನ ಪಡೆದು ಜೀನಮುಕ್ತರಾಗುವವರಿಗೆ ಕೇವಲಿಗಳು ಎಂದು ಹೆಸರು.

ಆಕರ ಗ್ರಂಥ ಸೂಚಿ

1. **ಗುಂಡಪ್ಪ ಎಲ್.**
ಗ್ರ : ಆದಿಪುರಾಣ ಸಂಗ್ರಹ
ಪ್ರ : ಮೈಸೂರ ವಿ.ವಿ. ಕನ್ನಡ ಗ್ರಂಥ ಮಾಲೆ 29 - 1956

2. **ನರಸಿಂಹಶಾಸ್ತ್ರಿ ಕೆ. ಎಲ್.**
ಗ್ರ : ಆದಿಪುರಾಣ (ಗದ್ಯಾನುವಾದ)
ಪ್ರ : ಕನ್ನಡ ಸಾಹಿತ್ಯ ಪರಿಷತ್ - 1996

3. **ಡಾ. ಪಾಟೀಲ್ ಎಸ್. ಪಿ.**
ಗ್ರ : ಚಾವುಂಡರಾಯ ಪುರಾಣ ಒಂದು ಅಧ್ಯಯನ
ಪ್ರ : ವೈಶಾಲಿ ಪ್ರಕಾಶನ - ಧಾರವಾಡ - 1993

4. **ಪುಟ್ಟಪ್ಪ ಕೆ.ವಿ.**
ಗ್ರ : ಭರತೇಶ ವೈಭವ ಸಂಗ್ರಹ
ಪ್ರ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ - 1985

5. **ಮಹೀಶವಾಡಿ ಬಿ. ವಿ.**
ಗ್ರ : ಜೈನ ವಾಙ್ಮಯ ಪರಿಶೋಧನೆ
ಪ್ರ : ಜ್ಞಾನ ವಿಕಾಸ ಪ್ರಕಾಶನ, ಧಾರವಾಡ - 1977

6. **ಮಹದೇವಯ್ಯ ಟಿ. ಎಸ್.**
ಗ್ರ : ಭರತೇಶ ವೈಭವ ಒಂದು ವಿಮರ್ಶೆ
ಪ್ರ : ಟಿ. ಎಸ್. ಎಂ. ಸ್ಮಾರಕ ಗ್ರಂಥಮಾಲೆ, ತುಮಕೂರು - 1975

7. **ವಸಂತರಾಜ್ ಎಂ. ಡಿ.**
ಗ್ರ : ಜೈನ ಇತಿಹಾಸ ದೀಪಿಕೆ
ಪ್ರ : ವ. ರಾ. ಪ್ರಕಾಶನ, ಮೈಸೂರು - 1997

8. **ಡಾ. ವೆಂಕಟೇಶ ಮೂರ್ತಿ ಹೆಚ್. ಎಸ್.**
ಗ್ರ : ಬಾಹುಬಲಿ
ಪ್ರ : ಸ್ವಪ್ನ ಬುಕ್ ಹೌಸ್, ಬೆಂಗಳೂರು - 2007

9. **ವೆಂಕಟಚಲಾಶಾಸ್ತ್ರೀ ಟಿ. ವಿ.**
ಗ್ರ : ಪಂಪ
ಪ್ರ : ಸಾಹಿತ್ಯ ಅಕಾಡೆಮಿ - 1996

10. **ಶಾಮರಾವ ಟಿ. ಎಸ್.**
ಗ್ರ : ಭರತೇಶ ವೈಭವ ಸಂಗ್ರಹ
ಪ್ರ : ಮೈಸೂರು ವಿ.ವಿ. - 1972

11. **ಶಾಮರಾಯ ತ. ಸು.**
ಗ್ರ : ಭರತೇಶ ವೈಭವ
ಪ್ರ : ತ.ವೆಂ ಸ್ಮಾರಕ ಗ್ರಂಥ ಮಾಲೆ ಮೈಸೂರ - 1972

12. **ಶ್ರೀನಿವಾಸ ಮೂರ್ತಿ ಎಂ. ವಿ.**
ಗ್ರ : ಭರತೇಶ ವೈಭವ ಸಾರ ಸಂಗ್ರಹ
ಪ್ರ : ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 1981

13. **ಶಿವರುದ್ರಪ್ಪ ಜಿ. ಎಸ್.**
ಗ್ರ : ಪಂಪ ಒಂದು ಅಧ್ಯಯನ
ಪ್ರ : ಬೆಂಗಳೂರು ವಿ. ವಿ. - 1973

14. **ಶಿವರುದ್ರಪ್ಪ ಜಿ. ಎಸ್.**
ಗ್ರ : ಶ್ರವಣ ಬೆಳಗೂಳ ಒಂದು ಸಮೀಕ್ಷೆ
ಪ್ರ : ಬೆಂಗಳೂರು ವಿ.ವಿ. - 1983

15. **ಡಾ. ಸರಸ್ವತಿ ವಿಜಯಕುಮಾರ**
ಗ್ರ : ಕನ್ನಡದ ಆದೀತೀರ್ಥಂಕರರ ಚರಿತ್ರೆ
ಪ್ರ : ಸವಿ ಪ್ರಕಾಶನ, ಮೈಸೂರು - 1994

16. **ಸೂರ್ಯನಾಥ ಕಾಮತ್**
ಗ್ರ : ಗೊಮ್ಮಟ
ಪ್ರ : ಬೆಂಗಳೂರು ವಿ.ವಿ. ಬೆಂಗಳೂರು - 1999

17. **ಕೆ.ವಿ. ಸುಬ್ಬಣ್ಣ ನೆನಪಿನ 'ಮೊದಲ ಓದು' ಪುಸ್ತಕ ಮಾಲೆ**
ಗ್ರ : ಪಂಪನ ಆದಿಪುರಾಣ ಪ್ರವೇಶ
ಪ್ರ : ಅಕ್ಷರ ಪ್ರಕಾಶನ - 2006

18. **ಪ್ರೋ. ಟಿ. ವಿ. ವೆಂಕಟಾಚಲ ಶಾಸ್ತ್ರೀ**
ಗ್ರ : ಪಂಪ ಸಂಪುಟ
ಪ್ರ : ಕನ್ನಡ ವಿಶ್ವವಿದ್ಯಾಲಯ, ಹಂಪಿ - 2006

19. **ವಸಿಷ್ಠ**
ಗ್ರ : ಪಂಪನ ಆದಿಪುರಾಣ
ಪ್ರ : ಚೇತನ್ ಬುಕ್ ಹೌಸ್ - 1997

20. **ಹಂಪ ನಾಗರಾಜಯ್ಯ**
ಗ್ರ : ಗೊಮ್ಮಟ ಬಾಹುಬಲಿ
ಪ್ರ : ಬಾಪ್ಕೊ, ಬೆಂಗಳೂರು - 1981